(11) ಕರ್ನಾಟಕದ ಮಾಜಿ ಮಹಾರಾಜರಿಗೆ ಸೇರಿದ ಅರಮನೆಗಳ ಮತ್ತು ಇತರ ಆಸ್ತಿಗಳ ಬಗ್ಗೆ

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೇ, ಕರ್ನಾಟಕದಲ್ಲಿ ಮಾಜಿ ರಾಜರಿಗೆ ಸೇರಿದ್ದ ಅಥವಾ ಸೇರಿರುವ ಅರಮನೆ ಕರ್ನಾಟಕದಲ್ಲಿ ಬಹಳ ಪ್ರಮುಖವಾದ ಪ್ರವಾಸಿ ಕೇಂದ್ರ. ಇದು ಯಾರ ಸ್ವತ್ತು ? ಇದನ್ನು ಸರ್ಕಾರದವರು ಏನಾದರೂ ಸ್ವಾಧೀನಪಡಿಸಿಕೊಂಡಿದ್ದಾರೆಯೇ ? ಸ್ವಾಧೀನಪಡಿಸಿಕೊಳ್ಳಲಿದೆಯೇ ? ಎಂಬುದು ಸ್ಪಷ್ಟವಿಲ್ಲ. ಶ್ರೀಯುತ ಶ್ರೀಕಂಠದತ್ತ ರಾಜರವರು ಈ ಅರಮನೆ ತಮಗೆ ಸೇರಿದೆಯೆಂದು ಪತ್ರಿಕಾ ಪ್ರಕಟಣೆ ಕೊಟ್ಟು ಇನ್ನು ಈ ಸಮಸ್ಯೆಯನ್ನು ನಿಗೂಢಗೊಳಿಸಿದರು.

ಈ ನಿಗೂಢತೆಯನ್ನು ಬಯಲು ಮಾಡುವುದು ಅವಶ್ಯ. ಸಮಸ್ಯೆಗಳು ಸ್ಪಷ್ಟತೆಗೆ ಅವಕಾಶ ಮಾಡಿ ಕೊಡುವಂತಹ ಸಮಸ್ಯೆಗಳುದ್ಭವ ಮಾಡುವ ಅವಕಾಶಗಳು ಸೃಷ್ಟಿಯಾಗಿವೆ. ದಿನಪತ್ರಿಕೆಗಳು ದಿನಂಪ್ರತಿ ಈ ಅವ್ಯವಹಾರಗಳನ್ನು ಬಯಲಿಗೆ ಎಳೆದು ಅನೇಕ ಸಮಸ್ಯೆಗಳನ್ನು ಸೃಷ್ಟಿಸಿರುವಂತೆ ಈ ಒಂದು ಸಮಸ್ಯೆಯ ಜಟಿಲತೆಯನ್ನು ತಪ್ಪಿಸಬಹುದು. ಇದು ಅವಶ್ಯಕವಾದುದು. ಈ ಬಗ್ಗೆ ನಿಶ್ಚಿತ ನಿಲುವು ತಿಳಿಯುವುದು ಅವಶ್ಯಕವಾದುದರಿಂದ ಈ ಜರೂರು ಸಾರ್ವಜನಿಕ ಮಹತ್ವದ ಸಮಸ್ಯೆಯ ಬಗ್ಗೆ ಸದನದ ಗಮನವನ್ನು ಸೆಳೆಯಲು ಅನುಮತಿ ಕೋರುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಇದರಲ್ಲಿ ಅರಮನೆ ಎಂದು ಹೇಳಿದ್ದಾರೆ, ಅದು ಮೈಸೂರು ಅರಮನೆಯೋ, ಬೆಂಗಳೂರು ಅರಮನೆಯೋ, ಇದರಲ್ಲಿ ಸ್ಪಷ್ಟ ಇಲ್ಲ. ಈ ಅರಮನೆಗಳ ವಿಚಾರದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಉತ್ತರ ಕೊಡುವುದಕ್ಕೆ ಪ್ರಯತ್ನಪಡುತ್ತೇನೆ.

ವಿತ್ತೀಯ ಕಲಾಪಗಳು

ಅಭಿಯಾಚನಾ ಕ್ರಮಾಂಕ, 1. 1985-86 ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ ಭೂಸಾರ ಮತ್ತು ಜಲರಕ್ಷಣೆ ವ್ಯವಸಾಯ (ತೋಟಗಾರಿಕೆಯು ಮತ್ತು ಬರಗಾಲಕ್ಕೆ ಗುರಿಯಾದ ಪ್ರದೇಶಗಳ ಯೋಜನೆ ಹೊರತು)

ಶ್ರೀ ಎಂ. ಪಿ. ಪ್ರಕಾಶ್ (ವ್ಯವಸಾಯ ರಾಜ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಭೂಸಾರ ಮತ್ತು ಜಲರಕ್ಷಣೆ ವ್ಯವಸಾಯಕ್ಕೆ (ತೋಟಗಾರಿಕೆ ಮತ್ತು ಬರಗಾಲಕ್ಕೆ ಗುರಿಯಾದ ಪ್ರದೇಶಗಳ ಯೋಜನೆ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೫೦,೫೮,೫೮,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೫.೩೧,೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರ್ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಭಿಯಾಚನಾ ಕ್ರಮಾಂಕ, 3– ಪಶುಸಂಗೋಪನೆ ಮತ್ತು ಡೈರಿ ಅಭಿವೃದ್ಧಿ

ಶ್ರೀ ಸಿದ್ದರಾಮಯ್ಯ (ಪಶುಸಂಗೋಪನಾ ಮತ್ತು ಪಶುವೈದ್ಯ ಸೇವೆಗಳ ರಾಜ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ. ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪಶುಸಂಗೋಪನಾ ಮತ್ತು ಡೈರಿ ಅಭಿವೃದ್ಧಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೬.೬೫,೫೩,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೩,೦೦,೦೦.೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರ್ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು
ಅಭಿಯಾಚನಾ ಕ್ರಮಾಂಕ, 2 ತೋಟಗಾರಿಕೆ

ಶ್ರೀ ಬಿ. ಸೋಮಶೇಖರ್ (ತೋಟಗಾರಿಕೆ ರಾಜ್ಯ ಮಂತ್ರಿ).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ತೋಟಗಾರಿಕೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೦,೯೯,೫೯.೦೦೦ ರೂಪಾಯಿಂಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರ್ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಈ ಬೇಡಿಕೆಗೆ ಈ ದಿವಸದ ಚರ್ಚೆಯಲ್ಲಿ ಅಂಗೀಕೃತವಾಗಲು ೬ ಗಂಟೆಗಳ ಕಾಲವನ್ನು ನಿಗದಿ ಮಾಡಲಾಗಿದೆ.

೧)	ಕಾಂಗ್ರೆಸ್ (ಐ)	—	೧೦೫ ನಿಮಿಷ
೨)	ಸಿ. ಪಿ. ಐ.	—	೨೦ ನಿಮಿಷ
೩)	ಸಿ. ಪಿ. ಐ. (ಎಂ)	—	೧೦ ನಿಮಿಷ
೪)	ಬಿ. ಜೆ. ಪಿ.	—	೧೦ ನಿಮಿಷ
೫)	ಇಂಡಿಪೆಂಡೆಂಟ್	—	೨೦ ನಿಮಿಷ
೬)	ಜನತಾ	—	೧೯೦ ನಿಮಿಷ (ಮಂತ್ರಿಗಳ ಉತ್ತರವೂ ಸೇರಿದಂತೆ)

(ಈಗ ಮೊದಲನೆಯದಾಗಿ ಮಾನ್ಯ ಕೆ. ಹೆಚ್. ಪಾಟೀಲರು ಮಾತನಾಡಲಿ.)

೩-೩೦ ಪಿ.ಎಂ.

† ಶ್ರೀ ಕೆ.ಎಚ್. ಪಾಟೀಲ್ (ಗದಗ್).—ಮಾನ್ಯ ಸಭಾಧ್ಯಕ್ಷರೇ. ವ್ಯವಸಾಯ, ತೋಟಗಾರಿಕೆ ಮತ್ತು ಹೈನುಗಾರಿಕೆ ಇವು ಮೂರು ಕೂಡ ಮಹತ್ವದ ಖಾತೆಗಳು. ಆದರೆ, ದುರ್ದೈವದಿಂದ ಈ ಮೂರು ಖಾತೆಗಳಿಗೆ ಏನು ಪ್ರಾಮುಖ್ಯತೆ ಕೊಡಬೇಕಾಗಿತ್ತೋ ಅದು ಕೊಟ್ಟಿಲ್ಲ. ಇದರ ಸಲುವಾಗಿ ಈ ಮಂತ್ರಿವರ್ಯರ ಬೇಡಿಕೆಗಳನ್ನು ಪ್ರಬಲವಾಗಿ ವಿರೋಧ ಮಾಡದೆ ಗತ್ಯಂತರ ಇಲ್ಲವೆನ್ನುವ ಪ್ರಸಂಗ ಬಂದಿದೆ. ಇವತ್ತಿನ ದಿವಸ ನೂರಕ್ಕೆ ಎಂಬತ್ತರಷ್ಟು ಜನ ವ್ಯವಸಾಯವನ್ನು ಅವಲಂಬಿಸಿರತಕ್ಕಂಥ ನಮ್ಮ ಕರ್ನಾಟಕ ರಾಜ್ಯದಲ್ಲಿ ವ್ಯವಸಾಯಕ್ಕೆ ಅಧಿಕವಾದ ಪ್ರಾಶಸ್ತ್ಯವನ್ನು ಕೊಡಬೇಕಾಗುತ್ತದೆ. ಈ ದಿಸೆಯಲ್ಲಿ ಕೆಲವು ಸಲಹೆಗಳನ್ನು ಮಾನ್ಯ ಮಂತ್ರಿವರ್ಯರಿಗೆ ಕೊಡಲಿಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಸಭಾಧ್ಯಕ್ಷರೇ, ಇವತ್ತು ದಾಖಲೆಗಳ ಪ್ರಕಾರ ನೋಡಿದರೆ, ಮಾನ್ಯ ಬೊಮ್ಮಾಯಿಯವರು ಸರಿಯಾಗಿದೆ ಎಂದು ಹೇಳುವುದಾದರೆ, ಒಟ್ಟು ೧ ಕೋಟಿ ೯೦ ಲಕ್ಷ ೪೦ ಸಾವಿರ ೮೩೬ ಹೆಕ್ಟೇರ್‌ನಷ್ಟು ಭೂಮಿ ಮಾತ್ರ ನಮ್ಮಲ್ಲಿದೆ.

(ಡಾ. ಬಿ.ಎಂ. ತಿಪ್ಪೇಸ್ವಾಮಿಯವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದ್ದರು)

ಇದರಲ್ಲಿ ಅರಣ್ಯ ಪ್ರದೇಶ ಅಂತ ೩ ಲಕ್ಷ ೭೯ ಸಾವಿರ ೪೮೬ ಹೆಕ್ಟೇರ್ ಭಾಗವನ್ನು ತೋರಿಸಿದ್ದಾರೆ. ಆದರೆ ನಾನು ಬಹಳವಾಗಿ ವಿಚಾರ ಮಾಡಿನೋಡಿದೆ. ಎಲ್ಲೆಲ್ಲಿ ಬಂಜರು ಭೂಮಿ ಇದೆ, ಎಲ್ಲವೂ ಅರಣ್ಯವಾಗಿ ತೆಗೆದುಕೊಂಡರೆ, ಅಲ್ಲಲ್ಲಿ ಇರುವ ಗುಡ್ಡಗಾಡು ಪ್ರದೇಶವನ್ನೂ ಅರಣ್ಯವಾಗಿ ತೆಗೆದುಕೊಂಡರೆ ಈ ಅರಣ್ಯ ಪ್ರದೇಶ ಇದೆ. ಇವತ್ತು ತಾವು ಒಪ್ಪುವಂತೆ ನ್ಯಾಷನಲ್ ಅಗ್ರಿಕಲ್ಚರಲ್ ಪಾಲಿಸಿ ಒಳಗೆ ನೂರಕ್ಕೆ ಮೂವತ್ತೈದರಷ್ಟು ಅರಣ್ಯ ಇರಬೇಕೂಂತ ಇದೆ. ಆದರೆ ತಪ್ಪು ನಿಮ್ಮದಲ್ಲ. ತಪ್ಪು ಯಾರದೇ ಇರಲಿ, ವಾಸ್ತವ ಸ್ಥಿತಿ ನೋಡಿದರೆ ಕರ್ನಾಟಕದಲ್ಲಿ ನೂರಕ್ಕೆ ೩೫ರಷ್ಟು ಅಲ್ಲ, ಅದಕ್ಕಿಂತಲೂ ಹೆಚ್ಚು ಅರಣ್ಯ ಇರಬೇಕಾಗಿತ್ತು. ಏಕೆಂದರೆ ಕರ್ನಾಟಕ ರಾಜ್ಯದಲ್ಲಿ ನೈಸರ್ಗಿಕ ಸಂಪತ್ತು ಹೆಚ್ಚಿದೆ, ಆದ್ದರಿಂದ ಹೆಚ್ಚು ಅರಣ್ಯ ಇರಬೇಕಾದದ್ದು ಸಹಜವಾದುದು. ಆದರೆ ಅಧಿಕಾರಸ್ಥರು ೨೩ ಸಾವಿರ ಅಥವಾ ೨೪ ಸಾವಿರ ಇದೆ ಅಂತ ಹೇಳುತ್ತಿದ್ದಾರೆ. ಆದರೆ ವಾಸ್ತವವಾಗಿ ೧೮ ಸಾವಿರಕ್ಕಿಂತಲೂ ಕಡಿಮೆ

ಇದೆ. ಇಷ್ಟು ಕಡಿಮೆ ಅರಣ್ಯ ಪ್ರದೇಶ ಇರುವುದಾದರೆ ಇನ್ನು ಮಳೆ ಬರುವುದಾದರೂ ಹೇಗೆ ? ತಂತ್ರಜ್ಞಾನ ಬಳಸಿಕೊಂಡು ಮಳೆ ತರಬಹುದು ಎಂದು ಇವತ್ತು ಅನೇಕ ಹೊಸ ಹೊಸ ತಂತ್ರಜ್ಞಾನಗಳನ್ನು ಕಂಡುಹಿಡಿದಿದ್ದಾರೆ. ಮೊನ್ನೆ ಅಗ್ರಿಕಲ್ಚರಲ್ ಸೈನ್ ಫೌಂಡೇಷನ್‌ನ ಮೂರು ಜನ ಮಳೆಗಾಲದಲ್ಲಿ ಮಾನ್‌ಸೂನ್‌ನ್ನು ಹೇಗೆ ತಡೆಗಟ್ಟಬಹುದು ಎಂದು ಶಿಫಾರಸ್ಸು ಮಾಡಿದ್ದಾರೆ. ಟ್ಯಾಪರ್ ನಮೂನೆಯಲ್ಲಿ ಕಾಡನ್ನು ಕಟ್ ಮಾಡಿದರೆ ಮಾತ್ರ ಬಿಜಾಪುರ ಜಿಲ್ಲೆಯಲ್ಲಿ ಮಳೆ ತರಲಿಕ್ಕೆ ಸಾಧ್ಯ. ಇದು ಸರಿಯೋ ಇಲ್ಲವೋ ನನಗೆ ಗೊತ್ತಿಲ್ಲ. ಈ ದಿಶೆಯಲ್ಲಿ ಶ್ರೀ ಸಂಡೂರ್ ಅಂಡ್ ಶ್ರೀ ರಾವ್ ಎನ್ನುವ ಇಬ್ಬರು ರಿಪೋರ್ಟ್ ಕೊಟ್ಟಿದ್ದಾರೆ. ಅದನ್ನು ಬೇಕಾದರೆ ಕಳಿಸಿಕೊಡುತ್ತೇನೆ. ಬೇಕಾದರೆ ಪರಿಶೀಲನೆ ಮಾಡಿ ನೋಡೋಣ. ಈ ಎಲ್ಲಾ ದೃಷ್ಟಿಯಿಂದ ಭೂಮಿ ಎಲ್ಲರಿಗೂ ಬೇಕು, ಹಿಡುವಳಿ ಹೆಚ್ಚಾಗಬೇಕು ಎಂದು ಹೇಳುತ್ತೇವೆ. ಎಲ್ಲರಿಗೂ ಭೂಮಿಯನ್ನು ಕೊಡಬೇಕು ಎಂದು ಮನಸ್ಸು ಮಾಡಿದರೆ ಪ್ರತಿಯೊಬ್ಬರಿಗೂ ಅರ್ಧ ಎಕರೆ ಕೂಡ ಸಿಗುವುದಿಲ್ಲ. ನಮ್ಮ ಅಂಕಿ ಅಂಶಗಳ ಪ್ರಕಾರ ಸಾಗುವಳಿಗೆ ಸಾಧ್ಯವಿರುವಂಥ ಭೂಮಿ ಎಷ್ಟು ಬೇಕು ಎಂದರೆ ೧ ಕೋಟಿ ೩೫ ಲಕ್ಷ ೬೦ ಸಾವಿರ ಹೆಕ್ಟೇರ್‌ನಷ್ಟು. ಒಬ್ಬರಿಗೆ ಕನಿಷ್ಟ ಎರಡೂವರೆ ಎಕರೆಯಷ್ಟಾದರೂ ಬೇಕು ಎಂದು ಲೆಕ್ಕಹಾಕಿದರೆ ಒಟ್ಟು ಎರಡೂವರೆ ಕೋಟಿಯಾಗುತ್ತದೆ. ೪ ಕೋಟಿ ಜನಸಂಖ್ಯೆ ಇರತಕ್ಕಂಥ ಕರ್ನಾಟಕ ರಾಜ್ಯದಲ್ಲಿ ಸಾಗುವಳಿ ಮಾಡತಕ್ಕ ಭೂಮಿ ಎರಡೂವರೆ ಕೋಟಿ ಎಕರೆ ಇದ್ದರೂ, ಒಬ್ಬರಿಗೆ ಅರ್ಧ ಎಕರೆ ಕೂಡ ಸಿಗಲಿಕ್ಕೆ ಸಾಧ್ಯವಿಲ್ಲ. ಸಣ್ಣ ಸಣ್ಣ ತುಂಡುಗಳನ್ನು ಮಾಡಿದರೆ ಪುನರಪಿ ಅವುಗಳನ್ನು ಕೊಡಿಸುವಂಥ ಕಾಲವೂ ಬರಬಹುದು. ಅದನ್ನು ಮಾಡದೇ ಹೋದರೆ ಅಗ್ರಿಕಲ್ಚರಲ್ ಎಕಾನಮಿ ಸಮಾನವಾಗಿ ನಡೆಯುವುದಿಲ್ಲ. ಇದನ್ನು ಎಲ್ಲರೂ ಒಪ್ಪಬೇಕು. ಮಾನ್ಯ ಪ್ರಕಾಶ್‌ರವರು ಬಹಳ ಬುದ್ಧಿವಂತರು ಮತ್ತು ಪ್ರಾಮಾಣಿಕವಾಗಿ ಸೇವೆಯನ್ನು ಮಾಡುತ್ತಾ ಇದ್ದಾರೆ. ಇಂತಹವರಿಗೆ ನಿಜವಾಗಿಯೂ ಸೂಕ್ತವಾದ ಸಲಹೆಗಳನ್ನು ಕೊಡುವುದು ಅತ್ಯಂತ ಅವಶ್ಯಕವೆಂದು ನಾನು ತಿಳಿದಿದ್ದೇನೆ. ಏಕೆ ಇಲ್ಲಿ ೧೧ ಲಕ್ಷ ೬೯ ಸಾವಿರ ೮೬೧ ಅಂತ ಅಂಕಿಗಳನ್ನು ಕೊಡುತ್ತಿದ್ದೀರಿ? ಯಾವ ಆಧಾರದ ಮೇಲೆ ಕೊಡುತ್ತೀರಿ ? ಅಧಿಕಾರಿಗಳು ತಪ್ಪು ಮಾಹಿತಿ ಆಧಾರದ ಮೇಲೆ ಅಂಕಿಗಳನ್ನು ಕೊಡುವುದನ್ನು ಮೊದಲು ಬಂದ್ ಮಾಡಬೇಕು. ಅಂಕಿಅಂಶಗಳ ಮೂಲಾಧಾರ ಹುಡುಕಬೇಕು. ಇವತ್ತಿನ ದಿವಸ ನಾನು ಎಷ್ಟು ಹತ್ತಿ ಬೆಳೆದಿದ್ದೇನೆ ಎಂದು ಗೊತ್ತಾಗಬೇಕಾದರೆ ಎರಡು-ಮೂರು ತಿಂಗಳ ಮೇಲೆ ಗೊತ್ತಾಗುತ್ತದೆ. ರೆಗ್ಯುಲೇಟೆಡ್ ಮಾರುಕಟ್ಟೆಗೆ ಸಾಗಿಸಿದ್ದು ಮಾತ್ರ ತಿಳಿಯುತ್ತದೆ. ಕಳ್ಳಮಾರುಕಟ್ಟೆಯಲ್ಲಿ ಮಾರಿದ್ದು ಹೇಗೆ ತಿಳಿಯಬೇಕು ? ಇವತ್ತು ಲೆಕ್ಕ ಕೊಡುವಾಗ ಹತ್ತರ ಕೆಳಗೆ ಇನ್ನೊಂದು ಹಚ್ಚಿ ಕೊಟ್ಟುಬಿಡುತ್ತಾರೆ. ಅವರು ಕೊಡತಕ್ಕಂಥ ಆಧಾರ ನಿಮ್ಮನ್ನು ದಾರಿತಪ್ಪಿಸುತ್ತದೆ. ಇದನ್ನು ಮೊದಲು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಕರ್ನಾಟಕದಲ್ಲಿ ನೈಸರ್ಗಿಕವಾದ ಸಂಪತ್ತನ್ನು ಭಾರೀ ಪ್ರಮಾಣದಲ್ಲಿ ದೇವರು ಕೊಟ್ಟಿದ್ದಾನೆ. ಎಂಥಾ ಪರಿಸ್ಥಿತಿಯಲ್ಲೂ ಕರ್ನಾಟಕದಲ್ಲಿ ಮನುಷ್ಯ ಉಪವಾಸದಿಂದ ಸಾಯಬೇಕಾದ ಪರಿಸ್ಥಿತಿ ಇಲ್ಲ. ದನ ಸತ್ತರೂ ಮನುಷ್ಯ ಸಾಯುವುದಿಲ್ಲ. ಈ ದೃಷ್ಟಿಯಿಂದ ಯೋಚಿಸುವುದಾದರೆ ಕೃಷಿಯನ್ನು ಮರೆತು ನಾವು ಕುಳಿತುಕೊಳ್ಳಬಾರದು ಎನ್ನುವ ಎಚ್ಚರಿಕೆಯನ್ನು ವಹಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನ್ಯಾಷನಲ್ ಅಗ್ರಿಕಲ್ಚರಲ್ ರೀಸರ್ಚ್ ಕಮಿಶನ್‌ರವರು ೧೯೭೬ರಲ್ಲಿ ವರದಿಯನ್ನು ಕೊಟ್ಟರು. ಅವರು ಸುಮಾರು ೨೪ ಇಂಟೆರಿಮ್ ರಿಪೋರ್ಟ್‌ಗಳನ್ನು ಕೊಟ್ಟರು, ಡಾಕ್ಟರ್ ಅರಕೇರಿಯವರು ಅದರ ಸದಸ್ಯರಾಗಿದ್ದರು. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಆ ರಿಪೋರ್ಟ್ ಸಹಿತ ನಮಗೆ ಸಿಕ್ಕುತ್ತಿಲ್ಲ. ಲೆಜಿಸ್ಲೇಚರ್ ಲೈಬ್ರರಿಯಲ್ಲಿ ಸಹಿತ ಈ ರಿಪೋರ್ಟ್‌ನ ಪ್ರತಿ ಇಲ್ಲ. ೧೫ ವಾಲ್ಯೂಮ್ಸ್ ಮಾಡಿ ಫೈನಲ್ ರಿಪೋರ್ಟ್‌ನ್ನು ಕೊಟ್ಟರು. ಯಾವ ರೀತಿಯಿಂದ ಅಗ್ರೋನಾಮಿಕ್ ಹೇಗೆ ಇರಬೇಕು ? ಕ್ರಾಪ್ ಪ್ಯಾಟರ್ನ್ ಯಾವ ರೀತಿ ಇರಬೇಕು. ಭೂಮಿಯ ಸವಕಳಿಯನ್ನು ತಡೆಗಟ್ಟುವುದು ಹೇಗೆ ! ಭೂಮಿಯೊಳಗಿನ ನೀರನ್ನು ಹೇಗೆ ಉಪಯೋಗ ಮಾಡಬೇಕು, ವಾಟರ್ ಕನ್ಸರ್‌ವೇಶನ್ ಹೇಗೆ ಮಾಡಬೇಕು ಎಂಬುದನ್ನೆಲ್ಲಾ ಅದರಲ್ಲಿ ದೀರ್ಘವಾಗಿ ವಿವರವಾಗಿ ಹೇಳಿದ್ದಾರೆ, ಈ ಡಿಪಿಎಪಿ, ಎನ್‌ಆರ್‌ಇಪಿ ಯೋಜನೆಗಳನ್ನು ಕಾಂಗ್ರೆಸ್ ಸರ್ಕಾರ ಹೊಸದಾಗಿ ಮಾಡಿರಬಹುದು, ಆದರೆ ೧೯೭೬ನೇ ಇಸವಿಯಲ್ಲಿಯೇ ಇವುಗಳ ಬಗ್ಗೆ ಈ ರಿಪೋರ್ಟ್‌ನಲ್ಲಿ ಹೇಳಿದ್ದಾರೆ.

ಅವರು ಕೊಟ್ಟಿರುವ ವರದಿಯ ಕಡೆ ನಾವು ಹೆಚ್ಚಿನ ಲಕ್ಷ್ಯ ಕೊಡಬೇಕಾಗುತ್ತದೆ. ಅವರು ತಮ್ಮ ವರದಿಯಲ್ಲಿ ಪ್ರಾಮುಖ್ಯವಾಗಿ ಏನು ಹೇಳಿದ್ದಾರೆಂದರೆ, ಭೂಮಿಯ ಸವಕಳಿಯನ್ನು ತಪ್ಪಿಸಿ ಅದು ಯಾವಾಗಲೂ ಫಲವತ್ತಾಗಿ ಇರುವಂತೆ ಮಾಡಲು ಏನೇನು ಕ್ರಮ ತೆಗೆದುಕೊಳ್ಳಬೇಕು ಮತ್ತು ಹೆಚ್ಚು

ಹೆಚ್ಚು ಉತ್ಪಾದನೆ ಮಾಡಲು ಏನು ಕ್ರಮ ತೆಗೆದುಕೊಳ್ಳಬೇಕು ಎಂಬುದನ್ನು ಹೇಳಿದ್ದಾರೆ. ಭೂಮಿಯ ಸಂಧಾರಣೆಯನ್ನು ಬಿಟ್ಟೂ ಬಿಡದಂತೆ ಸತತವಾಗಿ ಮುಂದುವರಿಸಿಕೊಂಡು ಹೋಗಬೇಕೆಂದು ಹೇಳಿದ್ದಾರೆ. ಸೈಂಟಿಫಿಕ್ ರೀಸರ್ಚ್ ಏನಾಗಿದೆ, ಅದರ ಒಂದು ಫಲವನ್ನು ರೈತರಿಗೆ ಮುಟ್ಟಿಸುವಂತೆ ಹೇಳಿದ್ದಾರೆ. ವ್ಯವಸಾಯ ವಿಶ್ವವಿದ್ಯಾನಿಲಯದ ಮೂಲಕ ಈ ಬಗ್ಗೆ ಕ್ರಮ ತೆಗೆದುಕೊಳ್ಳುವುದಾಗಿ ತಾವು ಹೇಳಬಹುದು. ಅದರ ಜೊತೆಗೆ ಬೇರೆ ರೀತಿಯಿಂದಲೂ ತಾವು ಇದರ ಕಡೆಗೆ ಗಮನ ನೀಡಬೇಕಾಗುತ್ತದೆ. ಇಲ್ಲಿಯವರೆಗೆ ವ್ಯವಸಾಯ ಕ್ಷೇತ್ರದಲ್ಲಿ ಏನೇನು ರೀಸರ್ಚ್ ನಡೆದಿದೆ, ಅದನ್ನು ಇನ್ನೂ ಮುಂದುವರಿಸಿಕೊಂಡು ಹೋಗಲು ಸರ್ಕಾರ ಸಹಾಯ ಮಾಡಬೇಕೆಂದು ಹೇಳಿದ್ದಾರೆ. ಯಾವ ಯಾವ ಪ್ರದೇಶಗಳಲ್ಲಿ ಯಾವ ಯಾವ ಬೆಳೆಗಳನ್ನು ಬೆಳೆದರೆ ಹೆಚ್ಚು ಉತ್ಪಾದನೆ ಬರಬಹುದು ಎಂಬುದನ್ನು ಕಂಡುಹಿಡಿದು, ಅಂತಹ ಪ್ರದೇಶಗಳಲ್ಲಿ ಆಯಾ ಬೆಳೆಗಳನ್ನೇ ಬೆಳೆಸಲು ಪ್ರಯತ್ನ ಮಾಡಬೇಕೆಂದು ಅವರು ತಮ್ಮ ವರದಿಯಲ್ಲಿ ಹೇಳಿದ್ದಾರೆ. ಇದರ ಜೊತೆಗೆ ರೈತರ ಅಭಿವೃದ್ಧಿ ಯಾವ ರೀತಿ ಆಗಬೇಕು, ಮಾರ್ಕೆಟಿಂಗ್ ಪ್ರೈಸ್ ಪಾಲಿಸಿ ಯಾವ ರೀತಿ ಇರಬೇಕು, ಹಸುಗಳನ್ನು ಸಾಕಲು ಯಾವ ರೀತಿ ಸಹಾಯ ಮಾಡಬೇಕು ಎಂಬುದನ್ನು ಸಹ ಅವರು ತಮ್ಮ ವರದಿಯಲ್ಲಿ ಹೇಳಿದ್ದಾರೆ. ಆದಕಾರಣ ಮಾನ್ಯ ಪ್ರಕಾಶ್ ಅವರು ವ್ಯವಸಾಯ ಇಲಾಖೆ ಸಚಿವರಾಗಿ ಬಂದಮೇಲೆ ಇದನ್ನೆಲ್ಲಾ ಯಾವ ರೀತಿ ಕಾರ್ಯರೂಪದಲ್ಲಿ ತಂದಿದ್ದಾರೆಂಬುದನ್ನು ನಾವು ನೋಡಬೇಕಾಗಿದೆ. ನಾನು ವ್ಯವಸಾಯ ಸಚಿವನಾಗಿದ್ದಾಗಲೂ ಸಹ ಎಲ್ಲವನ್ನೂ ಕಾರ್ಯಗತ ಮಾಡಲು ಸಾಧ್ಯವಾಗಲಿಲ್ಲ. ನಿಮ್ಮ ಹಿಂದಿನ ಮಂತ್ರಿಗಳು ಇದ್ದಾಗಲೂ ಸಹ ಕೆಲಸಕಾರ್ಯ ಸರಿಯಾಗಿ ನಡೆದಿಲ್ಲ ಎಂಬ ಟೀಕೆಗಳು ಕೇಳಿಬರುತ್ತಿದ್ದವು. ಈಗಲೂ ಸಹ ಟೀಕೆಗಳು ಬರುತ್ತಿವೆ. ಆದ್ದರಿಂದ ಮಾನ್ಯ ಮಂತ್ರಿಗಳು ಈ ಹಿಂದಿನ ಅನುಭವಗಳ ಆಧಾರದ ಮೇಲೆ ಇಂದು ಕೆಲಸ ಮಾಡಬೇಕು ಮತ್ತು ಮುಂದಿನದನ್ನು ಈಗಲೇ ಯೋಚಿಸಬೇಕು. ಈ ಒಂದು ತತ್ವದ ಆಧಾರದ ಮೇಲೆ ನಿಮ್ಮ ಕೆಲಸ ನಡೆಯಬೇಕು. ಈಗ ನಿಮ್ಮ ಇಲಾಖೆಯ ಆಡಳಿತ ಯಾವ ರೀತಿ ನಡೆದಿದೆ ಎಂಬುದನ್ನು ಸ್ವಲ್ಪ ತಾವು ಯೋಚನೆ ಮಾಡಿ ನೋಡಬೇಕಾಗಿದೆ. ಸಾಯಿಲ್ ಕನ್‌ಸರ್‌ವೇಷನ್ ಕೆಲಸ ರಾಯಚೂರಿನಲ್ಲಿ ೧೯೭೨ರಿಂದ ೧೯೭೬ನೇ ಇಸವಿವರೆಗೆ ಬಹಳ ಜೋರಾಗಿ ನಡೆಯಿತು. ಬಿಜಾಪುರ ಜಿಲ್ಲೆಯಲ್ಲಿ ಸಹ ಬಹಳ ಜೋರಾಗಿ ನಡೆಯಿತು. ನಮ್ಮ ದೇಶದಲ್ಲಿ ಬ್ರಿಟಿಷರ ಆಳ್ವಿಕೆ ಇದ್ದಾಗ ಡಾ, ಸಾಸ್‌ಮನ್ ಅವರು ಈ ಸಾಯಿಲ್ ಕನ್‌ಸರ್‌ವೇಷನ್ ಕೆಲಸ ಯಾವ ರೀತಿ ನಡೆಯಬೇಕು ಎಂದು ಹೇಳಿದಾಗ, ಆತನ ವಾದವನ್ನು ಕೇಳಿದ ಜನರು ಆತನನ್ನು ಹುಚ್ಚ ಎಂದು ಕರೆದರು. ಈ ಬಗ್ಗೆ ಟೀಕೆಗಳನ್ನು ಮಾಡಿದರು. ಆವನ ವಾದ ಸರಿಯಿಲ್ಲ ಎಂದು ಹಳ್ಳಿಹಳ್ಳಿಗಳಲ್ಲಿಯೂ ಸಹ ಠರಾವುಗಳನ್ನು ಮಾಡಿದರು. ಕಪ್ಪುಬಾವುಟ ಪ್ರದರ್ಶನ ಮಾಡಿದರು. ಆದರೆ ಇಂದು ಆತನ ವಾದವನ್ನು ನಾವು ಸಮರ್ಥಿಸಬೇಕಾಗಿದೆ ಈ ಕೆಲಸವನ್ನು ಕಡ್ಡಾಯವಾಗಿ ಮಾಡಲೇಬೇಕೆಂದು ಆತ ಹೇಳಿದ್ದ. ಆದರೆ ಆಗ ನಡೆಯಲಿಲ್ಲ. ಈಗ ನಾವು ಇದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿದ್ದೇವೆ. ಇಂದು ನೂರು ರೂಪಾಯಿಗಳಲ್ಲಿ ಆಗುತ್ತಿರುವ ಕೆಲಸವನ್ನು ಅಂದೇ ಮಾಡಿದ್ದರೆ ಕೇವಲ ಎರಡು ರೂಪಾಯಿಗಳಲ್ಲಿ ಮುಗಿಸಬಹುದಾಗಿತ್ತು. ಆಗ ಪ್ರಜಾಪ್ರಭುತ್ವ ಎಂಬುದು ಇರಲಿಲ್ಲ. ಯಾರು ಚೆನ್ನಾಗಿ ಕೆಲಸ ಮಾಡುತ್ತಿದ್ದರೋ ಅಂತಹವರನ್ನು ಸೂಪರ್‌ವೈಜರ್ ಎಂದು ನೇಮಕ ಮಾಡಲಾಗುತ್ತಿತ್ತು. ಇಂದು ಏನೇನು ಕೆಲಸ ಆಗಬೇಕಾಗಿದೆ ಎಂಬುದನ್ನು ನಾವು ಸ್ವಲ್ಪ ವಿಚಾರ ಮಾಡಬೇಕಾಗಿದೆ. ಯೋಗ್ಯ ರೀತಿಯಿಂದ ವಿಚಾರ ಮಾಡುವುದರಲ್ಲಿ ನಾವು ಡಾ. ಸಾಸ್‌ಮನ್‌ಗಿಂತ ಕಡಿಮೆ ಏನಿಲ್ಲ. ಆದರೆ ಕೆಲಸ ಮಾತ್ರ ತ್ವರಿತಗತಿಯಿಂದ ಆಗುತ್ತಿಲ್ಲ. ಇವೊತ್ತಿನ ದಿವಸ ಬಿಜಾಪುರ ಜಿಲ್ಲೆಯಲ್ಲಿ ಸಾಯಿಲ್ ಕನ್ಸರ್‌ವೇಷನ್ ಕೆಲಸ ಎಲ್ಲಿ ಆಗಿದೆ ಎಂಬುದನ್ನು ನಾವು ದೀಪ ಹಾಕಿಕೊಂಡು ಹುಡುಕಬೇಕಾಗಿದೆ. ಈ ಹಿಂದೆ ರಾಯಚೂರಿನ ಕೊಪ್ಪಳದಲ್ಲಿ ಸಾಯಿಲ್ ಕನ್ಸರ್ವೇಷನ್ ಕೆಲಸ ಜೋರಾಗಿ ನಡೆಯುತ್ತಿದ್ದ ಕಾಲದಲ್ಲಿ, ಆಗಿನ ಡೈರೆಕ್ಟರ್ ಅವರು ಡಾ. ಸಾಸ್‌ಮನ್ ತತ್ವದ ಪ್ರಕಾರ ಕಾಂಟೂರ್ ಬಂಡಿಂಗ್ ಕೆಲಸ ಮಾಡಿಸಿದರೆ ಸ್ವಲ್ಪ ತೊಂದರೆಯಾಗುತ್ತದೆಂದು ನನಗೆ ತಿಳಿಸಿದರು. ಆಗ ನಾನು ಸ್ವಲ್ಪ ಅದಲು ಬದಲು ಮಾಡಿ ಈ ಕೆಲಸ ಮಾಡಬೇಕೆಂದು ತಿಳಿಸಿದ್ದ, ಆ ಅಧಿಕಾರಿ ಈಗ ನಿವೃತ್ತರಾಗಿದ್ದಾರೆ. ಅವರ ಹೆಸರು ಬಸಪ್ಪ ಎಂದು. ಅವರು ಹರಿಜನ ಕೋಮಿಗೆ ಸೇರಿದವರಾಗಿದ್ದರು. ಇವರು ಯಾವ ರೀತಿ ಈ ಒಂದು ಕೆಲಸವನ್ನು ಮಾಡಬೇಕೆಂದು ಯೋಚನೆ ಮಾಡಿದ್ದರೋ ಅದನ್ನು ಅವರ ಮೇಲಿನ ಅಧಿಕಾರಿಗಳು ಒಪ್ಪಲಿಲ್ಲವೆಂದು ಅವರು ನನಗೆ ಹೇಳಿದರು. ಆ ಒಂದು ಸಂದರ್ಭದಲ್ಲಿ ನನಗೂ ಸಹ ಈಗಿನಷ್ಟು ಟೆಕ್ನಿಕಲ್ ನಾಲೆಡ್ಜ್ ಇರಲಿಲ್ಲ. ಆದರೂ ಸಹ ನಾನು ರೈತ ಕುಟುಂಬದಲ್ಲಿ ಹುಟ್ಟಿ ಬೆಳೆದವನಾದ ಕಾರಣದಿಂದ ರೈತರ ಕಷ್ಟ ಏನೆಂಬುದು ತಿಳಿದಿತ್ತು. ಆದ್ದರಿಂದ

ಡಾ. ಸಾಸ್‌ವಂನ್ ತತ್ವದ ಪ್ರಕಾರ ಕೆಲಸ ಮಾಡುವುದಕ್ಕೆ ಬದಲು ಸ್ವಲ್ಪ ಸುಧಾರಣೆ ಮಾಡಿಕೊಂಡು ಕೆಲಸ ನಡೆಸಬೇಕೆಂದು ನಾನು ಹೇಳಿದೆ. ಆ ಸಮಯದಲ್ಲಿ ಬರಗಾಲ ಕೂಡ ಇತ್ತು. ಆದ್ದರಿಂದ ಈ ಕೆಲಸವನ್ನು ಹೆಚ್ಚಿನ ರೀತಿಯಲ್ಲಿ ನಡೆಸಿದ್ದರಿಂದ ಲಕ್ಷಾಂತರ ಜನರಿಗೆ ಕೆಲಸ ದೊರೆಯಿತು. ಈ ಕೆಲಸ ಮಾಡಿಸಲು ಸರ್ಕಾರ ಸಾಲದ ರೂಪದಲ್ಲಿ ಹಣವನ್ನು ಮಂಜೂರು ಮಾಡಿತ್ತು. ರೈತರೇ ಈ ಕೆಲಸ ಮಾಡಿಸಲು ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ಸರ್ಕಾರದ ಖರ್ಚಿನಲ್ಲಿ ಮಾಡಿಸಲಾಯಿತು. ಇದರಿಂದ ರೈತರಿಗೆ ಹೆಚ್ಚಿನ ಅನುಕೂಲವಾಯಿತು. ಈ ಕೆಲಸ ಮಾಡಿಸಲು ಈಗ ಕೇಂದ್ರ ಸರ್ಕಾರದವರು ಶೇಕಡಾ ೫೦ರಷ್ಟು ಸಬ್ಸಿಡಿ ಕೊಡುತ್ತಿದ್ದಾರೆ. ಶೇಕಡಾ ನೂರರಷ್ಟು ಸಹಾಯ ಮಾಡುವಂತಹ ಕೇಂದ್ರದ ಹಲವಾರು ಯೋಜನೆಗಳಿವೆ. ಆದರೆ ಆ ಯೋಜನೆಗಳ ಪ್ರಯೋಜನವನ್ನು ಜನರಿಗೆ ಮುಟ್ಟಿಸುವಲ್ಲಿ ನೀವು ಸಂಪೂರ್ಣವಾಗಿ ವಿಫಲರಾಗಿದ್ದೀರಿ. ಈ ಮಾತನ್ನು ನಾವು ಹೇಳಲು ಹೊರಟರೆ, ನಿಮ್ಮ ಸರ್ಕಾರ ಇದ್ದಾಗ ಏನೇನು ಮಾಡಿದಿರಿ ಎಂದು ಕೇಳುತ್ತೀರಿ ? ನಮ್ಮ ಕಾಲದಲ್ಲಿ ನಾವು ಸರಿಯಾಗಿ ಕೆಲಸ ಮಾಡಲಿಲ್ಲವೆಂಬ ಕಾರಣದಿಂದಲೇ ಈಗ ನೀವು ಅಧಿಕಾರಕ್ಕೆ ಬಂದಿದ್ದೀರಿ. ಆದ್ದರಿಂದ ನೀವು ಏನೇನು ಕೆಲಸ ಮಾಡಿದ್ದೀರಿ ಎಂಬುದನ್ನು ಹೇಳಿ. ನಮ್ಮ ಪಕ್ಷದ ಸರ್ಕಾರ ಇವೊತ್ತಿನ ದಿವಸ ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿದೆ. ಅವರು ಕೆಲವೊಂದು ಯೋಜನೆಗಳ ಸಲುವಾಗಿ ಹೇರಳವಾಗಿ ಹಣ ಕೊಡುತ್ತಿದ್ದರೂ ಸಹ ಅದನ್ನು ನೀವು ಸರಿಯಾಗಿ ಬಳಕೆ ಮಾಡುತ್ತಿಲ್ಲ, ಈ ಬಗ್ಗೆ ನಾನು ಕೇಂದ್ರದ ಮಂತ್ರಿಗಳಾದ ಶ್ರೀ ಬೂಟಾಸಿಂಗ್ ಅವರ ಹತ್ತಿರ ಮಾತನಾಡಿದ್ದೇನೆ. ಅವರಿಂದ ನನಗೆ ತಿಳಿದುಬಂದ ಸುದ್ದಿಯ ಪ್ರಕಾರ ಆಯಿಲ್ ಸೀಡ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮೂಲಕ ನಿಮಗೆ ಬಂದ ಹಣ ಸರಿಯಾಗಿ ಬಳಕೆಯಾಗದೆ ಲ್ಯಾಪ್ಸ್ ಆಗಿದೆ. ಕಾಟನ್ ಡೆವಲಪ್‌ಮೆಂಟ್ ಸ್ಕೀಮಿನ ಪ್ರಕಾರ ಕೇಂದ್ರದಿಂದ ನೀವು ಹೆಚ್ಚಿನ ಸಹಾಯ ತೆಗೆದುಕೊಂಡಿಲ್ಲ. ಇದಕ್ಕೆ ಕಾರಣವಾದರೂ ಏನು ? ನಿಮ್ಮ ಈಗಿನ ಪದ್ಧತಿ ಬಹಳ ವಿಪರೀತವಾಗಿದೆ. ನಿಮ್ಮ ದಾರಿ ಎಲ್ಲೋ ತಪ್ಪಿದೆ, ಈ ವ್ಯವಸಾಯ ಇಲಾಖೆಯಲ್ಲಿ ಸಾಕಷ್ಟು ಸುಧಾರಣೆ ಆಗದಿರುವುದಕ್ಕೆ ಕೆಲವೊಂದು ಕಾರಣಗಳಿವೆ. ಮುಖ್ಯವಾಗಿ ಹೇಳಬೇಕೆಂದರೆ, ಅನೇಕ ರೀತಿಯಿಂದ ಕಾರ್ಪೊರೇಷನ್‌ಗಳನ್ನು ರಚನೆ ಮಾಡಿ, ಅವುಗಳ ಮುಖಾಂತರವಾಗಿ ನಾವು ನಮ್ಮ ಕೆಲಸವನ್ನು ಹಗುರ ಮಾಡಿಕೊಂಡಿದ್ದು. ಈ ಕಾರ್ಪೊರೇಷನ್‌ಗಳಲ್ಲಿ ಹೊಲಸು ಕೆಲಸ ಮಾಡುವಂತಹ ಜನರನ್ನು ನಾವು ತಯಾರು ಮಾಡಿದ್ದೇವೆ ಈ ಹಿಂದೆ ಈ ವ್ಯವಸಾಯ ಇಲಖೆಯಲ್ಲಿ ಲಂಚ ರುಷುವತ್ತು ಎಂಬುದು ಇರಲಿಲ್ಲ. ಆದರೆ ಇಂದು ಇಲ್ಲಿ ಬೇರೆ ಇಲಾಖೆಗಳಿಗಿಂತ ಜಾಸ್ತಿಯಾಗಿದೆ. ಇದಕ್ಕೆ ಯಾರು ಕಾರಣರು, ಯಾರದು ಇದರಲ್ಲಿ ತಪ್ಪಿದೆ ಎಂದು ನಾನು ಹೇಳುವುದಿಲ್ಲ. ಲಿಖಿತ ಆಧಾರಗಳು ಇಲ್ಲದೆ ನಾನು ಯಾರ ಬಗ್ಗೆಯೂ ಹೇಳುವುದಿಲ್ಲ. ಆದರೆ ಲಂಚ ಯಾವ ರೀತಿ ಜಾಸ್ತಿ ಆಗಿದೆ ಎಂದು ತಾವು ತಿಳಿದುಕೊಳ್ಳಬೇಕಾದರೆ ರೈತರ ಹತ್ತಿರ ಹೋಗಬೇಕು. ತಾವು ಗೂಟದ ಕಾರನ್ನು ಬಿಟ್ಟು ಬೇರೆ ಕಾರಿನಲ್ಲಿ ಹೋಗಿ ಆಗ ಯಾರೋ ಬಂದಿದ್ದಾರೆಂದು ರೈತರು ತಿಳಿದುಕೊಂಡು ನಿಜ ಸಂಗತಿಗಳನ್ನು ನಿಮಗೆ ಹೇಳುತ್ತಾರೆ. ಯಾರೋ ನೇಗಿಲುಗಳನ್ನು ಮಾರಾಟ ಮಾಡಲು ಬಂದಿದ್ದರಿಂದ ನೀವು ಅವರಿಂದ ನೇಗಿಲುಗಳನ್ನು ಕೊಂಡು ರೈತರಿಗೆ ಹಂಚಿದ್ದೀರಿ. ಬೀಜ ನೆಡುವುದಕ್ಕೇ ಆಗಲಿ, ಹುಲ್ಲು ಕೀಳುವುದಕ್ಕೇ ಆಗಲಿ, ಇವು ಯೋಗ್ಯವಾಗಿಲ್ಲ. ಇಂತಹ ನೇಗಿಲುಗಳನ್ನು ತಾವು ಖರೀದಿ ಮಾಡಿದ್ದೀರಿ. ರೈತರಿಗೆ ಇವುಗಳಿಂದ ಯಾವ ರೀತಿಯಿಂದ ಉಪಯೋಗವಾಗುತ್ತಿಲ್ಲ, ಆದರೂ ಇವುಗಳನ್ನು ಖರೀದಿ ಮಾಡುವುದರ ಮೂಲಕ ಹಣದ ದುರುಪಯೋಗ ಮಾಡಿದ್ದೀರಿ. ಇವೊತ್ತು ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಇರಬಹುದು ಇಲ್ಲಿ ಜನತಾ ಪಕ್ಷದ ಸರ್ಕಾರ ಇರಬಹುದು, ಅಂದಾಕ್ಷಣ ಕೇಂದ್ರ ಸರ್ಕಾರದ ಬಳಿ ಇರುವ ಹಣ ಕಾಂಗ್ರೆಸ್ ಪಕ್ಷದ ಅಪ್ಪನ ಹಣವಲ್ಲ, ಅದೇ ರೀತಿ ಇಲ್ಲಿನ ಸರ್ಕಾರದ ಬಳಿ ಇರುವಂತಹ ಹಣ ಜನತಾ ಪಕ್ಷದ ಅಪ್ಪನ ಹಣವಲ್ಲ. ಇದು ಜನತೆಯ ಹಣ. ಆದ್ದರಿಂದ ಈ ಹಣವನ್ನು ನಾವು ಸಮರ್ಪಕ ರೀತಿಯಿಂದ ಖರ್ಚು ಮಾಡಬೇಕಾಗುತ್ತದೆ. ಈ ವಿಷಯದಲ್ಲಿ ನಾವು ನೀವು ಟ್ರಸ್ಟಿಗಳತರಹ ಇದ್ದು ಹಣ ಖರ್ಚು ಮಾಡಬೇಕಾಗುತ್ತದೆ. ಅಧಿಕಾರಿಗಳಿಂದ ಬರುವಂತಹ ವರದಿಯನ್ನು ಅಧಿಕಾರದಲ್ಲಿರುವ ಅಧಿಕಾರೇತರರು ನಿಗಾಇಟ್ಟು ನೋಡಬೇಕಾಗುತ್ತದೆ. ಸಾರ್ವಜನಿಕರ ಅಭಿಪ್ರಾಯವೇನಿದೆ ಎಂಬುದನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಬೇಕಾಗುತ್ತದೆ. ಸಾರ್ವಜನಿಕರು ತಮ್ಮ ಅಭಿಪ್ರಾಯಗಳನ್ನು ಕೆಲವು ಸಲ ನಮ್ಮ ಹತ್ತಿರ ಹೇಳಬಹುದು. ಕೆಲವು ಸಂದರ್ಭಗಳಲ್ಲಿ ನಿಮ್ಮ ಹತ್ತಿರ ಹೇಳಬಹುದು. ನಿಮ್ಮ ಪಕ್ಷದವರು ನಿಮ್ಮ ಹತ್ತಿರ ಹೇಳಲು ಹಿಂಜರಿದು ನಮ್ಮ ಹತ್ತಿರ ಬಂದು ಹೇಳಬಹುದು. ಆಗ ನಾವು ಅದನ್ನು ಇಲ್ಲಿ ಹೇಳುತ್ತೇವೆ. ಆಗ ನೀವು ಎಲ್ಲರ ಅಭಿಪ್ರಾಯಗಳನ್ನು ಪಡೆದುಕೊಂಡು ಮುಂದಿನ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಇನ್ನು ವ್ಯವಸಾಯ ಇಲಾಖೆಯಲ್ಲಿರುವಂತಹ ಅಧಿಕಾರಿಗಳಿಗೆ ತಾವು ಏನೇನು ಕೆಲಸ ಕೊಟ್ಟಿದ್ದೀರಿ? ಇದನ್ನು ತಾವು ತಿಳಿಸಬೇಕು, ಈಗ ೮ ಮಂದಿ ಜಾಯಿಂಟ್ ಡೈರೆಕ್ಟರ್‌ಗಳು ಇದ್ದಾರೆ. ಇವರು ಬೇರೆ ಬೇರೆ ಜಿಲ್ಲೆಗಳಲ್ಲಿದ್ದಾರೆ. ಇಬ್ಬರು ಅಡಿಷನಲ್ ಡೈರೆಕ್ಟರ್‌ಗಳಿದ್ದಾರೆ.

ಅಡಿಷನಲ್ ಡೈರೆಕ್ಟರ್ ಒಬ್ಬರು ಇದ್ದಾರೆ. ಈ ಅಡಿಷನಲ್ ಡೈರೆಕ್ಟರ್‌ರವರು ಒಂದು ಕಾರು ತೆಗೆದುಕೊಳ್ಳಬೇಕಾದರೆ ಅವರಿಗೆ ಅಧಿಕಾರ ಇಲ್ಲ. ಅವರು ಸರ್ಕಾರಕ್ಕೆ ರಿಕ್ವಿಸಿಷನ್ ಕೊಡಬೇಕೆಂದು ಇದ್ದಾರೆ. ಒಬ್ಬ ಪೋಲೀಸ್ ಕಾನ್‌ಸ್ಟೇಬಲ್‌ಗೆ ಇರುವ ಅಧಿಕಾರಿ ಈ ಅಡಿಷನಲ್ ಡೈರೆಕ್ಟರ್‌ರವರಿಗೆ ಅಧಿಕಾರ ಇಲ್ಲವೆ? ಪಿ.ಎ.ಗೆ ಇರುವ ಅಧಿಕಾರ ಆ ಪಿ ಎ.ಯು ಅಧಿಕಾರಿಗಳಿಗೆ ಅಧಿಕಾರ ಇರುವುದಿಲ್ಲ ಎನ್ನುವ ಹಾಗೆ ಆಗಿದೆ. ಇವತ್ತಿನ ದಿನಹೆಡ್‌ಕ್ವಾರ್ಟರ್‌ನಲ್ಲಿ ೨೦ ಮಂದಿ ಡೆಪ್ಯುಟಿ ಡೈರೆಕ್ಟರ್‌ಗಳು ಇದ್ದಾರೆ ೨೦ ಮಂದಿ ಅಡಿಷನಲ್ ಡೈರೆಕ್ಟರು ಇದ್ದಾರೆ ಇವರಿಂದ ನೀವು ಏನು ಕೆಲಸಗಳನ್ನು ಮಾಡಿಸುತ್ತಿದ್ದೀರಿ? ಕೇಂದ್ರ ಸರ್ಕಾರದವರು ಯಾವ ಯಾವ ಸ್ಕೀಮಿಗೆ ಕೊಟ್ಟಿರುವಂತಹ ಹಣವನ್ನು ಎಷ್ಟೆಷ್ಟು ಲ್ಯಾಪ್ಸ್ ಮಾಡಿದ್ದೀರಿ ಎಂಬುದು ನನಗೆ ಗೊತ್ತು. ನಾನೂ ಹಿಂದೆ ಮಂತ್ರಿಯಾಗಿದ್ದೆ. ನಾನು ಆಫೀಸರ್‌ಗಳನ್ನು ಕರೆದು ಸರಿಯಾದ ಕೆಲಸ ಮಾಡುವಂತೆ ಅವರುಗಳಿಗೆ ಆದೇಶ ಕೊಡುತ್ತಿದ್ದೆ. ಏನು ಇವತ್ತು ಪಾಟೀಲರು ಸಿಟ್ಟಿನಿಂದ ಕೇಳುತ್ತಿದ್ದಾರೆಂದು ನಿಮಗೆ ಅನಿಸಬಹುದು. ನಾನು ಮಂತ್ರಿಯಾಗಿದ್ದಾಗ ನನ್ನ ಇಲಾಖೆಯ ಬಗ್ಗೆ ಯಾರೇ ಆಗಲೀ, ಎಲ್ಲೆ ಆಗಲೀ, ಎಲ್ಲಿ ನಿಂತಲ್ಲಿ ಅಲ್ಲಿ ಕೇಳಿದರೂ ತಕ್ಷಣ ಸರಿಯಾದ ಉತ್ತರವನ್ನು ಕೊಡುತ್ತಿದ್ದೆ, ನಿಮ್ಮ ಅಧಿಕಾರಿಗಳಿಗೆ ಸರಿಯಾಗಿ ಟ್ರೈನ್‌ಅಪ್ ಆಗಬೇಕು. ಅಧಿಕಾರಿಗಳಿಗಿಂತ ಸರಿಯಾದ ಉತ್ತರವನ್ನು ಕೊಡುತ್ತಿದ್ದೆ. ನಾನು ವಿಷಯಗಳ ಮೇಲೆ ಸರಿಯಾಗಿ ಸ್ಟಡಿ ಮಾಡಿಕೊಂಡು ಬರುತ್ತಿದ್ದೆ. ನೀವು ಇಪ್ಪತ್ತು ಮಂದಿ ಡೆಪ್ಯುಟಿ ಡೈರೆಕ್ಟರುಗಳನ್ನು ಆಫೀಸಿನಲ್ಲಿ ಇಟ್ಟುಕೊಂಡು ಏನು ಕೆಲಸ ಮಾಡುತ್ತಿದ್ದೀರೆಂದು ಮಾನ್ಯ ಮಂತ್ರಿವರ್ಯರುಗಳು ಹೇಳಬೇಕು. ಆಮೇಲೆ ಸಾಯಿಲ್ ಕನ್‌ಸರ್ವೇಷನ್ ಬಗ್ಗೆ ಹೇಳಬೇಕಾದರೆ, ರಾಯಚೂರಿನಲ್ಲಿ ಇರುವ ಸಾಯಿಲ್ ಕನ್‌ಸರ್ವೇಟರ್ ಧಾರವಾಡಕ್ಕೆ ಹೋಗಿ ಇನ್ಸ್‌ಪೆಕ್ಷನ್ ಮಾಡುತ್ತಿದ್ದಾರೆ. ಮಂಡ್ಯದಲ್ಲಿರುವ ಒಬ್ಬ ಸ್ಕೂಲ್ ಇನ್ಸ್‌ಪೆಕ್ಟರ್‌ರವರು ಧಾರವಾಡಕ್ಕೆ ಹೋಗಿ ಇನ್ಸ್‌ಪೆಕ್ಷನ್ ಮಾಡಿ, ಧಾರವಾಡದಲ್ಲಿರುವ ಇನ್ಸ್‌ಪೆಕ್ಟರ್ ಮಂಡ್ಯಕ್ಕೆ ಬಂದು ಇನ್ಸ್‌ಪೆಕ್ಷನ್ ಮಾಡಿದರೆ ಹೇಗಾಗುತ್ತದೆಯೋ ಹಾಗೆ ನಿಮ್ಮ ಇಲಾಖೆ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ. ನಾವು ಆ ರೀತಿ ಮಾಡಿಲ್ಲವೆಂದು ನೀವು ಹೇಳಬಹುದು. ನಿಮ್ಮ ಗೌರ್ನಮೆಂಟ್ ಆರ್ಡರ್ ಕೊಟ್ಟಿರುವುದು ನನ್ನ ಹತ್ತಿರ ಇದೆ ಅದನ್ನು ನೀವು ಕೇಳಿದರೆ ಮಾತ್ರ ನಾನು ಕೊಡುತ್ತೇನೆ. ಆಮೇಲೆ ಸಾಯಿಲ್ ಕನ್ಸರ್ವೇಷನ್‌ನ್ನು ಮಾಡದಿದ್ದರೆ ಭೂಮಿಯನ್ನು ಸುಧಾರಣೆ ಮಾಡುವುದಕ್ಕಾಗುವುದಿಲ್ಲ. ನಾವು ಸಾಯಿಲ್ ಕನ್ಸರ್ವೇಷನ್ ಬೋರ್ಡ್ ಮಾಡಿದ್ದೇವೆ. ಡ್ರೈ ಲ್ಯಾಂಡ್ ಇಂಪ್ರೂವ್‌ಮೆಂಟ್ ಬೋರ್ಡ್ ಮಾಡಿದ್ದೇವೆ. ಆ ಬೋರ್ಡಿಗೆ ಡಿವಿಷನಲ್ ಕಮಿಷನರ್‌ರವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೇವೆಂದು ಹೇಳಿದರೆ ಸಾಲದು. ಡಿವಿಷನಲ್ ಕಮಿಷನರ್‌ರವರಿಗೆ ಈಗಿರುವ ಕೆಲಸ ಸಾಲದೆ? ಅವರು ಬಂದು ನಮ್ಮ ಜಮೀನಿಗೆ ಬರೆದು ಹಾಕಿದ್ದಾರೋ ಇಲ್ಲವೋ ಎಂದು ಪ್ರತಿ ಹಳ್ಳಿಗೂ ಹೋಗಿ ನೋಡುವುದಕ್ಕಾಗುವುದಿಲ್ಲ. ಡಿಸ್ಟ್ರಿಕ್ಟ್‌ಗೆ ಒಬ್ಬೊಬ್ಬ ಲೀಡರನ್ನು ಮಾಡಿದರೆ ಅವನು ಎಲ್ಲಾ ಹಳ್ಳಿಗೂ ಹೋಗಿ ನೋಡುವುದಕ್ಕಾಗುವುದಿಲ್ಲ. ಐ.ಎ.ಎಸ್. ಅಧಿಕಾರಿಗಳು ಹೋಗಿ ಅಗ್ರಿಕಲ್ಚರ ಅಸಿಸ್ಟೆಂಟ್‌ಗಳು ಹೇಗೆ ಕೆಲಸ ಮಾಡುತ್ತಾರೆಂದು ಸೂಪರ್‌ವಿಷನ್ ಮಾಡುವುದಕ್ಕಾಗುವುದಿಲ್ಲ. ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನಲ್ಲಿ ಸರಿಯಾಗಿ ಕೆಲಸ ಮಾಡಬೇಕಾಗುತ್ತದೆ. ಇದು ಮಹತ್ವವಾದ ಇಲಾಖೆಯಾಗಿದೆ. ಮಳೆ ಬಂದಾಗ ಬಿತ್ತನೆ ಮಾಡಬೇಕಾಗುತ್ತದೆ. ಒಂದು ದಿವಸ ತಪ್ಪಿದರೂ ಸಹ ಬಹಳಷ್ಟು ನಷ್ಟವಾಗುತ್ತದೆ. ಹಾಗು ಒಂದು ವರ್ಷದ ಜೀವನ ಹಾಳಾಗುತ್ತದೆ. ಆದರೆ ಎಜುಕೇಷನ್ ಡಿಪಾರ್ಟ್‌ಮೆಂಟ್‌ನಲ್ಲಿ ಹೀಗಿರುವುದಿಲ್ಲ. ಒಂದು ನಾಲ್ಕು ದಿನ ಟೀಚರ್ ಬರದೇ ಇದ್ದರೂ ಸಹ ಮುಂದಿನ ದಿನಗಳಲ್ಲಿ ಹಿಂದಿನ ಪಾಠವನ್ನು ಮಾಡಬಹುದು ಇದರಿಂದ ಹುಡುಗರಿಗೆ ಯಾವ ರೀತಿಯ ತೊಂದರೆಯೂ ಆಗುವುದಿಲ್ಲ. ಅದೇ ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟ್‌ನಲ್ಲಿ ಆಗಿನ ಕೆಲಸವನ್ನು ಆ ತಕ್ಷಣ ಮಾಡಬೇಕಾಗುತ್ತದೆ. ನಿಧಾನ ಮಾಡಿದರೆ ಆಗುವುದಿಲ್ಲ ಮಳೆ ಬಂದಾಗ ಬಿತ್ತಲೇ ಬೇಕಾಗುತ್ತದೆ, ಸಾಯಿಲ್ ಕನ್‌ಸರ್ವೇಷನ್‌ಗೆ ಎಷ್ಟು ಹಣವನ್ನು ಹಾಕಿದ್ದೀರಿ ಎಂದರೆ ನಿರುತ್ತರ ಕೊಡುತ್ತೀರಿ, ಡಿಸ್ಟ್ರಿಕ್ಟ್ ವೈಸ್ ನೋಡಿದರೂ ಸಹ ನೀವು ಸಾಯಿಲ್ ಕನ್ಸರ್ವೇಷನ್‌ಗೆ ಏನೂ ಮಾಡಿಲ್ಲ. ಬಿಜಾಪುರ, ರಾಯಚೂರು, ಧಾರವಾಡ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಪ್ರಾಮುಖ್ಯವಾಗಿ ಈ ಸಾಯಿಲ್ ಕನ್‌ಸರ್ವೇಷನ್‌ಗೆ ಮಹತ್ವ ಕೊಡಬೇಕು. ಆದುದರಿಂದ ನೀವು ಕೂಡಲೇ ಮುಖ್ಯ ಮಂತ್ರಿಗಳ ಜೊತೆ ಮಾತನಾಡಿ ಈ ಸಾಯಿಲ್ ಕನ್ಸರ್ವೇಷನ್ ಕೆಲಸಕ್ಕೆ ಹೆಚ್ಚು ಮಹತ್ವವನ್ನು ಕೊಟ್ಟು

ಹೆಚ್ಚು ಹಣವನ್ನು ಇದಕ್ಕೆ ಮಂಜೂರು ಮಾಡಬೇಕೆಂದು ನಾನು ಹೇಳುತ್ತೇನೆ. ಇದನ್ನು ನೀವು ಮಾಡಿದರೆ ಜನಗಳಿಗೂ ಅನುಕೂಲವಾಗುತ್ತದೆ ಹಾಗೂ ನಿಮ್ಮ ಸರ್ಕಾರಕ್ಕೂ ಕೀರ್ತಿ ಬರುತ್ತದೆ. ಬೆಳೆಯನ್ನು ಬೆಳೆಯುವ ಬಗ್ಗೆಯೂ ಹೆಚ್ಚು ರೀಸರ್ಚ್ ಆಗಬೇಕು. ಇದು ಬಹಳ ಪ್ರಾಮುಖ್ಯವಾದುದು. ಯಾವ ಭೂಮಿಗೆ ಯಾವ ಯಾವ ಬೆಳೆಯನ್ನು ಬೆಳೆಯಬಹುದು ಎಂಬುದನ್ನು ಜನರಿಗೆ ತಿಳಿಸಬೇಕು. ಅಗ್ರಿಕಲ್ಚರ್ ಯೂನಿವರ್ಸಿಟಿ ಇದೆ. ಆ ಅಗ್ರಿಕಲ್ಚರ್ ಯೂನಿವರ್ಸಿಟಿ ಎಲ್ಲಾ ಮಾಡುತ್ತದೆ ಎಂದು ನೀವು ಕುಳಿತರೆ ಸರಿ ಇರುವುದಿಲ್ಲ. ಎಲ್ಲಾ ಕೆಲಸವನ್ನು ಅಗ್ರಿಕಲ್ಚರ್ ಯೂನಿವರ್ಸಿಟಿ ಮಾಡುವುದಾದರೆ ಗೌರ್ನ್‌ಮೆಂಟ್ ಏತಕ್ಕೆ ಬೇಕು? ಹಣ ಎಷ್ಟು ಬೇಕೋ ಅಷ್ಟನ್ನು ಕೊಟ್ಟುಬಿಟ್ಟರೆ ಸಾಲದು. ಅಗ್ರಿಕಲ್ಚರ್ ಯೂನಿವರ್ಸಿಟಿಯಿಂದ ಯಾವ ರೀತಿಯಾಗಿ ಕೆಲಸ ಮಾಡಬೇಕೋ ಆ ರೀತಿ ಕೆಲಸ ಮಾಡಿಸಬೇಕು, ಅಗ್ರಿಕಲ್ಚರ್ ಯೂನಿವರ್ಸಿಟಿಯವರು ಎಲ್ಲಾ ಜನರ ಸಂಪರ್ಕವನ್ನು ಸಂಪರ್ಕಿಸಿ ಅವರಿಗೆ ತಮ್ಮ ರೀಸರ್ಚ್ ಎಕ್ಸ್‌ಪ್ಲಾಯ್‌ಟೇಷನ್ ಅನುಭವವನ್ನು ಕೊಡಬೇಕು. ನಾನು ನಿಮಗೆ ಒಂದು ಪತ್ರವನ್ನು ದಿನಾಂಕ ೧೯-೧-೮೩ರಂದು ಬರೆದಿದ್ದೇನೆ. ಕೇಂದ್ರ ಸರ್ಕಾರದವರು ರೀಸರ್ಚ್ ಆಕ್ಟಿವಿಟೀಸ್ ಸಲುವಾಗಿ ನಮ್ಮ ಗ್ರಾಮದಲ್ಲಿ ಒಂದು ಅಗ್ರಿಕಲ್ಚರ್ ಸೈನ್ಸ್ ಇನ್ಸ್ಟಿಟ್ಯೂಷನ್ ಮಾಡಬೇಕೆಂದು ಮಾಡಿದ್ದಾರೆ, ಈ ವಿಷಯ ಅಂತಹ ದೊಡ್ಡದೇನು ಅಲ್ಲ. ಆದರೂ ಅದನ್ನು ನಿಮ್ಮ ನಜರಿಗೆ ತರುತ್ತಿದ್ದೇನೆ. ನನ್ನ ಮಟ್ಟಿಗೆ ಹೇಳುವುದಾದರೆ ಇಂತಹ ಸೈನ್ಸ್ ಇನ್ಸ್ಟಿಟ್ಯೂಷನ್‌ಗಳು ಬಹಳ ಅವಶ್ಯ ಇವೆ,

"You may propose to revise the project convenient to specific areas of Extension Oriented developments in the State like artificial insemination." ನಾನು ಕೇಳಿದ್ದು ಸಾಯಿಲ್ ಕನ್‌ಸರ್ವೇಷನ್ ಸಲುವಾಗಿ ರೀಸರ್ಚ್ ಮಾಡಬೇಕೆಂದು. ಡ್ರೈಲ್ಯಾಂಡ್ ಸಾಯಿಲ್ ಕನ್‌ಸರ್‌ವೇಷನ್‌ನ್ನು ಮೊದಲು ಮಾಡಬೇಕು ಆದರೆ ಈ ಕೆಲಸವನ್ನು ನೀವು ಮಾಡುತ್ತಿಲ್ಲ. ನಿಮ್ಮ ಆಫೀಸರ್‌ಗಳು ನಿಮಗೆ ತಪ್ಪು ರಿಪೋರ್ಟ್‌ನ್ನು ಕೊಡುತ್ತಿದ್ದಾರೆ. ಹಣವನ್ನು ಸುಮ್ಮನೆ ಖರ್ಚು ಮಾಡುತ್ತಿದ್ದೀರಿ, ಸಾಯಿಲ್ ಟೆಸ್ಟಿಂಗ್ ಮಾಡಿ ಪುಕ್ಕಟೆಯಾಗಿ ಜನರಿಗೆ ಕೊಡಬೇಕೆಂದು ನಮ್ಮಲ್ಲಿ ೩-೪ ಲಕ್ಷ ರೂಪಾಯಿಗಳಷ್ಟು ಹಣವನ್ನು ಇಟ್ಟಿದ್ದೆವು. ಆದರೆ ನೀವು ಅದರ ಕಡೆ ಹೆಚ್ಚು ಗಮನವನ್ನು ಕೊಡುತ್ತಿಲ್ಲ. This work is not taken by the University. ಮಲ್ಟಿಪ್ಲಿಕೇಷನ್ ಆಗುತ್ತದೆ. ನೀವು ಬಿತ್ತನೆ ಬೀಜಗಳನ್ನು ಹೊರಗಡೆಯಿಂದ ಅಂದರೆ ಆಂಧ್ರಕ್ಕೆ ಮತ್ತು ತಮಿಳುನಾಡಿಗೆ ಹೋಗಿ ಬೀಜವನ್ನು ತರುತ್ತೀರಿ. ಬೀಜ ಕೊಂಡುಕೊಳ್ಳುವುದಕ್ಕೆ ಟೆಂಡರ್‌ನ್ನು ಕರೆಯುವುದನ್ನು ಏಕೆ ಫಾಲೋ ಮಾಡುವುದಿಲ್ಲ? ಕುಸುಮಾ ಕರೆ ಎನ್ನುವವರು ಒಬ್ಬರು ಬೀಜ ನಿಗಮದಲ್ಲಿ ಇದ್ದರು. ಅವರು ಒಳ್ಳೆಯ ಕೆಲಸ ಮಾಡುತ್ತಿದ್ದರು. ಆದರೆ ಅವರು ಈಗಿಲ್ಲ. ಈ ಬೀಜ ನಿಗಮದ ಕಾರ್ಪೊರೇಷನ್‌ನ್ನು ನಾನು ಮಂತ್ರಿಯಾಗಿದ್ದಾಗಲೇ ಮಾಡಿದ್ದು. ಈ ಕಾರ್ಪೊರೇಷನ್‌ನ್ನು ಮಾಡಿ ನಾನು ತಪ್ಪು ಮಾಡಿದನೇನೋ ಅನಿಸುತ್ತಿದೆ. ಆದುದರಿಂದ ಇದರ ಬಗ್ಗೆ ತಾವು ಆಲೋಚನೆ ಮಾಡಬೇಕು. ಕುಸುಮಾಕರ್‌ರವರು ದುರಾದೃಷ್ಟವಶಾತ್ ಸತ್ತು ಹೋದರು. ಅದರ ಹಿನ್ನೆಲೆ ಏನು ಇದೆ. ಏತಕ್ಕಾಗಿ ಒಬ್ಬ ಕುಸುಮಾಕರ್ ಸತ್ತು ಹೋದರು ಎನ್ನುವುದು ಈಗ ಬೇಡ. ಆದುದರಿಂದ ಬೀಜ ನಿಗಮವು ಸರಿಯಾಗಿ ಕೆಲಸ ಮಾಡುವುದಕ್ಕೆ ತಾವು ನಿಗಾವಹಿಸಬೇಕು.

೪-೦೦ ಪಿ. ಎಂ.

ರೈತನು ಬೆಳೆದ ಮಾಲಿಗೆ ಸರಿಯಾದ ಬೆಲೆಯನ್ನು ಕೊಡದೆ ಅವನ ರಕ್ತ ಹೀರತಕ್ಕಂತಹ ಡಿಪಾರ್ಟ್‌ಮೆಂಟ್‌ಗೆ ಹೇಗೆ ನಾವು ರೈತರ ಪೋಷಕ ಡಿಪಾರ್ಟ್‌ಮೆಂಟ್ ಎಂದು ಹೇಳುವುದು ಎಂದು ನಾನು ತಮ್ಮನ್ನು ಪ್ರಶ್ನಿಸುತ್ತೇನೆ. ನಾವು ಒಂದು ಕೃಷಿ ವಿಜ್ಞಾನ ಕೇಂದ್ರಕ್ಕಾಗಿ ಪತ್ರ ಬರೆದ ಕೂಡಲೇ ನಮಗೆ ಒಂದು ಕೃಷಿ ವಿಜ್ಞಾನ ಕೇಂದ್ರವನ್ನು ಕೊಟ್ಟರು. ಅದನ್ನು ಕೊಡುವಾಗ ಅದರ ಮುಖಾಂತರವಾಗಿ, ಅದಕ್ಕಿಂತಲೂ ಮೊದಲು ಸಾಯಿಲ್ ಟೆಸ್ಟಿಂಗ್ ಲ್ಯಾಬೋರೇಟರಿ ಮಾಡಿದ್ದರು. ಅದರಲ್ಲಿ ಸುಮಾರು ೧,೮೦೦ ಜನರು ಪಾಸ್ ಮಾಡಿದ್ದಾರೆ. ಅವರಿಗೆಲ್ಲಾ ಟೆಸ್ಟ್ ಮಾಡಿ ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಯಾವ ಯಾವ ಭೂಮಿಯಲ್ಲಿ ಯಾವ್ಯಾವುದು, ಅಂದರೆ ನೈಟ್ರೋಜನ್, ಫಾಸ್ಫರಸ್, ಪೊಟ್ಯಾಶ್ ಡೆಫಿಸಿಟ್ ಇದೆ, ಎಂದು ಅವರಿಗೆ ಪರಿಚಯ ಮಾಡಿಕೊಳ್ಳಲು ತುಂಬಾ ಅನುಕೂಲವಾಗುತ್ತಿತ್ತು.

ಇನ್ನೂ ನಿಮ್ಮಲ್ಲಿಯೂ ಬೀಜಗಳನ್ನು ಬೆಳೆಯುತ್ತೀರಿ. ನಿಮ್ಮ ಫಾರ್ಮರ್ಸ್‌ನಲ್ಲಿ ಬೀಜಗಳನ್ನು ಬೆಳೆದು ಅವುಗಳನ್ನು ರೈತರಿಗೆ ಕೊಡುತ್ತೀರಿ. ಅಧ್ಯಕ್ಷರೇ, ಆಗ್ರೋ ಇಲಾಖೆಯವರು ಬೀಜಗಳನ್ನು ಬೆಳೆಯುತ್ತಾರೆ. ಬೆಳೆದು ರೈತರುಗಳಿಗೆ ಸಹಾಯಕವಾಗುವ ದೃಷ್ಟಿಯಿಂದ ಕೊಡುತ್ತಾರೆ. ಅವರ ದೃಷ್ಟಿ ಯಾವಾಗಲೂ ರೈತರಿಗೆ ಸಹಾಯ ಮಾಡುವುದಾಗಿದೆ. ಅವರು ಉತ್ಪನ್ನ ಮಾಡುವ ಬೀಜಗಳ ಧಾರಣೆ ಎಷ್ಟೆಷ್ಟು ಬರುತ್ತದೋ ಅದು ಬೇರೆ ವಿಷಯ. ಇವುಗಳ ಉತ್ಪಾದನೆಯಲ್ಲಿ ನಮಗೂ ನಿಮಗೂ ಬರುವ ಖರ್ಚು ನೋಡಿದರೆ ನಮಗಿಂತ ನಿಮಗೇ ಹೆಚ್ಚು ಖರ್ಚು ಬರುತ್ತಿರುವುದು ಕಂಡು ಬರುತ್ತದೆ. ನಾವು ಖಾಸಗಿಯವರು ಮಾಡಿದರೆ ಕಾಳಜಿ ಪೂರ್ವಕವಾಗಿ ಮಾಡಬೇಕಾಗುತ್ತದೆ ಮತ್ತು ಹಾಗೆಯೇ ಮಾಡುತ್ತಾರೆ. ಆದರೆ ಪಬ್ಲಿಕ್ ಅಂಡರ್ ಟೇಕಿಂಗ್‌ನಲ್ಲಿ ಹಾಗೆ ಆಗುವುದಿಲ್ಲ. ಗುಣಮಟ್ಟದ ವಿಷಯ ಮತ್ತು ಖರ್ಚುವೆಚ್ಚಗಳ ವಿಷಯದಲ್ಲಿಯೂ ವ್ಯತ್ಯಾಸ ಎದ್ದು ಕಾಣುತ್ತದೆ, ಆಗಲಿ, ನಿಮ್ಮ ರಾಯಚೂರಿನ ವಿಷಯವನ್ನೇ ಹೇಳುವುದಾದರೆ, ಅಲ್ಲಿನ ರೈತರು ಕಡಲೇ ಬೀಜವನ್ನು ಬೆಳೆದು ನಿಮ್ಮ ನಿಗಮಕ್ಕೆ ೪೨೦ ರೂಪಾಯಿಗಳಿಗೆ ಕೊಟ್ಟರು. ಆದರೆ ನಿಗಮದವರು ಬಡಖೋರೆಗೌಡನಿಗೆ ಯಾವ ರೀತಿಯಲ್ಲಿ ಕೊಟ್ಟರು ಅಂದರೆ ೯೨೦ಕ್ಕೆ ಮಾರಾಟ ಮಾಡಿದ್ದಾರೆ: ಅಧ್ಯಕ್ಷರೇ, ಯಾರಾದರೂ ಡಾಕ್ಟರ್ ಫಾರ್ಮಸಿಯವರ ಕಡೆಯಿಂದ ೧೦ ರೂಪಾಯಿಗಳಿಗೆ ಔಷಧಿಯನ್ನು ತಂದು ೧೨ ರೂಪಾಯಿಗಳಿಗೆ ಮಾರಿದರೆ ಅಡ್ಡಿಯಿಲ್ಲ ಎಂದು ಹೇಳುತ್ತೀರಿ, ಅದನ್ನು ೧೪ ರೂಪಾಯಿಗಳಿಗೆ ಮಾರಿದರೆ, ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರಾಟ ಮಾಡಿದ ಎಂದು ಹೇಳುತ್ತೀರಿ ಅಲ್ಲವೇ ? ಇವೊತ್ತಿನ ದಿವಸ ನಿಗಮದವರು ೪೨೦ ರೂಗಳಿಗೆ ಕೊಂಡುಕೊಂಡ ಕಡಲೇ ಬೀಜವನ್ನು ಮಾರಾಟ ಮಾಡುವಾಗ ೯೨೦ಕ್ಕೆ ಮಾರುತ್ತಾರೆ ಎಂದರೆ ಹೇಗಾಗುತ್ತದೆ ? ಇದು ಹೌದೋ ಅಲ್ಲವೋ ತಾವುಗಳು ಪರೀಕ್ಷೆ ಮಾಡಿ ನೋಡಿ. ಹೋಗಲಿ, ಕಡಲೆ ಸಿಗುವಂತಿಲ್ಲ ಮಾಡಿರಬಹುದು ಎಂದು ಇಟ್ಟುಕೊಂಡರೂ ಕೂಡ ಬಿಳಿಜೋಳದ ವಿಚಾರದಲ್ಲಿಯೂ ಹೀಗೆ ಆಗಿದೆ. ಅದನ್ನು ೨೨೦ಕ್ಕೆ ತೆಗೆದುಕೊಂಡು ೪೫೦ಕ್ಕೆ ಮಾರಿದ್ದಾರೆ. ಹೆಸರು ೪೨೦ಕ್ಕೆ ತೆಗೆದು ಕೊಂಡು ೮೫೦ಕ್ಕೆ ಮಾರಿದ್ದಾರೆ. ಬಡವರಿಗೆ ಸಹಾಯ ಮಾಡುವ ಪದ್ಧತಿ ಇದೆಯೋ ? ಎಂದು ನಾನು ಕೇಳುತ್ತಿದ್ದೇನೆ. ಇದ್ದೆಲ್ಲಾ ಮಾಡಿದರೂ ಕೂಡಾ ಮಾರಾಟ ಮಾಡಿದಂತಹ ಹಣ ಸರಿಯಾಗಿ ವಿನಿಯೋಗ ಆಗುತ್ತಿದೆಯೋ ಎಂಬುದನ್ನು ನೋಡಬೇಕಾಗುತ್ತದೆ. ಒಟ್ಟಿನಲ್ಲಿ ಈ ವಿಷಯದಲ್ಲಿ ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಹೀಗೆಲ್ಲಾ ಇರುವಾಗ ಈ ನಿಗಮಕ್ಕೆ ಏತಕ್ಕೆ ತಾವುಗಳು ಹೆಚ್ಚಿಗೆ ಹಣವನ್ನು ಕೊಡುತ್ತೀರಿ ಎಂದು ಕೇಳುತ್ತಿದ್ದೇನೆ. ಅಲ್ಲಿನವರಿಗೆ ಅಲ್ಲಿ, ಇಲ್ಲಿ, ಅಡ್ಡಾಡಿ ಬಂದು ಮತ್ತೆ ಶರೆ ಕುಡಿಯಲಿಕ್ಕಾಗಿ ಕೊಡುತ್ತಿದ್ದೀರಾ ? ಅಥವಾ ಕುಡಿದು ಬಂದು ಉರುಲು ಹಾಕಿಕೊಳ್ಳುವುದಕ್ಕೆ ಕೊಡುತ್ತಿದ್ದೀರಾ ? ಹೀಗೆಲ್ಲಾ ನೀವು ಸರಿಯಾಗಿ ಮೊದಲು ನಿಯಂತ್ರಣ ಮಾಡಿದ್ದರೆ ಪಾಪ, ಆ ಕುಸುಮಾಕರ ಸಾಯುತ್ತಾ ಇರಲಿಲ್ಲ. ಕೈಬಾರಿ ಹೋದವನು ಅವನು. ಅವನು ಖರ್ಚು ಮಾಡತಕ್ಕಂತಹ ಹಣ, ನೀವು ಕೊಡತಕ್ಕಂತಹ ಹಣ ಮಿತಿ ಮೀರಿದಾಗ ಅವನು ಎಲ್ಲಿ ಸಿಗುತ್ತದೋ ಅಲ್ಲಿ ತೆಗೆದುಕೊಳ್ಳಲಿಕ್ಕೆ ಪ್ರಾರಂಭ ಮಾಡಿದ ಸಿ. ಓ ಡಿ. ಇನ್ವೆಸ್ಟಿಗೇಶನ್ ಆಯಿತು. ಆದರೆ ಸಿ. ಓ. ಡಿ. ರಿಪೋರ್ಟ್ ಒಬ್ಬ ಸತ್ತಮೇಲಾದರೂ ನಮ್ಮ ಕೈಗೆ ಬರಬೇಕಾಗಿತ್ತು. ಇನ್ನೂ ಅದು ಬಂದಿಲ್ಲ. ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನ ಸಲುವಾಗಿ ಹೋದ ಅಧಿವೇಶನದಲ್ಲಿ ಅನೇಕ ಸದಸ್ಯರು ತಕರಾರು ಮಾಡಿದಾಗ ಒಂದು ಸಿ. ಓ. ಡಿ. ತನಿಖೆಗೆ ಆಜ್ಞೆಯಾಯಿತು. ಆ ತನಿಖೆಯಲ್ಲಿ ಏನಾಯಿತು ಅಂದರೆ, ತನಿಖೆಯೊಳಗೆ ಒಬ್ಬನ ಮೇಲೆ ಬ್ರೆಂಡಿಂಗ್ ಬಂದು, ಅದು ಅವನಿಗೆ ಕಳ್ಳ ರೀತಿಯಿಂದ ತಿಳಿಯಲ್ಪಟ್ಟಿತ್ತು, ತಿಳಿದ ಕೂಡಲೇ ಅವನು ಸತ್ತುಹೋಗಿ ಬಿಟ್ಟ. ಅಂತೂ ಒಬ್ಬ ಆಫೀಸರ್ ಸತ್ತು ಹೋದ. ಅದರ ಮೇಲಾದರೂ ನಿಮ್ಮ ವರದಿ ಬಂದಿಲ್ಲ. ನಿಮಗೆ ಇನ್ನೂ ಕೆಲವರನ್ನು ಕೊಲ್ಲಬೇಕೆಂದು ಇಚ್ಛೆ ಇದೆಯೋ ? ವರದಿ ಶೀಘ್ರವಾಗಿ ಬರಬೇಕೆಂದು ನಾನು ಕೇಳಿ ಕೊಳ್ಳುತ್ತೇನೆ. ಆದುದರಿಂದ ದಕ್ಷರಾದ ನಮ್ಮ ಮಾನ್ಯ ರಾಚಯ್ಯನವರು, ಸಂಬಂಧಪಟ್ಟ ಆಫೀಸರ್‌ಗಳನ್ನು ಕರೆದು ಅವರಿಗೆ ತ್ವರಿತವಾಗಿ ಯಾವುದೇ ಸಿ. ಓ. ಡಿ. ತನಿಖೆಗಳು ತಮಗೆ ತಲುಪುವಂತೆ ಮಾಡಬೇಕೆಂದು ಹೇಳಬೇಕು. ತಾವುಗಳು ಈ ವಿಚಾರದಲ್ಲಿ ಸೂಕ್ತ ವಿಚಾರ ಮಾಡಬೇಕು.

ಮಾನ್ಯ ಅಧ್ಯಕ್ಷ ಮಹೋದಯರೇ, ಕೆಲವು ವಿಚಿತ್ರವಾದಂತಹ ಪದ್ಧತಿಗಳು ಈ ಡಿಪಾರ್ಟ್‌ಮೆಂಟ್‌ನಲ್ಲಿ ಬರುತ್ತವೆ, ಏತಕ್ಕಾಗಿ ಬರುತ್ತವೆ ಎಂದು ತಿಳಿಯುತ್ತಿಲ್ಲ. ಮಾನ್ಯ ಪ್ರಕಾಶ್‌ರವರು ಗಮನಿಸುವುದಾದರೆ ಒಂದು ವಿಷಯವನ್ನು ಹೇಳ ಬಯಸುತ್ತೇನೆ. ಈ ಸಾಯಿಲ್ ಕನ್‌ಸರ್‌ವೇಶನ್ ಆಫೀಸಗಳ ವಿಚಾರದಲ್ಲಿ ೧೮-೪-೮೫ ರಂದು, ಈ ಸದನ ನಡೆಯುವುದಕ್ಕಿಂತ ಸ್ವಲ್ಪ ಪೂರ್ವದಲ್ಲಿ ಒಂದು

ಆರ್ಡರ್‌ನ್ನು ಹೊರಡಿಸಿದ್ದಾರೆ. ಅದರಲ್ಲಿ ಸುಮಾರು ೧೬ ಆಫೀಸರ್‌ಗಳನ್ನು ಬೇರೆ ಬೇರೆ ಕಡೆಗೆ ಶಿಫ್ಟ್ ಮಾಡಿದ್ದಾರೆ. ಇದರೊಳಗೆ ಸುದೈವದಿಂದ ನಮ್ಮ ಗದಗ್‌ನವರದ್ದು ಬಂದಿಲ್ಲ. ಅವರದ್ದೂ ಆರ್ಡರ್ ಮಾಡಿದ್ದರು. ಮಾಡಿಕೊಟ್ಟ ಮೇಲೆ ನಾನು ಮಾನ್ಯ ಮುಖ್ಯ ಮಂತ್ರಿಯವರಿಗೆ ಒಂದು ಪತ್ರವನ್ನು ಬರೆದೆ. ನಾನು ಬರೆದ ಪತ್ರಕ್ಕೆ ಅವರು ಒಂದು ಮತ್ತು ಉತ್ತರವನ್ನು ಕೊಟ್ಟರು. ಅದು ಹೀಗೆ ಇದೆ—

''ಮಾನ್ಯ ಪಾಟೀಲರವರಿಗೆ, ತಾವು ದಿನಾಂಕ ೨೮–೪–೮೫ ರಂದು ಪತ್ರ ಬರೆದು, ಗದಗ್‌ನಲ್ಲಿನ ಭೂಸಂರಕ್ಷಣ ಕಚೇರಿಯನ್ನು ಹಿರೇಕೆರೂರಿಗೆ ಸ್ಥಳಾಂತರಿಸಿರುವ ವಿಚಾರದ ಬಗ್ಗೆ ಪ್ರಸ್ತಾಪಿಸಿದ್ದೀರಿ. ಗದಗ್ ತಾಲ್ಲೂಕು ಕೃಷಿ ವಿಚಾರದಲ್ಲಿ ಬಹಳ ಪ್ರಾಮುಖ್ಯವಾದಂತಹ ತಾಲ್ಲೂಕು ಆಗಿದ್ದರಿಂದಲೂ ಮತ್ತು ಈಗಾಗಲೇ ಭೂಸಂರಕ್ಷಣಾ ಅಧಿಕಾರಿಯು ಈ ತಾಲ್ಲೂಕಿಗೆ ಸಂಬಂಧಿಸಿದಂತೆ ಕೆಲವು ಯೋಜನೆಗಳನ್ನು ತಯಾರಿಸಿರುವುದರಿಂದಲೂ ಆ ಕಚೇರಿಯನ್ನು ಗದಗ್‌ನಿಂದ ಸ್ಥಳಾಂತರಿಸಬಾರದು ಎಂದು ನೀವು ಕೋರಿದ್ದೀರಿ. ಈ ನಿಮ್ಮ ಕೋರಿಕೆಯನ್ನು ಕೂಡಲೇ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಸರಕಾರದ ಕಾರ್ಯದರ್ಶಿ ವ್ಯವಸಾಯ ಮತ್ತು ತೋಟಗಾರಿಕೆ ಇಲಾಖೆ ಇವರಿಗೆ ಸೂಚಿಸಿದ್ದೇನೆ'' ಇದನ್ನು ಬರೆದು ನನಗೆ ಸಮಜಾಯಿಷಿ ಕೊಟ್ಟ ಮಾನ್ಯ ಮುಖ್ಯ ಮಂತ್ರಿಗಳಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಾನು ಕೋರಿದ ವಿಷಯದಲ್ಲಿ ಮುಂದೆ ಏನು ಆಗುತ್ತದೋ ಏನೋ ಗೊತ್ತಿಲ್ಲ. ಅದು ಹಾಗೆಯೇ ಆಗಲಿ. ನಾನು ಕೇಳುವುದು ಇಲಾಖೆಯವರು ಏತಕ್ಕಾಗಿ ಇದನ್ನು ಮಾಡುತ್ತಿದ್ದಾರೆ ? ಅಲ್ಲಿ ಸಾಯಿಲ್ ಕನ್‌ಸರ್ವೇಶನ್ ಮಾಡಲಿಕ್ಕೆ ನಿಮ್ಮಲ್ಲಿ ಹಣ ಇಲ್ಲ ಎಂದು ಹೇಳುತ್ತಿದ್ದೀರಿ. ಇಂತಾದ್ದರೊಳಗೆ ಮಾಡುವವರಿಗೆ ಟೆಕ್ನಿಕಲ್ ನೋಹೌ ಕೊಡುವ ಬಗ್ಗೆ ವಿಚಾರ ಮಾಡದೇ ಹೀಗೆ ಮಾಡುವುದು ಸೂಕ್ತವೇ ಎಂದು ನಾನು ಪ್ರಶ್ನಿಸುತ್ತಿದ್ದೇನೆ. ಹಾಗೆಯೇ ವರ್ಗಾವಣೆಯ ವಿಚಾರದಲ್ಲಿಯೂ ತುಂಬಾ ಅಸಮರ್ಪಕ ಕಾರ್ಯ ನಡೆಯುತ್ತಿದೆ. ಈ ಸಿಬ್ಬಂದಿಯವರು ಯಾವ ಸರಕಾರವಿದ್ದರೂ ಕೂಡಾ ಹೇಗಾದರೂ ಮಾಡಿಕೊಂಡು ತಮ್ಮ ಕೆಲಸವನ್ನು ಮಾಡಿಕೊಂಡುಬಿಡುತ್ತಾರೆ. Further it is felt necessary to shift some more agriculture Offices/Units for taking up Soil Conservation Work effectively. in stipulated time in the districts approved here in. ಆಮೇಲೆ ೯ ಜಿಲ್ಲೆಯವರಿಗೂ ಮಾಡಿದರು. ಒಬ್ಬ ಅಗ್ರಿಕಲ್ಚರ್ ಆಫೀಸರ್‌ನ್ನು ಬೆಂಗಳೂರಿನಿಂದ ಕನಕಪುರಕ್ಕೆ ಹಾಕಿದರು. ಮುಳಬಾಗಿಲಿನಿಂದ ಶಿಡ್ಲಘಟ್ಟಕ್ಕೆ ಹಾಕಿದರು. ಕೋಲಾರದಲ್ಲಿದ್ದವರನ್ನು ಬಾಗೇಪಲ್ಲಿಗೆ ಹಾಕಿದರು, ಪಾವಗಡದವರನ್ನು ಮಾಳವಳ್ಳಿಗೆ, ತಿಪಟೂರಿನವರನ್ನು ಗುಬ್ಬಿಗೆ, ಹೀಗೆ. ಒಂದಕ್ಕೊಂದು ತಾಳ ತಂತಿ ಇಲ್ಲದ ಹಾಗೆ ಮಾಡಿದ್ದೀರಿ. ಏಕೆ ಹೀಗೆ ಮಾಡಿದ್ದೀರಿ ? ಯಾರ್‍ಯಾರನ್ನು ಎಲ್ಲಿಗೆ ಕಳುಹಿಸಿದ್ದೀರಿ, ಅಲ್ಲಿ ಅವರ ವರ್ಕ್ಸ್ ತೃಪ್ತಿಕರವಾಗಿದೆಯೇ ಎಂದು ನೀವು ಕೇಳಲಿಕ್ಕೆ ಹೋಗಲಿಲ್ಲ. ೧೯ ಮಂದಿಯನ್ನು ವರ್ಗ ಮಾಡುವಂತಹ ಅಧಿಕಾರ ನಿಮಗೂ ಸಹಿತ ಇರಲಿಕ್ಕಿಲ್ಲ. ಆದರೆ ಒಬ್ಬ ಡೈರೆಕ್ಟರ್ ೧೯ ಮಂದಿಯನ್ನು ಯದ್ವಾತದ್ವಾ ವರ್ಗಾವಣೆ ಮಾಡುತ್ತಾರೆ ಎಂದರೆ ಇದಕ್ಕಿಂತ ಬೇಜವಾಬ್ದಾರಿ ವರ್ತನೆ ಬೇರೆ ಕಾಣುವುದಿಲ್ಲ. ನಾನೇ ಇವೊತ್ತು ಡೈರೆಕ್ಟರ್ ಆಗಿರುವಂತಹವರನ್ನು ಬಹಳ ಅಭಿಮಾನದಿಂದ ಮೇಲೆ ಕೂರಿಸಿದ್ದು. ಆದರೆ ಇವೊತ್ತು ಆಗಿರುವಂತಹ ಸ್ಥಿತಿಗತಿಗಳನ್ನು ನೋಡಿದರೆ ನನ್ನ ಮನಸ್ಸು ಬಹಳ ನೊಂದುಕೊಳ್ಳುತ್ತಿದೆ ಅವರ ಬಗ್ಗೆ ನಾನು ಗಂಭೀರವಾದಂತಹ ಆರೋಪಗಳನ್ನು ಇಲ್ಲಿ ಮಾಡಲಿಕ್ಕೆ ಇಚ್ಛೆಪಡುವುದಿಲ್ಲ, ಏಕೆಂದರೆ ನಿಯಮದ ಪ್ರಕಾರ ನಾನು ಆ ರೀತಿ ಮಾಡುವುದು ವಿಹಿತವಲ್ಲ. ನನ್ನಂತಹ ಅನುಭವಿಕ ಸದಸ್ಯರು ಅದನ್ನು ಮಾಡುವುದೂ ಸರಿಯಲ್ಲ ಎಂದು ನಾನು ಅಂದುಕೊಂಡಿದ್ದೇನೆ.

ಆದರೆ ಒಂದು ಮಾತನ್ನು ಹೇಳುತ್ತೇನೆ. ಸಿಕ್ಕಾಪಟ್ಟೆ ಆರ್ಡರ್ಸ್ ಮಾಡಿ ಡಿಪಾರ್ಟ್‌ಮೆಂಟ್ ಜನರ ಮನಸ್ಸನ್ನು ನೋಯಿಸುವಂತಹ ರೀತಿಯಲ್ಲಿ ಅವರು ಕೆಲಸ ಮಾಡಿರುವುದನ್ನು ನೋಡಿದರೆ ನಾವು ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ಆಮೇಲೆ ಇವತ್ತು ಇಲ್ಲಿಯವರೆಗೆ ನಿಮ್ಮ ನೌಕರಿ ಸಿಬ್ಬಂದಿ ವರ್ಗದವರ ಸೀನಿಯಾರಿಟಿ ಲಿಸ್ಟ್ ಆಗಿಲ್ಲ. ಹೈದ್ರಾಬಾದ್ ಪ್ರಾಂತದಿಂದ ಬಂದಂತಹ ಜನರು ಇವತ್ತು ಕೋರ್ಟಿಗೆ ಹೋಗಿದ್ದಾರೆ. ಆ ರಿಟ್ ಅರ್ಜಿ ನಂಬರು ೧೨೪೪೦/೧೯೭೮ ಆ ಬಗ್ಗೆ ಹೈಕೋರ್ಟ್‌ನವರು ಒಂದು ಆರ್ಡರ್‌ನ್ನು ಕೂಡ ಮಾಡಿದ್ದಾರೆ. ಆ ಆರ್ಡರ್ ೧೯೮೫ನೇ ಜುಲೈ ೨೩ರಂದು ಆಗಿದೆ, ಈ ರಿಟ್ ಅರ್ಜಿಯಲ್ಲಿ ಸುಮಾರು ೨೪ ಜನರು ಇದ್ದಾರೆ. ಅವರ ಎದುರಾಳಿಗಳು ಸುಮಾರು ೪೯–೫೦

ಜನರು ಇದ್ದಾರೆ. ಡಿಪಾರ್ಟ್‌ಮೆಂಟ್‌ನವರು ಮಾಡಿರುವುದು ಅನ್ಯಾಯವೆಂದು ಹೈಕೋರ್ಟ್‌ನವರು ತಮ್ಮ ತೀರ್ಪನ್ನು ಸಹ ಕೊಟ್ಟಿದ್ದಾರೆ. ತಾವು ಒಂದು ವೇಳೆ ಹೇಳಿದರೂ ಹೇಳಬಹುದು. ನಾವು ಯೂನಿಯನ್‌ಗೆ ಬರೆದಿದ್ದೇವೆಂದು. ಆ ಯೂನಿಯನ್‌ನಿಂದ ಬರುವ ತನಕ ತಾವು ಅಡ್ಜಸ್ಟ್‌ಮೆಂಟ್ ಮಾಡಬಹುದಿತ್ತಲ್ಲವೇ? ಆ ಕೆಲಸವನ್ನು ತಾವು ಏತಕ್ಕೆ ಮಾಡಲಿಲ್ಲ? ಈ ಬಗ್ಗೆ ಈಗಾಗಲೇ ಹೈಕೋರ್ಟಿನ ಆರ್ಡರ್ ಬಂದಿದ್ದರೂ ಸಹ ತಾವು ಅದನ್ನು ಏತಕ್ಕೆ ಇಂಪ್ಲಿಮೆಂಟ್ ಮಾಡಿಲ್ಲ? ಕೆಟ್ಟ ಕೆಲಸ ಮಾಡಬೇಕಿದ್ದರೆ ತಾವು ತಕ್ಷಣ ಕ್ರಮ ತೆಗೆದುಕೊಳ್ಳುತ್ತಿದ್ದಿರಿ. ಕೆಟ್ಟದ್ದು ಆದರೆ ಸ್ಟೇ ಆರ್ಡರ್ ತರುವುದಕ್ಕೆ ಹೇಳುತ್ತೀರಿ. ಆದರೆ ಚಲೋ ಕೆಲಸ ಇರುವುದನ್ನು ತಾವು ಏತಕ್ಕೆ ಮಾಡಬಾರದು? ತಾವು ಮಂತ್ರಿಗಳಾಗಿ ಎಷ್ಟೇ ನಿಷ್ಪಕ್ಷಪಾತವಾಗಿ ಕೆಲಸ ಮಾಡಿದರೂ ಕೂಡ ತಮ್ಮ ಮೇಲೆ ಪಕ್ಷಪಾತಿಗಳು ಎನ್ನುವಂತಹ ಒಂದು ಆಪಾದನೆ ಇಂತಹ ಜನರಿಂದ ಬರುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭ ದಲ್ಲಿ ಹೇಳಬೇಕಾಗುತ್ತದೆ. ಇವತ್ತು ಅಗ್ರಿಕಲ್ಚರ್ ಡೈರೆಕ್ಟರ್ ಸಂಪತ್‌ರವರು ಇದ್ದಾರೆ, ಹೈಕೋರ್ಟಿನ ಒಂದು ತೀರ್ಮಾನದ ಪ್ರಕಾರ ಅವರು ೭ನೇ ಸ್ಥಾನದಲ್ಲಿ ಬರುತ್ತಾರೆ. ಇದರಲ್ಲಿ ಈಗಾಗಲೇ ಕೆಲವರು ನಿವೃತ್ತಿಯಾಗಿದ್ದಾರೆ ಅವರ ಒಂದು ಶಾಪ ನಿಮಗೆ ತಟ್ಟುತ್ತದೆ. ೭ನೇ ಸ್ಥಾನದಲ್ಲಿದ್ದವರನ್ನು ತಾವು ಇವತ್ತು ಡೈರೆಕ್ಟರ್ ಆಗಿ ನೇಮಕ ಮಾಡಿದ್ದೀರಿ. ಇವರು ತಮ್ಮ ಕೈಯಲ್ಲಿ ಅಧಿಕಾರ ಇದೆ ಎಂದು ತಿಳಿದುಕೊಂಡು ಸಿಕ್ಕಾಪಟ್ಟೆ ವರ್ಗಾವಣೆಯನ್ನು ಮಾಡಿದ್ದಾರೆ. ಇದರಿಂದ ತಮಗೆ ಹೆಚ್ಚಿನ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಆಗುತ್ತದೆಯೇ? ಇದು ಸೂಕ್ತವೇ? ಮಾನ್ಯ ಮಂತ್ರಿಗಳಿಗೆ ಬೇಕಾದರೆ ಹೈಕೋರ್ಟಿನ ಆರ್ಡರ್ ಕಾಪಿಯನ್ನು ಕಳುಹಿಸಿಕೊಡುತ್ತೇನೆ. ಈಗಲೂ ಕೂಡ ಕಾಲವೇನು ಮೀರಿಲ್ಲ. ತಾವು ಆ ಒಂದು ಸೀನಿಯಾರಿಟಿ ಲಿಸ್ಟ್ ಮಾಡಿ ಕೊಡಿ. ಈಗ ತಾವೇನು ಮಾಡಿದ್ದೀರಿ? ಶ್ರೀ ಮಲ್ಲಯ್ಯ ನವರು ಬಂದೀಖಾನೆಯಲ್ಲಿದ್ದರು, ಅವರನ್ನು ತಾವು ತೆಗೆದುಕೊಂಡು ಬಂದು ತೋಟಗಾರಿಕೆ ಇಲಾಖೆಯ ಡೈರೆಕ್ಟರ್ ಆಗಿ ಮಾಡಿದ್ದೀರಿ. ಅವರಿಗೆ ಇನ್ನೂ ಚಲೋ ಜಾಗ ಕೊಡುವುದಕ್ಕೆ ಆಗುತ್ತಿರಲಿಲ್ಲವೇನು? ಅವರು ಬಂದೀಖಾನೆಯ ಸೂಪರಿಂಟೆಂಡೆಂಟ್ ಆಗಿ ಇದ್ದು ಇಲ್ಲಿ ಬಂದು ಡೆವಲಪ್‌ಮೆಂಟ್ ಮಾಡಿ ಎಂದು ಹೇಳಿದರೆ ಏನು ಡೆವಲಪ್‌ಮೆಂಟ್ ಮಾಡುತ್ತಾರೆ? ಅದೇ ಶ್ರೀ ಸಂಪತ್‌ರವರಿಗೆ ತೋಟಗಾರಿಕೆ ಇಲಾಖೆಯನ್ನು ಕೊಟ್ಟು ಡೆವಲಪ್‌ಮೆಂಟ್ ಮಾಡಿ ಎಂದು ಹೇಳಿದ್ದರೆ ಅವರು ಡೆವಲಪ್‌ಮೆಂಟ್ ಮಾಡುವುದಕ್ಕೆ ಅನುಕೂಲವಾಗುತ್ತಿತ್ತು. ಇವತ್ತು ಯಾರು ಡಿಪಾರ್ಟ್‌ಮೆಂಟ್‌ನಲ್ಲಿ ಸೀನಿಯರ್ ಆಗಿದ್ದರೋ ಅವರನ್ನು ತಾವು ಡೈರೆಕ್ಟರ್ ಆಗಿ ಮಾಡಿ. ಅವರು ಲಿಂಗಾಯಿತರಾಗಿರಬಹುದು, ಅಥವಾ ಇನ್ನು ಬೇರೆ ಯಾವುದೇ ಜಾತಿಯವನಾಗಿರಬಹುದು. ಯಾವುದೇ ಆಪಾದನೆ ಬರಲಿ ಸೀನಿಯಾರಿಟಿ ಪ್ರಕಾರ ಆ ಜಾಗದಲ್ಲಿ ಅರ್ಹರನ್ನು ಕೂರಿಸಬಹುದಿತ್ತು ಆಗ ನಿಮಗೂ ಹೆಚ್ಚಿನ ಕೀರ್ತಿ ಬರುತ್ತಿತ್ತು. ಇದರಲ್ಲಿ ಯಾವುದೇ ಭಯ ಮತ್ತು ಅಂಜಿಕೆಪಡುವಂತಹ ವಿಷಯವಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ತಮಗೆ ಅನೇಕ ಜನರು ವರದಿಯನ್ನು ಕೊಟ್ಟಿರಬಹುದು. ತಾವು ಅಧಿ ಕಾರಿಗಳನ್ನು ವರ್ಗಾವಣೆ ಮಾಡಿದಾಗ ಅವರು ಮನಸ್ಸಿಲ್ಲದೆ ಅಲ್ಲಿಗೆ ಹೋಗಿರುತ್ತಾರೆ. ಅಂತಹವರ ಕೈಯಲ್ಲಿ ತಾವು ಯಾವ ರೀತಿ ಕೆಲಸವನ್ನು ತೆಗೆದುಕೊಳ್ಳುತ್ತೀರಿ? ಆಗ ನಿಮಗೆ ಕೂಡ ಸ್ವಲ್ಪ ಸಿಟ್ಟು ಬರಬಹುದು. ನಮ್ಮ ಡೈರೆಕ್ಟರ್ ಇನ್ನು ಚಿಕ್ಕವಯಸಿನವರಿದ್ದಾರೆ. ಅವರಿಗೂ ಕೂಡ ಸ್ವಲ್ಪ ಸಿಟ್ಟು ಬರಬಹುದು. ಆಗ ಏನು ಮಾಡುತ್ತಾರೆ. ನಿಮ್ಮ ಡೈರಿಯನ್ನು ನಾನು ಚೆಕ್ ಮಾಡುವುದು ಆಗ ನೋಡು ನಿನ್ನ ಏನು ಮಾಡುತ್ತೇನೆಂದು ಹೇಳಬಹುದು. ಅಡಿಶನಲ್ ಡೈರೆಕ್ಟರ್ ಅವರ ಡೈರಿಯನ್ನು ಡೈರೆಕ್ಟರ್ ಚೆಕ್ ಮಾಡು ವಂತಹ ಒಂದು ಕೆಲಸವನ್ನು ಅವರು ಮಾಡುತ್ತಿದ್ದಾರೆ. ಸಾಮಾನ್ಯವಾಗಿ ನಾನು ಮಂತ್ರಿಯಾಗಿದ್ದಾಗ ಡಿಸ್ಟ್ರಿಕ್ ಅಗ್ರಿಕಲ್ಚರ್ ಆಫೀಸರ್ಸ್ ಕಾರನ್ನು ಅವರೇ ಉಪಯೋಗಿಸಿಕೊಳ್ಳುವ ಅಧಿಕಾರ ಇತ್ತು. ಕಾಟನ್ ಡೆವಲಪ್‌ಮೆಂಟ್ ಅಧಿಕಾರಿಗಳಿಗೂ ಇತ್ತು. ಆದರೆ ಇವತ್ತು ಒಬ್ಬ ಅಡಿಶನಲ್ ಡೈರೆಕ್ಟರ್‌ರವರು ಡೈರೆಕ್ಟರ್ ಸರಿಸಮಾನ. ಅಂತಹವರು ಕಾರು ಬೇಕಾದರೆ ಬೇರೆಯವರನ್ನು ಕೇಳಬೇಕೇ? ಇದು ನಾಚಿಕೆ ಪಡುವಂತಹ ವಿಷಯ. ತಾವು ಅಧಿಕಾರಿಗಳನ್ನು ಒಂದು ರೀತಿಯಲ್ಲಿ ಬಾಂಡೆಡ್ ಲೇಬರ್ಸ್ ತರಹ ನೋಡಿಕೊಳ್ಳುತ್ತಿದ್ದೀರಿ. ತಾವು ಅವರನ್ನು ಗುಲಾಮಗಿರಿಯಿಂದ ನೋಡಿಕೊಳ್ಳುತ್ತಿದ್ದೀರಿ? ಈ ಒಂದು ಬಾಂಡೆಡ್ ಲೇಬರ್ ಸಿಸ್ಟಂ ಇವತ್ತು ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿನಲ್ಲಿ ಇದೆ. ಈ ಮಾತನ್ನು ನಾನು ಇವತ್ತು ಹೇಳ ಬೇಕಾಗಿದೆ. ನಾವು ಯಾರೇ ಮಾಡಿರಲಿ ಅದನ್ನು ನೀವು ತಿದ್ದುವಂತಹ ಕೆಲಸ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಗೃಹಸಚಿವರು ಕೂಡ ಇದ್ದಾರೆ. ಆದರೆ ಶ್ರೀ ಬೊಮ್ಮಾಯಿ ಯವರು ಇದ್ದಿದ್ದರೆ ಶಹಬಾಶ್‌ಗಿರಿಯನ್ನು ಕೊಡುತ್ತಿದ್ದರು. ಆದರೆ ಇವತ್ತು ಅವರು ಇಲ್ಲ. ಇನ್ನು

ಸೌಭಾಗ್ಯ ಸೀಡ್ಸ್ ಕಂಪನಿ ಮತ್ತು ಮತ್ತೊಂದು ಕಂಪನಿಯಲ್ಲಿ ಸೀಡ್ಸನ್ನು ಖರೀದಿ ಮಾಡಿ ಇದುವರೆವಿಗೂ ಠರಾವು ಮಾಡಿಲ್ಲ. ಆದರೂ ಕೂಡ ಅಪ್ರೂವಲ್ ಕೊಟ್ಟಿದ್ದೀರಿ. ಇವೆಲ್ಲವನ್ನು ನೋಡಿ ನಾವು ಸುಮ್ಮನೆ ಕುಳಿತುಕೊಂಡಿರಬೇಕೆಂದು ಹೇಳಿದರೆ ಹೇಗೆ? ಅವ್ಯವಹಾರಕ್ಕೆ ಯಾವುದಾದರೂ ಡೆಫನೇಷನ್ಸ್ ಇದೆಯಾ? ಒಂದು ವೇಳೆ ಇದ್ದರೆ ಹೇಳಿದರೆ ಒಳ್ಳೆಯದು. ಸಾರ್ವಜನಿಕರ ಹಣವನ್ನು ಈ ಅಧಿಕಾರಿ ವರ್ಗದವರು ಯಾವ ರೀತಿಯಲ್ಲಿ ಬಳಸಿಕೊಳ್ಳುತ್ತಾರೆ ಎನ್ನುವುದನ್ನು ನಾನು ವಿಧಿ ಇಲ್ಲದೆ ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ನಾನು ಚುನಾಯಿತ ಪ್ರತಿನಿಧಿಯಾಗಿ ಈ ವಿಷಯವನ್ನು ಪ್ರಸ್ತಾಪ ಮಾಡದಿದ್ದರೆ ನನ್ನ ಕರ್ತವ್ಯಲೋಪ ಮಾಡಿದಂತೆ ಆಗುತ್ತದೆ. ಈ ದೃಷ್ಟಿಯಿಂದ ನಾನು ಈ ಮಾತನ್ನು ಹೇಳಲೇ ಬೇಕಾಗುತ್ತದೆ. ಇದುವರೆವಿಗೂ ಠರಾವು ಆಗಿಲ್ಲವೆಂದರೆ ನಾವು ಎಲ್ಲರೂ ನಾಚಿಕೆ ಪಡುವಂತಹ ವಿಷಯ. ಯಾರಾದರೂ ಒಬ್ಬ ಹರಿಜನ ವ್ಯಕ್ತಿ ೧೨ ರೂಪಾಯಿಗಳನ್ನು ತಿಂದು ಹಾಕಿದರೆ ಅವನನ್ನು ಹಿಡಿದುಕೊಂಡು ಬಂದು ಜೈಲಿಗೆ ಹಾಕುತ್ತೀರಿ. ಇವರನ್ನು ತಾವು ಏನು ಮಾಡುತ್ತೀರಿ? ಇವರು ಲಕ್ಷಾಂತರ ರೂಪಾಯಿಗಳನ್ನು ತಿಂದು ಹಾಕಿದ್ದಾರೆ. ಇವರು ಹೈದ್ರಾಬಾದಿನಲ್ಲಿ ಬೀಜವನ್ನು ಖರೀದಿ ಮಾಡಿದ್ದಾರೆ. ಬೀಜ ಬಂತೋ ಇಲ್ಲವೋ ಗೊತ್ತಿಲ್ಲ. ಅಗ್ರಿಕಲ್ಚರ್ ಯೂನಿವರ್ಸಿಟಿಯವರು ರೈತರಿಗೆ ತರಬೇತಿಯನ್ನು ಕೊಡುತ್ತಾರೆ. ಅವರು ಈ ಬಗ್ಗೆ ಒಂದು ಮಾತನ್ನು ಹೇಳಿದ್ದಾರೆ. ಅದೇನೆಂದರೆ ನೀವು ಸಣ್ಣ ಸಣ್ಣ ಪ್ಲಾಟಿನಲ್ಲಿ ತರಬೇತಿಯನ್ನು ಕೊಟ್ಟರೆ ನಾವು ದೊಡ್ಡ ದೊಡ್ಡ ಭೂಮಿಯಲ್ಲಿ ತರಬೇತಿಯನ್ನು ಕೊಡುತ್ತೇವೆಂದು. ಈ ದಿಸೆಯಲ್ಲಿ ಇನ್ನು ಹೆಚ್ಚು ಪ್ರಸ್ತಾಪ ಮಾಡಬಹುದು. ಈ ದಿಸೆಯಲ್ಲಿ ಸಿ.ಒ.ಡಿ. ತನಿಖೆ ಇದೆ. ಇವರು ವರದಿಯನ್ನು ಕೊಟ್ಟ ಮೇಲೆ ಇವರ ವರದಿಯ ಮೇಲೆ ಮತ್ತೊಂದು ಸಿ.ಒ.ಡಿ. ತನಿಖೆಯನ್ನು ನೇಮಿಸುವಂತೆ ಆಗಬಾರದು. ಇನ್ನು ಸಾಯಿಲ್ ಕನ್ಸರ್‌ವೇಷನ್‌ಗೆ ತಾವು ಎಷ್ಟು ಹಣವನ್ನು ಇಟ್ಟಿದ್ದೀರಿ? ಡ್ರೈಲ್ಯಾಂಡ್ ಬೋರ್ಡ್ ಮಾಡಿದ್ದೀರಿ. ಈ ಡ್ರೈಲ್ಯಾಂಡ್ ಬೋರ್ಡಿನ ಸದಸ್ಯರು ಅಲ್ಲಿ ಹಣವಿಲ್ಲವೆಂದು ಹೇಳಿ ಎಲ್ಲರೂ ರಾಜೀನಾಮೆಯನ್ನು ಕೊಡುತ್ತಿದ್ದಾರೆ. ಹೀಗಿರುವಾಗ ತಾವು ಸಾಯಿಲ್ ಕನ್ಸರ್‌ವೇಷನ್‌ಗೆ ಎಷ್ಟು ಹಣವನ್ನು ಖರ್ಚು ಮಾಡುತ್ತೀರಿ? ತಾವು ತಮ್ಮ ಸಿಬ್ಬಂದಿಯ ಪಗಾರಕ್ಕೆ ಎಷ್ಟು ಹಣವನ್ನು ಖರ್ಚು ಮಾಡುತ್ತೀರೋ ಅಷ್ಟು ಹಣವನ್ನು ಕೂಡ ಈ ಸಾಯಿಲ್ ಕನ್ಸರ್‌ವೇಷನ್‌ಗೆ ಖರ್ಚು ಮಾಡುತ್ತಿಲ್ಲ.

ನಾಳೆ ನೀವೇ ಮಾಡುತ್ತೀರಿ. ನಿಮಗೆ ಗೊತ್ತಾಗುತ್ತದೆ. ಧಾರವಾಡವನ್ನು ನೀವು ಮರೆತರೂ ಪರವಾಗಿಲ್ಲ. ಆದರೆ ರಾಯಚೂರನ್ನು ಮರೆಯಬಾರದೆಂದು ಹೇಳಬಯಸುತ್ತೇನೆ. ಏಕೆಂದರೆ ಅಲ್ಲಿ ಹತ್ತಿ, ಸೇಂಗಾ, ಎಣ್ಣೆಕಾಳು ಎಲ್ಲಾ ಬೆಳೆಯುತ್ತದೆ. ಇಂಥ ಪ್ರಮುಖ ಸ್ಥಾನದಲ್ಲಿ ಸಾಯಿಲ್ ಕನ್ಸರ್ವೇಷನ್ ಮಾಡದಿದ್ದರೆ ನೀವು ಒಂದು ಕ್ರಿಯಾಲೋಪವನ್ನು ಮಾಡಿದಂತಾಗುತ್ತದೆ. ನಮ್ಮ ಜಿಲ್ಲೆಗೆ ೧೯೭೬-೭೭ರಲ್ಲಿ ೭೭ ಲಕ್ಷ ರೂಪಾಯಿ ಮಂಜೂರು ಮಾಡಿದ್ದಾಗ ಖರ್ಚಾದದ್ದು ೧೩೦ ಲಕ್ಷ ರೂಪಾಯಿಗಳು. ೧೯೭೮-೭೯ರ ಸಾಲಿನಲ್ಲಿ ರಾಯಚೂರು ಜಿಲ್ಲೆಗೆ ಸಾಯಿಲ್ ಕನ್ಸರ್ವೇಷನ್‌ಗೋಸ್ಕರ ಒಂದೇ ಒಂದು ಪೈಸೆಯನ್ನೂ ಕೂಡ ಕೊಟ್ಟಿಲ್ಲ. ಏತಕ್ಕೆ ಕೊಡಲಿಲ್ಲ? ಅಲ್ಲಿ ಎಲ್ಲವೂ ಪರಿಪೂರ್ಣವಾಗಿದೆ, ಅಲ್ಲಿಗೆ ಇನ್ನೇನು ಹಣವನ್ನು ಖರ್ಚುಮಾಡಬೇಕಾಗಿಲ್ಲ ಎಂದು ಏನಾದರೂ ತಿಳಿದುಕೊಂಡಿದ್ದೀರಾ ? ಅಲ್ಲಿ ಯಾವುದಕ್ಕೂ ಕೊರತೆ ಇಲ್ಲವೆಂದು ಏನಾದರೂ ಭಾವಿಸಿದ್ದೀರಾ? ಡ್ರೈಲ್ಯಾಂಡ್ ಫಾರ್ಮಿಂಗ್‌ನವರಿಗೆ ಏನು ವ್ಯವಸ್ಥೆ ಮಾಡಿದ್ದೀರಿ? ಸಾಯಿಲ್ ಕನ್ಸರ್ವೇಷನ್‌ಗೆ ನಿಮ್ಮವರನ್ನೇ ನೇಮಕ ಮಾಡಿದ್ದೀರಿ. ತೋಟಗಾರಿಕೆ ಇಲಾಖೆಗೆ ಡಿವಿಜನಲ್ ಕಮಿಷನರ್‌ರವರನ್ನು ಛೇರ್ಮನ್ ಆಗಿ ಮಾಡಿದ್ದೀರಿ. ಈಗ ಅವರು ಯಾವರೀತಿ ಕೆಲಸಮಾಡುತ್ತಿದ್ದಾರೆ? ಸಾಯಿಲ್ ಕನ್ಸರ್ವೇಷನ್‌ನಲ್ಲಿ ನೀವು ಯಾವುದಾದರೊಂದು ಯೋಜನೆಯನ್ನು ಮಂಜೂರು ಮಾಡಿದರೆ ಡೈರೆಕ್ಟರ್ ಆಗಲಿ, ಅಡಿಷನಲ್ ಡೈರೆಕ್ಟರ್ ಆಗಲಿ ಹೋಗಿ ಸೂಪರ್‌ವಿಷನ್ ಮಾಡುತ್ತಾರೆಯೆ? ರೈತ ಎಷ್ಟು ಬದು ಹಾಕಿದ್ದಾನೆಂದು ಅವರು ಹೋಗಿ ನೋಡುತ್ತಾರೆಯೆ? ಹೊಲಗಳಲ್ಲಿ ಯಾವರೀತಿ ಕೆಲಸ ನಡೆಯುತ್ತಿದೆ ಎಂಬುದನ್ನು ತಿಳಿದುಕೊಳ್ಳುತ್ತಾರೆಯೆ?

ಇನ್ನೊಂದು ವಿಚಾರ ಹೇಳುವುದಾದರೆ, ಸರ್ಕಾರದಿಂದ ಬಹಳಷ್ಟು ನಿಗಮಗಳಿಗೆ ಸಾಲವನ್ನು ಕೊಟ್ಟಿದ್ದೀರಿ, ಆದರೆ ಅದನ್ನು ವಸೂಲು ಮಾಡುವ ಕೆಲಸವನ್ನು ಮಾಡಿಲ್ಲ ಅನೇಕ ನಿಗಮಗಳು ಕೋಟಿಗಟ್ಟಲೆ ಹಣವನ್ನು ಸರ್ಕಾರಕ್ಕೆ ಏನು ಕೊಡಬೇಕಾಗಿದೆ ಅದನ್ನು ಕೊಡದೆ ಇವತ್ತು ಡಿಫಾಲ್ಟರ್ ಆಗಿವೆ. ಇವರು ಏತಕ್ಕೆ ಕೊಡಲಿಲ್ಲ? ಇದಕ್ಕೆ ಕಾರಣ ಏನು ಎಂಬುದನ್ನು ತನಿಖೆ ಮಾಡಿದ್ದೀರಾ? ಬೇರೆ ಬಡ ರೈತ ತಮ್ಮಿಂದ ಸಾಲವನ್ನು ತೆಗೆದುಕೊಂಡು ನಾಲ್ಕಾರು ತಿಂಗಳು ವಾಪಸ್ಸು ಕೊಡುವುದಕ್ಕಾಗಲಿಲ್ಲ ಎಂದರೆ ಅವನ ಹೊಲ, ಮನೆ ಹರಾಜಾಕಿ ಅವನಿಗೆ ಏನೂ ಇಲ್ಲದಂತೆ ಮಾಡುತ್ತೀರಿ.

ಇವತ್ತು ನೀವು ಈ ನಿಗಮಗಳಿಗೆ ಕೊಡುತ್ತಿರುವ ಸಬ್ಸಿಡಿ ಹಣ ಏನಿದೆ ಇದು ದುರುಪಯೋಗ ಆಗುತ್ತಿದೆ. ಇದನ್ನೆಲ್ಲಾ ನೋಡಿದರೆ ಇನ್ನು ಮುಂದೆ ಸಬ್ಸಿಡಿ ಹಣ ಕೊಡುವುದನ್ನು ನಿಲ್ಲಿಸಿ ಎಂದು ನಾವು ಕೇಂದ್ರ ಸರ್ಕಾರಕ್ಕೆ ಹೇಳಬೇಕೆನ್ನಿಸುತ್ತದೆ. ನಿಮಗೆ ಯಾವುದೇ ಸಬ್ಸಿಡಿಯನ್ನು ಕೊಟ್ಟರೂ ಅದನ್ನು ಈ ನಿಗಮಗಳಿಗೆ ಕೊಡುತ್ತೀರಿ. ಒಂದು ಟನ್ ಗೊಬ್ಬರಕ್ಕೆ ೨೦೦ ರೂಪಾಯಿಯಂತೆ ಕಮಿಷನ್‌ನನ್ನು ಈ ನಿಗಮದವರಿಗೆ ಕೊಡುತ್ತೀರಿ. ಅದೇ ೨೦೦ ರೂಪಾಯಿಗಳನ್ನು ಮಂಗಳೂರು ಕೆಮಿಕಲ್ಸ್‌ನವರಿಗೆ ಕೊಟ್ಟರೆ ಅವರೇ ನೇರವಾಗಿ ರೈತರಿಗೆ ಗೊಬ್ಬರವನ್ನು ತಂದುಕೊಡುತ್ತಾರೆ.

ಇನ್ನು ಬೀಜ ನಿಗಮದ ಬಗ್ಗೆ ಹೇಳುವುದಾದರೆ, ಕೇಂದ್ರ ಸರ್ಕಾರದಿಂದ ಬರತಕ್ಕ ಸಬ್ಸಿಡಿ ಹಣವನ್ನೆಲ್ಲಾ ತೆಗೆದುಕೊಳ್ಳುತ್ತೀರಿ. ಅದನ್ನು ಮತ್ತೆ ರೈತರಿಗೆ ವಾಪಸ್ಸು ಕೊಡತಕ್ಕ ನೀತಿ ನಿಮ್ಮಲ್ಲಿಲ್ಲ. ರೈತ ಬಾಗಿಲಲ್ಲಿ ನಿಂತೂ ನಿಂತೂ ಬರೀ ಕೈಯಲ್ಲೇ ಹೋಗುತ್ತಿದ್ದಾನೆ. ಇದಕ್ಕೆ ಒಂದು ಉದಾಹರಣೆ ಹೇಳುವುದಾದರೆ, ನಮ್ಮಲ್ಲಿ ಒಬ್ಬ ರೈತ ಇದ್ದ. ಅವನು ಪಂಚಾಯಿತಿ ಛೇರ್ಮನ್ ಆಗಿದ್ದ. ಒಮ್ಮೆ ನನ್ನ ಹತ್ತಿರ ಬಂದು ನೀವು ಇಂಥ ಕಡೆಗೆ ಒಂದು ಫೋನ್ ಮಾಡಿದರೆ ಆ ಕೆಲಸ ಆಗುತ್ತದೆಂದು ಹೇಳಿದ. ಅದರ ಪ್ರಕಾರ ನಾನು ಫೋನ್ ಮಾಡಿದೆ. ಆದರೆ ಅಲ್ಲಿ ಕೆಲಸ ಆಗಲಿಲ್ಲ. ಆಮೇಲೆ ಅವನೇ ಬಂದು ನನಗೆ ಹೇಳಿದ. ನೀವು ಫೋನ್ ಮಾಡಿದರೂ ಆ ಕೆಲಸ ಆಗಲಿಲ್ಲ. ನಾನು ೬೦ ರೂಪಾಯಿಗಳನ್ನು ಅವನಿಗೆ ಕೊಟ್ಟೆ, ತಕ್ಷಣ ಚೆಕ್ಕು ಬಂತು ಎಂದು ಹೇಳಿದ. ನಾನು ಈ ಮಾತನ್ನು ಮಾನ್ಯ ರಾಚಯ್ಯನವರಿಗೆ ಹೇಳಬಹುದಿತ್ತು. ಆದರೆ ಮಾನ್ಯ ರಾಚಯ್ಯನವರು ಪ್ರತಿಯೊಂದಕ್ಕೂ ಪ್ರತ್ಯಕ್ಷ ಪುರಾವೆ ಬೇಕೆಂದು ಕೇಳುತ್ತಾರೆ. ಈ ರೀತಿಯಲ್ಲಿ ನಿಗಮಗಳಲ್ಲಿ ಕೆಲಸವಾಗುತ್ತಿದೆ ಎಂದರೆ ನಮಗೆ ನಾಚಿಕೆಯಾಗುತ್ತದೆ. ಆದ್ದರಿಂದ ಮೊದಲು ಇದನ್ನು ಲಿಕ್ವಿಡೇಟ್ ಮಾಡಬೇಕು.

ಇನ್ನು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ವಿಚಾರದಲ್ಲಿ ಹೇಳುವುದಾದರೆ, ಈ ಕಾರ್ಪೊರೇಷನ್‌ನಲ್ಲಿ ಎಷ್ಟು ಟ್ರ್ಯಾಕ್ಟರ್‌ಗಳಿವೆ? ಎಷ್ಟು ಬೋರ್‌ವೆಲ್‌ಗಳಿವೆ? ಎಷ್ಟು ಬುಲ್ಡೋಜರ್‌ಗಳಿವೆ? ಇದರಿಂದ ಎಷ್ಟು ಆದಾಯ ಬರುತ್ತಿದೆ ಎಂಬುದನ್ನು ತಾವು ಎಂದಾದರೂ ಲೆಕ್ಕ ಹಾಕಿದ್ದೀರಾ? ಇದರಿಂದ ಬರತಕ್ಕ ಆದಾಯ ಇಲ್ಲಿಯ ಸಿಬ್ಬಂದಿ ವರ್ಗದವರಿಗೆ ಸಂಬಳ ಕೊಡಲು ಸಾಕಾಗುವುದಿಲ್ಲ. ಇದಕ್ಕೆ ನನ್ನ ಸಲಹೆ ಎಂದರೆ ನಿಮ್ಮಲ್ಲಿರತಕ್ಕ ಈ ಎಲ್ಲ ಯಂತ್ರಗಳನ್ನೂ ಯಾರಾದರೂ ಒಬ್ಬ ಶೆಟ್ಟಿಗೆ ಕೊಟ್ಟರೆ ಅವನು ನಿಮಗೆ ಪ್ರತಿ ತಿಂಗಳೂ ಸಾವಿರಾರು ರೂಪಾಯಿ ಕೊಡುತ್ತಾನೆ. ಒಂದೊಂದು ಜಿಲ್ಲೆಯಲ್ಲಿಯೂ ಒಂದೊಂದು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನ್ನು ಪ್ರತಿವರ್ಷ ತೆರೆಯಬಹುದು. ಅಷ್ಟೊಂದು ಹಣವನ್ನು ಆ ಶೆಟ್ಟಿ ನಿಮಗೆ ಕೊಡುತ್ತಾನೆ. ೧೯೮೪-೮೫ರ ನಿಮ್ಮ ವರದಿಯಲ್ಲಿ ಕೊಟ್ಟಿರುವ ಪ್ರಕಾರ, ಎಲ್ಲಾ ಜಿಲ್ಲಾ ಕೇಂದ್ರಗಳೂ ಈ ಇಲಾಖೆಯ ಅಧೀನದಲ್ಲಿವೆ, ಈ ವಿಭಾಗದಲ್ಲಿ ೧೧೬ ಬುಲ್ಡೋಜರ್‌ಗಳು, ೭೫ ಟ್ರ್ಯಾಕ್ಟರ್‌ಗಳು, ೭ ಬಾವಿ ಕೊರೆಯುವ ಯಂತ್ರಗಳು, ೨೪ ಬಂಡೆ ಸಿಡಿಸುವ ಯಂತ್ರಗಳು, ಬಾವಿಯಿಂದ ಮಣ್ಣು ಎತ್ತುವ ಕ್ರೇನ್‌ಗಳು ೧೬, ಮತ್ತಿತರೆ ಯಂತ್ರಗಳು ಇವೆಯೆಂದು ಹೇಳಿದ್ದೀರಿ. ಈ ಟ್ರ್ಯಾಕ್ಟರ್‌ಗಳಿಂದ ಎಷ್ಟು ಹಣ ಬಂದಿದೆ ಎಂದು ನೋಡಿದರೆ ೧೦ ರೂಪಾಯಿ ಕೂಡ ಒಂದೊಂದು ಟ್ರ್ಯಾಕ್ಟರ್‌ನಿಂದ ಬಂದಿಲ್ಲ. ಯಾರಾದರೂ ರೈತರು ಬಂದು ಟ್ರ್ಯಾಕ್ಟರ್‌ನ್ನು ಬಾಡಿಗೆಗೆ ಕೇಳಿದರೆ ಸಿಕ್ಕುವುದಿಲ್ಲ ಅವು ಸತತವಾಗಿ ಕೆಲಸಮಾಡುತ್ತಿವೆ ಎಂದು ನಿಮ್ಮ ಅಧಿಕಾರಿಗಳು ಹೇಳುತ್ತಾರೆ. ಹಾಗಾದರೆ ಈ ಟ್ರ್ಯಾಕ್ಟರ್‌ನಿಂದ ಬಂದ ಹಣವೆಲ್ಲಾ ಎಲ್ಲಿ ಹೋಯಿತು? ಅಂದಮೇಲೆ ಈ ಹಣ ಎಲ್ಲೋ, ಯಾವುದೋ ಹಂತದಲ್ಲಿ ದುರುಪಯೋಗವಾಗುತ್ತಿದೆ. ಇದನ್ನು ಕಂಡುಹಿಡಿಯಲು ಸಿ.ಓ.ಡಿ.ಗೆ ಏನಾದರೂ ಒಪ್ಪಿಸಿದ್ದೀರಾ? ಮಾನ್ಯ ಜೀವಿಜಯರವರಿಗೆ ಒಪ್ಪಿಸಿದರೆ ಅವರಿಗೆ ಈ ವಿಚಾರ ಚೆನ್ನಾಗಿ ಗೊತ್ತಿದೆ, ಅವರು ವರದಿ ಮಾಡುತ್ತಾರೆ. ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯವರು ಏನು ವರದಿಯನ್ನು ಕೊಟ್ಟಿದ್ದಾರೆ ಅದರ ಬಗ್ಗೆ ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಹೇಳುತ್ತೀರಾ? ಯಾರಾದರೂ ಆಡಿಟ್‌ನವರು ಆಡಿಟ್ ಮಾಡುವುದಕ್ಕೆ ಹೋದರೆ ಅವರು ಕೇಳಿದಂಥ ಪುಸ್ತಕಗಳನ್ನೇ ಈ ಕಾರ್ಪೊರೇಷನ್‌ನವರು ಕೊಡುವುದಿಲ್ಲ. ಪುಸ್ತಕ ಇಲ್ಲದೆ ಅವರು ಆಡಿಟ್ ಮಾಡುವುದಾದರೂ ಹೇಗೆ? ನನಗೆ ಬಹಳ ದೂರುಗಳು ಈ ಬಗ್ಗೆ ಬಂದಿವೆ. ಇದನ್ನೆಲ್ಲಾ ತಾವು ತನಿಖೆ ಮಾಡಿಸಬೇಕು. ನನ್ನ ಮಾಹಿತಿಯ ಪ್ರಕಾರ ಎಲ್ಲಾ ಖರ್ಚುಗಳದ್ದೂ ಕಳೆದು ಒಂದು ದಿವಸಕ್ಕೆ ಸುಮಾರು ೩೫೦೦ ರೂಪಾಯಿಗಳವರೆಗೂ ಆದಾಯವನ್ನು ಗಳಿಸಬಹುದು. ಹುಬ್ಬಳ್ಳಿ ಟೆಕ್ಸ್‌ಟೈಲ್ ಮಿಲ್‌ನಿಂದ ನಾನು ಹಣ ಕೊಟ್ಟಾಗ ಕಡಿಮೆ ಕೊಟ್ಟೆ ಎಂದು ಗ್ರೋವರ್ ಕಮಿಷನ್ ಮುಂದೆ ನನ್ನನ್ನು ನಿಲ್ಲಿಸಿದರು.

೪-೩೦ ಪಿ. ಎಂ.

ಇವತ್ತು ಆಗ್ರೋ ಇಂಡಸ್ಟ್ರೀಸ್‌ಗಳು ಬಹಳಷ್ಟು ಹೊಲಸಿನಿಂದ ತುಂಬಿವೆ. ಇವುಗಳನ್ನು ಕ್ಲೀನ್ ಮಾಡದೇ ಹೋದರೆ ಸರಿಯಾದ, ಲಾಭವನ್ನು ಕೊಡುವುದಕ್ಕಾಗುವುದಿಲ್ಲ. ಇದಕ್ಕೆ ನಿಮ್ಮವರೇ ಆಗಲೀ ಯಾರೋ ಮೂರು ಜನರನ್ನು ನೇಮಿಸಿ ಕೋಟಿಗಟ್ಟಲೆ ಹಣ ವ್ಯಾಪಾರಸ್ಥರಿಗೆ ಹೋಗುತ್ತಿದೆ. ನಾನು ಮಿನಿಸ್ಟರ್ ಆಗಿದ್ದಾಗ, ಒಮ್ಮೆ ಶಿವಮೊಗ್ಗಕ್ಕೆ ಹೋಗಿ ನೋಡಿದೆ. ಈ ಸಂಸ್ಥೆಯಲ್ಲಿ ಸೀನಪ್ಪ ಎಂಬುವರನ್ನು ಹುಡುಕಿದರೂ ಇಲ್ಲವೇ ಇಲ್ಲ. ಅವನ ಹೆಸರಿನಲ್ಲಿ ಸಾಲ ಇದೆ. ವಸೂಲಿ ಆಯಿತೋ ಇಲ್ಲವೋ ಗೊತ್ತಿಲ್ಲ ಆದ್ದರಿಂದ ಇದರ ಬಗ್ಗೆ ಯೋಗ್ಯವಾದ ತನಿಖೆ ಮಾಡಬೇಕು. ಗೊಬ್ಬರದ ಏಜೆನ್ಸಿ ತೆಗೆದುಕೊಂಡು ಮಾಡುತ್ತಿದ್ದಾರೆ. ಈಗ ನಾನು ಇಲ್ಲಿ ಸಲಹೆ ಮಾಡುತ್ತಿದ್ದೇನೆ. ಇನ್ನೂ ಸಮಯ ಮೀರಿಲ್ಲ ಈ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಏತಕ್ಕೋಸ್ಕರ ಪ್ರಾರಂಭವಾದವು ? ಅದು ಉದ್ದೇಶ ಏನು ? ಇದರ ಬಗ್ಗೆ ಎರಡು ವಾಕ್ಯ ಇಲ್ಲಿ ಹೇಳಲು ಇಚ್ಚಿಸುತ್ತೇನೆ.

> "These are set up in several States as private companies under the Companies Act with a share capital subscribed by the State and the Central Government almost in equal proportion. Their chief objectives are to enable persons to engage in agriculture through their own means modernising their opeation and to produce and supply agricultural machines"

ಈಗ ಅಗ್ರಿಕಲ್ಚರಲ್ ಮಿಷನ್ಸ್ ಸಪ್ಲೈ ಮಾಡುತ್ತಿದ್ದಾರೆ. ಇದನ್ನು ಈಗ ಹೆಚ್. ಎಂ. ಟಿ. ಅವರಿಗೆ ಕೊಟ್ಟಿದ್ದೀರಿ. ಏಕೆ ಅಗ್ರಿಕಲ್ಚರಲ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಆಗಿಲ್ಲವೇ ? ಇವತ್ತು ಈ ಕಾರ್ಪೊರೇಷನ್ ಏನು ಕೆಲಸ ಮಾಡುತ್ತಿದೆ. ಬರೀ ಬೀಜ ಹಂಚಿ, ರೈತರಿಂದ ಹೆಚ್ಚು ಹಣ ಪಡೆಯುತ್ತಿದ್ದಾರೆ. ಈ ದೃಷ್ಟಿಯಿಂದ ಈ ಸಂಸ್ಥೆಯ ಬಗ್ಗೆ ಮೂಲಾಗ್ರವಾದ ತನಿಖೆಯನ್ನು ಮಾಡುವುದು ಅವಶ್ಯ ಇದೆ. ಇನ್ನು ಗೋವಿನ ಜೋಳದಿಂದ ಅರಳು ಮಾಡುವುದು, ಮೈದಾ ಮಾಡುವುದು ಇದೆ. ಇದರಿಂದ ಬಹಳಷ್ಟು ಲಾಭವಾಗುತ್ತದೆಂದು ಹೇಳಿದ್ದಾರೆ. ಇದು ಬರೀ ಕನ್ನಡಿಯೊಳಗಿನ ಲಾಭ. ಇದಕ್ಕೆ ಕೇರ್ ಮತ್ತು ಯುನಿಸೆಫ್‌ನಿಂದ ಹಣ ಬರುತ್ತದೆ. ಆದುದರಿಂದ ಇದರ ಬಗ್ಗೆಯೂ ಆಲೋಚನೆ ಮಾಡಬೇಕು. ನಿಜವಾಗಿಯೂ ಜನತೆಯ ಕಲ್ಯಾಣ ಮಾಡುವಂತಹ ಕಾರ್ಯಕ್ರಮಗಳಲ್ಲಿ ಈ ಸಂಸ್ಥೆಗಳು ವಿಫಲಗೊಂಡಿವೆ. ಇವುಗಳಿಗೆ ಅಪರೇಷನ್ ಮೆಷರ್ ಮಾಡಿ, ಇವುಗಳನ್ನು ಉಳಿಸಬೇಕೆಂದು ಹೇಳುತ್ತೇನೆ ಸ್ವಾಮಿ, ಒಂದು ಉದಾಹರಣೆಗಾಗಿ ಹೇಳುತ್ತೇನೆ. ಎಸ್ಟಾಬ್ಲಿಷ್‌ಮೆಂಟ್ ಚಾರ್ಜಸ್, ರಾಯಚೂರು ಜಿಲ್ಲೆಯಲ್ಲಿ, ಸಾಯಿಲ್ ಕನ್‌ಸರ್ವೇಷನ್‌ಗೆ ೧೯೮೩—೮೪ರಲ್ಲಿ ೭, ೨೭, ೫೪೪, ೧೯೮೪—೮೫ರಲ್ಲಿ ೧೩, ೨೫, ೨೨೦. ೧೯೮೫—೮೬ರಲ್ಲಿ ೭, ೫೯, ೮೯೦. ಸಾಯಿಲ್ ಕನ್‌ಸರ್ವೇಷನ್ ವರ್ಕ್ಸ್‌ಗೆ ಎಷ್ಟು ಕೊಟ್ಟಿರುವುದು ಎಂದರೆ ೧೯೮೩-೮೪ರಲ್ಲಿ ೧೫, ೧೨, ೪೪೨ ೧೯೮೪—೮೫ರಲ್ಲಿ ೨, ೬೩, ೬೩೦, ೧೯೮೫—೮೬ರಲ್ಲಿ ೭, ೫೯, ೮೯೦ ಎಸ್ಟಾಬ್ಲಿಷ್‌ಮೆಂಟ್ ಚಾರ್ಜ್, ೨, ೦೬, ೪೪೯ ರೂಪಾಯಿಗಳು ಸಾಯಿಲ್ ಕನ್‌ಸರ್ವೇಷನ್ ಚಾರ್ಜು. ಈ ರೀತಿಯಲ್ಲಿ ಹಣವನ್ನು ಸಾಯಿಲ್ ಕನ್‌ಸರ್ವೇಷನ್‌ಗೆ ಕೊಟ್ಟರೆ ಆಗುತ್ತದೆಯೇ ? ಕೋಟಿಗಟ್ಟಲೆ ಹಣ ಖರ್ಚು ಮಾಡಿದರೂ ಆಗುವುದಿಲ್ಲ. ೨ ಲಕ್ಷ ರೂಪಾಯಿಗಳನ್ನು ರಾಯಚೂರು ಜಿಲ್ಲೆಗೆ ಇಟ್ಟಿದ್ದೀರಿ. ಇದು ಏನೇನೂ ಸಾಲದು. ಧಾರವಾಡದಲ್ಲಿ ಕೆ. ಹೆಚ್. ಪಾಟೀಲರು ಇದ್ದಾಗ, ರಾಮಕೃಷ್ಣ ಹೆಗಡೆ ಸರ್ಕಾರಕ್ಕೆ ವಿರೋಧ ಮಾಡುತ್ತಾರೆಂದು ತಾವು ಹೇಳಬಹುದು. ಇವತ್ತು ಗದಗ್ ತಾಲ್ಲೂಕಿನಲ್ಲಿ ಅನೇಕ ಕಡೆ ಸಾಯಿಲ್ ಕನ್‌ಸರ್ವೇಷನ್ ವರ್ಕ್ ಆಗಿಲ್ಲ. ಮಳೆಗಾಲದಲ್ಲಿ ಈ ಕೆಲಸ ಆಗುವುದಿಲ್ಲ. ಆದುದರಿಂದ ನಿಮ್ಮ ಪ್ರತಿಯೊಂದು ಬಜೆಟ್ಟಿನ ಸ್ಥಿತಿಗತಿಗಳನ್ನು ನೋಡಿದರೆ, ವ್ಯವಸಾಯಗಾರನ ಕಣ್ಣಲ್ಲಿ ನೀರು ಬರುತ್ತದೆ, ಒಮ್ಮೊಮ್ಮೆ ರಕ್ತ ಕೂಡ ಬರುತ್ತದೆ. ವ್ಯವಸಾಯಗಾರನನ್ನು ಉದಾಸೀನ ಮಾಡುತ್ತಿದ್ದೀರಿ ನಿಮ್ಮ ಈ ವರದಿಯನ್ನು ಓದಿದರೆ ಎಲ್ಲಾ ವಿಚಾರದಲ್ಲೂ ನಿಕೃಷ್ಟಾವಸ್ಥೆಯಲ್ಲಿ ಈ ಸಾಯಿಲ್ ಕನ್‌ಸರ್ವೇಷನ್ ತಂದಿದ್ದೀರಿ. ನಾನು ನನ್ನಲ್ಲಿರತಕ್ಕ ವರದಿಯನ್ನು ಕಳುಹಿಸಿ ಕೊಡುತ್ತೇನೆ. ಅದನ್ನು ತಾವು ಪರಿಶೀಲನೆ ಮಾಡಿ ಪ್ರಾಮುಖ್ಯವಾದ ಅನೇಕ ಯೋಜನೆಗಳನ್ನು ಕೇಂದ್ರ ಸರ್ಕಾರದವರು ಕೂಡ ಮಾಡಿದ್ದಾರೆ. ನಿಮಗೆ ಹಣದ

ಅಭಾವ ಇದೆ. ನಿಜ. ಹಣದ ಅಭಾವ ಇದ್ದಾಗ ನಿಮಗೆ ಹೆಚ್ಚು ತೊಂದರೆ ಕೊಡುವುದಕ್ಕೆ ಇಚ್ಛೆ ಪಡುವುದಿಲ್ಲ. ನೂರಕ್ಕೆ ನೂರರಷ್ಟು ಕೇಂದ್ರ ಸರ್ಕಾರದ ಸಹಾಯವನ್ನು ಪಡೆದು, ಅವುಗಳನ್ನು ಏಕೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುವುದಿಲ್ಲ ? ಯಾವ ಪ್ರಯತ್ನವನ್ನು ತಮ್ಮ ಇಲಾಖೆಯವರು ಮಾಡಿದ್ದಾರೆ ? ಉದಾಹರಣೆಗೆ ಹೇಳುತ್ತೇನೆ, ರೀಸರ್ಚ್ ಸಲುವಾಗಿ ಕೃಷಿ ವಿಜ್ಞಾನ ಕೇಂದ್ರವನ್ನು ತೆಗೆದುಕೊಳ್ಳಿ. ಪ್ರತಿಯೊಂದು ಜಿಲ್ಲೆಗೂ ಒಂದೊಂದು ಕೃಷಿ ವಿಜ್ಞಾನ ಕೇಂದ್ರ ಆಗಬೇಕೆಂದು ಕೇಂದ್ರ ಸರ್ಕಾರ ಹೇಳುತ್ತದೆ. ಈ ದೃಷ್ಟಿಯಲ್ಲಿ ತಾವು ಏನು ಮಾಡಿದ್ದೀರಿ. ನಿಮ್ಮ ಕ್ಷೇತ್ರಕ್ಕೆ ಒಂದು ಆಗಬೇಕೆಂದು ಪ್ರಯತ್ನ ನಡೆಸಿದ್ದೀರಿ ಎಂಬುದನ್ನು ಕೇಳಿದ್ದೇನೆ. ನಿಮ್ಮ ಇಲಾಖೆಯಿಂದ ೧೯ ಜಿಲ್ಲೆಗೂ ಒಂದೊಂದು ಕೃಷಿ ವಿಜ್ಞಾನ ಕೇಂದ್ರವನ್ನು ಮಾಡಿ. ಇದಕ್ಕಾಗಿ ಯಾವ ಯಾವ ಜಿಲ್ಲೆಗೆ ಎಂತೆಂತಹ ಕೇಂದ್ರ ಸ್ಥಳಗಳನ್ನು ಗೊತ್ತು ಮಾಡಿ, ೧೯ ಜಿಲ್ಲೆಗೂ ಕೊಡಿ ಎಂದು ನಾವೂ, ನೀವೂ ಒತ್ತಾಯ ಮಾಡಿದರೆ ಅದರ ಲಾಭ ಎಷ್ಟಾಗುತ್ತದೆ. ನಿಮಗೆ ಆಸಕ್ತಿ ಇಲ್ಲ ಇನ್ನು ಅಗ್ರಿಕಲ್ಚರ್‌ಲ್ ಯೂನಿವರ್ಸಿಟಿ ಬಗ್ಗೆ ನಿಮಗೆ ಅಭಿನಂದನೆ ಸಲ್ಲಿಸುತ್ತೇನೆ. ಕೊನೆಯ ಹಂತದೊಳಗೆ ಒಬ್ಬರು ನಿಷ್ಣಾತರಾದ ವ್ಯಕ್ತಿಗಳನ್ನು ನೇಮಕ ಮಾಡಿದ್ದೀರಿ. ಇದರ ಬಗ್ಗೆ ತಾವು ಶಿಫಾರಸ್ ಮಾಡಿ, ಶ್ರೀಮಾನ್ ಪಾಟೀಲರನ್ನು ನೇಮಿಸಿದ್ದೀರಿ. ಆದುದರಿಂದ ಈ ವಿಚಾರದಲ್ಲಿ ತಾವು ನನ್ನ ಅಭಿನಂದನೆಗೆ ಪಾತ್ರರಾಗಿದ್ದೀರಿ. ಆದರೆ ಪಾಟೀಲ್‌ರವರು ಒಬ್ಬರೇ ಅಭಿವೃದ್ಧಿ ಮಾಡುವುದಕ್ಕಾಗುವುದಿಲ್ಲ. ಅವರಿಗೆ ಉಪಯುಕ್ತವಾಗಿ ಬೇಕಾದಂತಹ, ಪರಿಜ್ಞಾನವನ್ನು ಹೆಚ್ಚು ಒದಗಿಸುವಂತಹ ಅವಕಾಶವನ್ನು ಕಲ್ಪಿಸಿ ಕೊಡಬೇಕು ಅಗ್ರಿಕಲ್ಚರ್ ಬಗ್ಗೆ ಹೆಚ್ಚು ಆಸಕ್ತಿಯನ್ನು ಮಾನ್ಯ ರಾಜೀವ್ ಗಾಂಧಿಯವರೂ ಕೊಡಲಿಕ್ಕೆ ಹೊರಟ್ಟಿದ್ದಾರೆ. ಇವತ್ತು ರಾಜೀವ್ ಗಾಂಧಿಯವರ ಪ್ರಯತ್ನದಿಂದ ಮಾನ್ಯ ಬೂಟಾಸಿಂಗ್‌ರವರು ಪ್ಲಾನಿಂಗ್ ಕಮಿಷನ್ ಮೆಂಬರ್ ಆಗಿದ್ದಾರೆ. ಭಾರತದ ಪರವಾಗಿ ಇವತ್ತು ಒಬ್ಬರು ಪ್ಲಾನಿಂಗ್ ಕಮಿಷನ್ ಮೆಂಬರ್ ಆಗಿದ್ದಾರೆ. ಇವತ್ತು ಒಬ್ಬರು ವ್ಯವಸಾಯ ಸಚಿವರು ಕೇಂದ್ರದಲ್ಲಿ ಪ್ಲಾನಿಂಗ್ ಕಮೀಷನ್ ಮೆಂಬರ್ ಆಗಿದ್ದಾರೆಂಬುದು ನನಗೆ, ನಿಮಗೆ ನಿಜವಾಗಿಯೂ ಆನಂದವಾದುದು.

ನಾನು ಈ ಮಾತನ್ನು ಏತಕ್ಕೆ ಹೇಳುತ್ತೇನೆಂದರೆ ಮುಂದೆ ಬರತಕ್ಕಂಥ ಕಾಲದಲ್ಲಾದರೂ ತಾವು ಲಕ್ಷ್ಯ ಕೊಡಬೇಕು. ಸಾಯಿಲ್ ಕನ್‌ಸರ್ವೇಷನ್ ಆಗಲಿ, ವಾಟರ್ ಕನ್‌ಸರ್ವೇಷನ್ ಆಗಲಿ ಮಾಡಿದರೆ ಆ ಜನರಿಗೆ ಹೆಚ್ಚು ಸಹಾಯವಾಗುತ್ತದೆ. ಈ ಬಗ್ಗೆ ನಾನು ಕಳಕಳಿಯಿಂದ ಪುನಃ ತಮ್ಮನ್ನು ಕೇಳಿಕೊಳ್ಳುತ್ತೇನೆ. ಮಾನ್ಯ ಸಭಾಧ್ಯಕ್ಷರೇ, ನಾನು ಈಗಾಗಲೇ ಹೇಳಿದ ಹಾಗೆ ಈವೊತ್ತು ನೀರಾವರಿ ಯೋಜನೆಯಲ್ಲಿ ಮಲಪ್ರಭಾ, ತುಂಗಭದ್ರ ಪ್ರಾಜೆಕ್ಟ್, ಭದ್ರ ಪ್ರಾಜೆಕ್ಟ್, ಮತ್ತು ಮಲಪ್ರಭಾ ಪ್ರಾಜೆಕ್ಟ್ ಕೆಲಸಗಳು ಮುಗಿದಿದ್ದರೂ ಸಹ ಅಲ್ಲಿ ಕಾಲುವೆ ಕೆಲಸಗಳು ಆಗದೇ ಇರುವುದರಿಂದ ಆ ಭಾಗದ ರೈತರುಗಳು ಬಹಳ ಕಂಗಾಲಾಗಿದ್ದಾರೆ. ಕಾಲುವೆಗಳು ಪೂರ್ತಿಯಾಗಿ ಆಗದೇ ಇರುವುದರಿಂದ ಅವರ ಜಮೀನುಗಳಿಗೆ ನೀರು ಸಿಕ್ಕುವುದಿಲ್ಲ, ಅಲ್ಲಿ ಕಾಲುವೆಗಳ ಕೆಲಸಗಳನ್ನು ಪೂರ್ತಿ ಮಾಡಬೇಕು. ಈ ಮಲಪ್ರಭಾ ನದಿಯ ದಂಡೆಯಲ್ಲಿ ಚೌಳು ಭೂಮಿ ಏನು ಇದನ್ನು ದುರಸ್ತಿ ಮಾಡುವ ಬಗ್ಗೆ ಡಾ. ಎಂ.ಪಿ. ಪಾಟೀಲರ ಒಂದು ಕಮಿಟಿಯನ್ನು ನೇಮಕ ಮಾಡಿದರು. ಅವರು ಇದರ ಬಗ್ಗೆ ಒಂದು ವರದಿಯನ್ನು ಕೊಟ್ಟಿದ್ದಾರೆ. ಆ ವರದಿ ಪ್ರಕಾರ ಅಲ್ಲಿ ಭೂಸುಧಾರಣೆ ಆಗಬೇಕಾಗಿತ್ತು. ಅಲ್ಲಿ ಕಾಲುವೆ ತೆಗೆದು ನೀರನ್ನು ಬಿಡಬೇಕಾಗಿತ್ತು. ಅಲ್ಲಿರುವ ಭೂಮಿ ಎಲ್ಲಾ ಚೌಳು ಭೂಮಿ. ಅದರ ಬಗ್ಗೆ ಏನು ಪ್ರೊಸೆಸ್ ಮಾಡಬೇಕು ಎಂದು ಡಾ. ಪಾಟೀಲ್‌ರವರು ವರದಿ ಕೊಟ್ಟಿದ್ದರೂ ಕೂಡ ನಿಮ್ಮ ಇಲಾಖೆಯವರು ಅದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿಲ್ಲ. ಅಲ್ಲಿ ಕ್ರಾಪಿಂಗ್ ಪ್ಯಾಟ್ರನ್ ಯಾವುದು ಮಾಡಬೇಕು ಅದನ್ನೆಲ್ಲಾ ಅವರು ಹೇಳಿದ್ದಾರೆ- ಅದನ್ನೆಲ್ಲಾ ನಾನು ಈಗ ಹೇಳುವುದಕ್ಕೆ ಹೋಗುವುದಿಲ್ಲ. ಈವೊತ್ತಿನ ದಿವಸ ಅವರ ವರದಿಯನ್ನು ಯಾವುದೋ ಕಡತಕ್ಕೆ ಹಾಕಿದ್ದೀರಿ; ಅದನ್ನು ಹೊರಗೆ ತೆಗೆಯಿರಿ. it is hereby directed that all Joint Directore should see that nothing should go un-utilised ಇತ್ಯಾದಿ ಹೇಳಿದ್ದಾರೆ ನೀವು ಇದರ ಬಗ್ಗೆ ಪರಸ್ಯೂ ಮಾಡಬೇಕು. ಅಲ್ಲಿ ಕೆಲಸ ತೀವ್ರಗತಿಯಿಂದ ನಡೆಯುವ ಹಾಗೆ ಪ್ರಾರಂಭ ಮಾಡಿರಿ. ಕೃಷ್ಣ ಎಡದಂಡೆ ಕಾಲುವೆ ಕೆಲಸಗಳು ಇನ್ನೂ ಮಾಡಿಲ್ಲ, ಅದಕ್ಕೆ ಹೇರಳವಾಗಿ ಹಣ ಕೊಟ್ಟಿದ್ದರೂ ಕೂಡ ಅದಕ್ಕೆ ವರ್ಲ್ಡ್ ಬ್ಯಾಂಕ್‌ನಿಂದಾಗಲಿ ಅಥವಾ ಕೇಂದ್ರ ಸರ್ಕಾರದಿಂದಾಗಲಿ ಆ ಹಣವನ್ನು ತಾವು ಪಡೆಯುವ ಕಾರ್ಯವನ್ನು ಮಾಡಿಲ್ಲ, ಈಗಲಾದರೂ ಮಾಡಿ, ನಾವೂ ಸಹ ನಮ್ಮ ಕೈಲಾದಷ್ಟು ಅಳಿಲು ಸೇವೆ ಮಾಡುತ್ತೇವೆ, ನಾವು ಎಲ್ಲವನ್ನೂ ವಿರೋಧ ಮಾಡುವುದಿಲ್ಲ.

ಒಳ್ಳೆಯ ಕೆಲಸ ಮಾಡುವುದಾದರೆ. ಜನಗಳಿಗೆ ಅನುಕೂಲವಾಗುವಂಥಾ ಕೆಲಸ ಆಗುವುದಾದರೆ ಅದಕ್ಕೆ ನಾವು ಸ್ವಾಗತ ಮಾಡುತ್ತೇವೆ. ಈ ದಿಶೆಯಲ್ಲಿ ಈ ಸದನದ ಮುಖಾಂತರ ನಮ್ಮ ರಾಜ್ಯದ ಮುಖ್ಯ ಮಂತ್ರಿಗಳಿಗೆ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈವೊತ್ತು ರಾಜ್ಯದ ಸ್ಥಿತಿ ನೋಡಿದರೆ ಬಹಳ ಕಂಗಾಲಾಗಿದೆ, ನೀರಾವರಿ ಭಾಗದಲ್ಲಿರುವ ಜನರಿಗೆ ನೀರು ಬರುವ ಹಾಗೆ ಇನ್ನೂ ಮಾಡಿಲ್ಲ. ಅವರು ಅಲ್ಲಿ ಖುಷ್ಕಿ ಬೇಸಾಯವನ್ನೇ ಮಾಡಬೇಕು ಎಂದರೆ ಬಹಳ ಕಷ್ಟ. ಅಲ್ಲದೇ ಅವರು ೩ ವರ್ಷದಿಂದಲೂ ಕೂಡ ಬರಗಾಲವನ್ನು ಎದುರಿಸಿ ಬಹಳ ಕಂಗಾಲಾಗಿದ್ದಾರೆ. ಇವರು ಆಳುವ ಪಕ್ಷದವರು, ಇವರು ವಿರೋಧಪಕ್ಷದವರು ಹೀಗೆ ಅಂದುಕೊಂಡು ಒಬ್ಬರಿಗೊಬ್ಬರಿಗೆ ತಾತ್ಸಾರ ಮನೋಭಾವವನ್ನು ಮಾಡದೆ ಅವರಿಗೆ ಅನ್ನ ಕೊಡುವ ರೀತಿಯಲ್ಲಿ ತಾವು ತೀವ್ರಗತಿಯಲ್ಲಿ ಕೆಲಸ ಮಾಡಬೇಕೆಂದು ನಾನು ತಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ತಮಗೆ ಹೇಳಬೇಕಾದರೆ ಅಲ್ಲಿ ಕಾಂಗ್ರೆಸ್‌ನವರು ಇದ್ದಾರೆ ಅಲ್ಲಿ ಮಳೆ ಬೇಡ, ಇಲ್ಲಿ ಜನತಾದವರು ಇದ್ದಾರೆ ಅಲ್ಲಿ ಮಳೆ ಬೇಕು ಎಂದರೆ ಅದು ಆಗುವುದಿಲ್ಲ, ಅಲ್ಲಿ ಕಾಂಗ್ರೆಸ್ಸೇ ಇರಲಿ, ಜನತಾವೇ ಇರಲಿ ಮಳೆ ಆದರೆ ಎಲ್ಲರಿಗೂ ಆಗುತ್ತದೆ. ಇಲ್ಲದೇ ಹೋದರೆ ಯಾರಿಗೂ ಆಗುವುದಿಲ್ಲ. ಈ ದೃಷ್ಟಿಯಿಂದ ತಾವು ನೀರಾವರಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕಾದುದು ಬಹಳ ಪ್ರಾಮುಖ್ಯವಾದುದು. ಈವೊತ್ತು ನಮ್ಮ ರಾಜ್ಯದಲ್ಲಿ ಬರಗಾಲ ಇದೆ. ಬರಗಾಲದಲ್ಲಿ ಕೆಲಸ ಸಾಕಷ್ಟು ನಡೆಯದೇ ಇದ್ದರೂ ಕೆಲವೊಂದು ಕಡೆ ಕಾರ್ಯಕ್ರಮವನ್ನು ಭರದಿಂದ ತೆಗೆದುಕೊಂಡಿದ್ದೀರಿ, ಕೆಲವೊಂದು ಕಡೆ ನಿಧಾನವಾಗಿ ನಡೆಯುತ್ತಾ ಇದೆ. ತಮಗೆ ಹೇಳಬೇಕಾದರೆ ಹಿಂದೆ ದಿವಂಗತ ಸರ್. ಎಂ. ಶ್ರೀ ವಿಶ್ವೇಶ್ವರಯ್ಯನವರು ಆ ಕನ್ನಂಬಾಡಿ ಪ್ರಾಜೆಕ್ಟನ್ನು ಕಟ್ಟಿರುವ ಹೊತ್ತಿಗೆ ಈವೊತ್ತಿನ ದಿವಸ ಮಂಡ್ಯದ ಜನ ಚೆನ್ನಾಗಿದ್ದಾರೆ. ಇಲ್ಲದೇ ಹೋಗಿದ್ದರೆ ಬೀದರ್ ಬೆಲ್ಲೆಯ ಹಾಗೆ ಅವರು ಬರಗಾಲವನ್ನು ಎದುರಿಸಬೇಕಾಗುತ್ತಿತ್ತು. ಆದುದರಿಂದ ನೀವು ಬರಗಾಲದ ಕೆಲಸವನ್ನು ತೀವ್ರಗತಿಯಲ್ಲಿ ಮಾಡಬೇಕೆಂದು ನಾನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ನೀರಾವರಿ ಕೆಲಸಗಳು ಏನು ಇವೆ ಅದು ಕನ್‌ಸರ್ವೇಷನ್ ಆಫ್ ವಾಟರ್ ಆಗಲಿ ಅಥವಾ ಸಾಯಿಲ್ ಕನ್‌ಸರ್ವೇಷನ್ ಆಗಲಿ ಅಥವಾ ಹೆಚ್ಚು ಇಳುವರಿ ಕೊಡತಕ್ಕಂಥ ಇತರೇ ಕಾರ್ಯಕ್ರಮಗಳು ಯಾವುದೇ ಆಗಲಿ ಅಥವಾ ಫಾರೆಸ್ಟ್ ಡೆವಲಪ್‌ಮೆಂಟ್ ಆಕ್ಟಿವಿಟೀಸ್ ಆಗಲಿ ಈ ಯಾವ ಕೆಲಸಗಳನ್ನೇ ಮಾಡಬೇಕಾದರೂ ಸಹ ಒಬ್ಬರಿಗೊಬ್ಬರಿಗೆ ಹೊಂದಾಣಿಕೆ ಬೇಕು, ಹಾಗಿಲ್ಲದೇ ಹೋದರೆ ಅದರಿಂದ ಅನಾಹುತ ಬಹಳ, ಜನರಿಗೂ ಕಷ್ಟವಾಗುತ್ತದೆ. ಈಗ ಡ್ರೈಲ್ಯಾಂಡ್ ಡೆವೆಲಪ್‌ಮೆಂಟ್ ಬೋರ್ಡ್ ಅಂತ ೪-೫ ರಿಜನ್ ಮಾಡಿ ಅದಕ್ಕೆ ೧೦-೨೦ ಜನರನ್ನು ಜಾಯಿಂಟ್ ಡೈರೆಕ್ಟರ್, ಡೆಪ್ಯೂಟಿ ಡೈರೆಕ್ಟರ್ ಅಸಿಸ್ಟೆಂಟ್ ಡೈರೆಕ್ಟರ್ ಅಂತ ಮಾಡಿದ್ದೀರಿ. ಈ ಸ್ಕೀಂಗೆ ಒಂದು ಕೋಟಿ ರೂಪಾಯಿ ಕೊಟ್ಟಿದ್ದೀರಿ. ಅದರಲ್ಲಿ ಈ ಆಫೀಸರ್‌ಗೇನೇ ೮೦ ಲಕ್ಷ ರೂಪಾಯಿ ಖರ್ಚು ಆಗುತ್ತದೆ ಇನ್ನು ಉಳಿದ ೨೦ ಲಕ್ಷ ರೂಪಾಯಿ ಉಳಿದರೆ ಅದರಿಂದೇನೂ ಪ್ರಯೋಜನವಾಗುವುದಿಲ್ಲ: ಈ ತರಹ ಡ್ರೈಲ್ಯಾಂಡ್ ಡೆವೆಲಪ್‌ಮೆಂಟ್ ಬೋರ್ಡ್ ಎಂದು ಮಾಡಿದರೆ ಸರಿಹೋಗುವುದಿಲ್ಲ. ಇದು ಸಂಪೂರ್ಣವಾಗಿ ಬದಲಾವಣೆಯಾಗಬೇಕು.

ಇನ್ನು ಈವೊತ್ತು ಎಜುಕೇಷನ್ ಡೆವೆಲಪ್‌ಮೆಂಟ್ ಆಗಬೇಕಾಗಿದೆ. ಅನೇಕ ಕಾಲೇಜುಗಳನ್ನು ತೆಗೆದರೆ ಅದನ್ನು ಅಫಿಲಿಯೇಟ್ ಮಾಡಬೇಕಾದರೆ ಅದನ್ನೆಲ್ಲಾ ಸೇರಿಸಿ ಒಂದು ಯೂನಿವರ್ಸಿಟಿಗೆ ಸೇರಿಸಬೇಕಾಗುತ್ತದೆ. ಆದರೆ ಈವೊತ್ತಿನ ದಿವಸ ಅಗ್ರಿಕಲ್‌ಚರಲ್ ಯೂನಿವರ್ಸಿಟಿ ಎಂದು ಏನು ಇದೆ ಅದರ ಬಗ್ಗೆ ಇನ್ನೊಂದು ಯೂನಿವರ್ಸಿಟಿ ಮಾಡಬೇಕೆಂದು ಹೇಳಿದರೂ ಸಹ ಈವೊತ್ತಿನವರೆವಿಗೂ ಆಗಿಲ್ಲ. ತಮಗೆ ಹೇಳಬೇಕಾದರೆ ಈವೊತ್ತಿನ ದಿವಸ Every land and every farmar must be affiliated to the Agriculture University that is the schme on which the agricultural university was started and developed. ಆ ರೀತಿ ನಡೆಯುತ್ತಾ ಇದೆಯೇ ? ಈ ತರಹ ಎಷ್ಟೋ ಸ್ಕೀಂಗಳು ಇವೆ. ರಾಯಚೂರಿನಲ್ಲಿ ಒಂದು, ಮತ್ತೊಂದು ಕಡೆಯಲ್ಲಿ ಇನ್ನೊಂದು ಅಗ್ರಿಕಲ್‌ಚರ್ ಯೂನಿವರ್ಸಿಟಿ ಆಗಬೇಕು ಹಿಂದೆ ಡಾ. ಮರೀಗೌಡರು ಅನ್ನುವವರು ಇದ್ದರು. ಅವರು ಹಾರ್ಟಿಕಲ್‌ಚರ್ ಇಲಾಖೆಯ ಮುಖ್ಯಾಧಿಕಾರಿಗಳಾಗಿದ್ದಾಗ ಅನೇಕ ಕಡೆ ಹಾರ್ಟಿಕಲ್ಚರಲ್ ಫಾರಂ ಮಾಡಿದರು. ಎಲ್ಲಿ ಹಣ್ಣು, ಇತ್ಯಾದಿ ಬೆಳೆಸುವುದಕ್ಕೆ ಸಾಧ್ಯವೋ ಅದನ್ನು ಅಲ್ಲಿ ಬೆಳೆಸುವುದಕ್ಕೆ ಪ್ರಯತ್ನ ಮಾಡಿದರು

ಅವರು ತಾವೇ ಹೋಗಿ ಅಲ್ಲಿ ಅನ್ನ ಸಿಕ್ಕದೇ ಇದ್ದರೂ ಕೂಡ ಅಲ್ಲಿ ಏನು ಸಿಕ್ಕುತ್ತದೋ ಅದನ್ನೇ ತಿಂದು ಆ ಜಾಗದಲ್ಲಿ ಯಾವುದು ಬೆಳೆಸುವುದಕ್ಕೆ ಸಾಧ್ಯವೋ ಅದನ್ನು ಬೆಳೆಸುತ್ತಿದ್ದರು. ಅವರು ಐ. ಎ. ಎಸ್. ಆಫೀಸರಾಗಿದ್ದರೂ ಸಹ ಅಗ್ರಿಕಲಚರಲ್ ಫ್ಯಾಮಿಲಿ ಅಸೋಷಿಯೇಟ್ ಮಾಡಿಕೊಂಡು ಈ ಕೆಲಸ ಮಾಡುತ್ತಿದ್ದರು. ಈವೊತ್ತಿನ ದಿವಸ ಸಸಿಗಳಿಗೆ ಬರುವ ರೋಗರುಜಿನಗಳು ನೋಡಿದರೆ ಅನೇಕ ತರಹವಾದ ರೋಗ ರುಜಿನಗಳು ಬಂದು ಸಸಿಗಳೆಲ್ಲಾ ಹಾನಿಯಾಗುತ್ತಾ ಇದೆ. ಮಾನ್ಯ ಉಪಸಭಾಧ್ಯಕ್ಷರೇ, ತಮಗೆ ಹೇಳಬೇಕಾದರೆ ನಮ್ಮ ಭಾಗದಲ್ಲಿ ಸಂಜಾಪುರ ಅನ್ನುವ ಒಂದು ಊರು ಇದೆ. ಅಲ್ಲಿ ಸಿವಿಲೈಜ್ಡ್ ಪೀಪಲ್ ಇದ್ದಾರೆ, ಅದು ಡೆವೆಲಪ್‌ಮೆಂಟ್ ವಿಲೇಜ್ ಸಹ ಆಗಿದೆ ಅಲ್ಲಿ ಬಹಳ ಹೆಚ್ಚಾಗಿ ಎಣ್ಣೆ ಶೇಂಗಾಕಾಳನ್ನು ಬೆಳೆಯುತ್ತಾರೆ. ಅಲ್ಲಿ ೪-೫ ವರ್ಷದ ಹಿಂದೆ ಏನಾಯಿತು ಎಂದರೆ ಈ ಶೇಂಗಾ ಬೆಳೆಗೆ ಒಂದು ದೊಡ್ಡ ಹುಳುರೋಗ ಸೇರಿಕೊಂಡು ಆ ಶೇಂಗಾ ಬೆಳೆಯೆಲ್ಲಾ ನೆಲಸಮವಾಯಿತು. ನಾನು ಇದರ ಬಗ್ಗೆ ಒಂದು ಪತ್ರವನ್ನು ಇಲಾಖೆಯವರಿಗೆ ಬರೆದೆ. ಅಲ್ಲದೆ ಅಗ್ರಿಕಲ್‌ಚರ್ ಯೂನಿವರ್ಸಿಟಿಯವರು ಇದನ್ನು ಸೂಪರ್‌ವಿಷನ್ ಮಾಡಬೇಕೆಂದೂ ಸಹ ಬರೆದಿದ್ದೇನೆ. ಆ ರೈತ ಆ ಹುಳುವನ್ನು ಹೋಗಲಾಡಿಸಬೇಕಾದರೆ ಅದಕ್ಕೆ ಔಷಧಿ ತರಬೇಕಾದರೆ ಅವನ ಹೊಲವನ್ನು ಮಾರಬೇಕಾಗುತ್ತದೆ. ನಾನು ಈ ವಿಚಾರದಲ್ಲಿ ಕಾಗದ ಬರೆದಿದ್ದನಲ್ಲಾ ನೀವು ಇದರ ಬಗ್ಗೆ ಹೊಸ ಸ್ಕೀಂ ತಯಾರು ಮಾಡಿ ಕೇಂದ್ರ ಸರ್ಕಾರಕ್ಕೆ ಏತಕ್ಕೆ ಕಳುಹಿಸಲಿಲ್ಲ ? ಈ ಎಪಿಡಮಿಕ್ ಪೆಸ್ಟಿಸೈಡ್ ಬಗ್ಗೆ ಏನೂ ಕಾರ್ಯಕ್ರಮ ತೆಗೆದುಕೊಳ್ಳದೇ ಹೋದರೆ ಅವನ ಗತಿ ಏನು ? ತಾವು ಯಾವುದರ ಬಗ್ಗೆಯಾಗಲಿ ಹೊಸ ಹೊಸ ಯೋಜನೆಗಳ ಬಗ್ಗೆ ಏನೇನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದನ್ನು ನೋಡುವುದಾದರೆ ಏನೂ ಮಾಡಿಲ್ಲ.

ಇನ್ನು ನಮ್ಮ ಕರ್ನಾಟಕ ರಾಜ್ಯಕ್ಕೆ ಅಗ್ರಿಕಲ್‌ಚರ್ ಯೂನಿವರ್ಸಿಟಿ ಹೆಚ್ಚಬೇಕು. ಕೊನೇ ಪಕ್ಷ ಇನ್ನು ೫-೬ ಆದರೂ ಬೇಕಾಗುತ್ತದೆ. ಶಿವಮೊಗ್ಗ ರೀಜನ್‌ಗೆ ಒಂದು, ಹಾಗೆ ಮೈಸೂರಿನಲ್ಲಿ ಫಾರೆಸ್ಟ್ರಿ ಸಮಸ್ಯೆಯೇ ಬೇರೆ, ಆದರೆ ಆಕ್ಟಿವಿಟೀಸ್‌ಗೇ ಒಂದು, ಬೆಂಗಳೂರಿನಲ್ಲಿರತಕ್ಕಂಥಾ ಸಮಸ್ಯೆಯೇ ಬೇರೆ ಅಲ್ಲಿಗೊಂದು ಹೀಗೆ, ಅಲ್ಲಲ್ಲಿ ಒಂದೊಂದು ಅಗ್ರಿಕಲ್‌ಚರ್ ಯೂನಿವರ್ಸಿಟಿ ಮಾಡಬೇಕು. ಧಾರವಾಡದಲ್ಲಿ ಒಂದು ಮಾಡಬೇಕು. ಏತಕ್ಕೆಂದರೆ ರಾಯಚೂರಿನಲ್ಲಿ ವರಲಕ್ಷ್ಮಿ ಹತ್ತಿಯನ್ನು ಬೆಳೆಯುತ್ತಾರೆ, ಅದು ಹುಲ್ಕೋಟಿಯಲ್ಲಿ ಬೆಳೆದರೆ ಅದು ಆಗುವುದಿಲ್ಲ. ಆ ಭೂಮಿಯಲ್ಲಿ ಯಾವುದು ಬೆಳೆಯುವುದಕ್ಕೆ ಸಾಧ್ಯವೋ ಅದನ್ನು ಬೆಳೆಯಬೇಕು. ಲಕ್ಷ್ಮಿ ಹತ್ತಿ ಎಲ್ಲಿ ಬೆಳೆಯುತ್ತದೆ ಆ ಜಾಗದಲ್ಲಿ ಅದನ್ನು ಬೆಳೆಯಬೇಕು. ಆಯಾಯ ಪ್ರದೇಶಕ್ಕನುಗುಣವಾಗಿ ಕಂಡು ಹಿಡಿಯಲು ನೀವು ರಿಸರ್ಚ್ ಮಾಡಬೇಕು. ಮಾನ್ಯ ಸಭಾಧ್ಯಕ್ಷರೇ, ಹಿಂದೆ ವರಲಕ್ಷ್ಮಿ ಬೀಜವನ್ನು ಏನು ಹಾಕಿದ್ದರೂ ಅದು ಎಷ್ಟೇ ಹುಡುಕಿದರೂ ಸಹ ಈವೊತ್ತಿಗೂ ಸಹ ಸರಿಯಾಗಿ ರೈತರಿಗೆ ಸಿಕ್ಕುತ್ತಾ ಇಲ್ಲ. ಆ ವರಲಕ್ಷ್ಮಿ ಬೀಜವನ್ನು ಹುಡುಕುವ ಬಗ್ಗೆ ಹೋದಾಗ ಒಬ್ಬರು ತಾಕಬ್ ಅನ್ನುವ ವ್ಯಕ್ತಿ ಇದ್ದರು. ಅವರಿಗೆ ಪ್ರಾಸಿಕ್ಯೂಷನ್ ಆದುದರಿಂದ ಅವರು ಇದರಿಂದ ದೂರಸರಿದರು. ಆ ಒಬ್ಬ ಮನುಷ್ಯನನ್ನು ದೂರ ಕಳಿಸಿ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನವರು ಮಾಡುತ್ತಾರೆಯೋ? ಅದೇ ದೃಷ್ಟಿಯಿಂದ ಇವತ್ತು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇವತ್ತು ಧಾರವಾಡದಲ್ಲಿ ಯೂನಿವರ್ಸಿಟಿ ಎಸ್ಟಾಬ್ಲಿಶ್ ಆಗುವುದಕ್ಕೆ ಎಲ್ಲಾ ಅನುಕೂಲಗಳಿವೆ. ಹೆಸರಾಂತ ಕಾಲೇಜು ಇದೆ. ಮಾನ್ಯ ರಾಮಕೃಷ್ಣ ಹೆಗಡೆಯವರಿಗೆ ಗೊತ್ತಿದೆ. ಶ್ರೀಮಾನ್ ಎಂ. ಪಿ. ಪಾಟೀಲರು ಮತ್ತು ಕೆ. ಎಫ್. ಪಾಟೀಲರು ಇಬ್ಬರೂ ಕೂಡಿ ಮೊರಾರ್ಜಿ ದೇಸಾಯಿಯವರಲ್ಲಿ ಪ್ರಯತ್ನ ಮಾಡಿ ಧಾರವಾಡದ ಕಾಲೇಜನ್ನು ತಂದರು, ಅದೇ ಧಾರವಾಡದಲ್ಲಿ ಅಗ್ರಿಕಲ್ಚರಲ್ ಕಾಲೇಜು ಮಾಡಬೇಕು ಎಂಬ ಉದ್ದೇಶ ನಮ್ಮಲ್ಲಿತ್ತು. ಇವತ್ತು ಪ್ರಾರ್ಥನೆ ಮಾಡುವುದೇನೆಂದರೆ, ಇವತ್ತಿಗೂ ಸಮಯ ಮೀರಿಲ್ಲ. ಆ ಕಾಲೇಜಿಗೆ ಎಂ. ಪಿ. ಪಾಟೀಲರ ಮತ್ತು ಕೆ. ಎಫ್. ಪಾಟೀಲರ ಹೆಸರನ್ನು ಇಡಬೇಕು ಎಂದು ಹೇಳುತ್ತೇನೆ. ಧಾರವಾಡದಲ್ಲಿ ತೀವ್ರವಾಗಿ ಯೂನಿವರ್ಸಿಟಿ ಎಸ್ಟಾಬ್ಲಿಶ್ ಆಗಬೇಕು, ಕೆಲವು ಜನ ವಿರೋಧ ಮಾಡುತ್ತಾರೆ. ಅಂಕಿಸಂಖ್ಯೆಗಳ ಮೇಲೆ ವಿರೋಧಾಭಾಸ ಆಗುತ್ತದೆ. ನಿಮ್ಮ ಪಕ್ಷದವರು ನನ್ನ ಹತ್ತಿರ ಬಂದು ಸೈನ್ ಮಾಡಿಸಿಕೊಂಡು ಹೋಗಿದ್ದಾರೆ. ನಮ್ಮ ಪಕ್ಷದವರು ನಿಮ್ಮ ಹತ್ತಿರ ಬರುತ್ತಾರೆ. ಅದಕ್ಕೆ ತೊಂದರೆ ತರುವವರು ಯಾರಿಗೆ ಬೇಡವೋ ಅವರು ತರುತ್ತಾರೆ. ಮಾನ್ಯ ರಾಮಕೃಷ್ಣ ಹೆಗಡೆಯವರಿಗೆ ಮನಸ್ಸು ಇದ್ದರೆ ಮಾಡಬಹುದು. ಇದಕ್ಕೆ ೨೦ ಲಕ್ಷಕ್ಕಿಂತ ಹೆಚ್ಚಿಗೆ ಹಣ ಬೇಕಾಗುವುದಿಲ್ಲ,

ಒಬ್ಬ ಮಾನ್ಯ ಸದಸ್ಯರು.— ೫೦ ಲಕ್ಷ ಬೇಕಾಗುತ್ತದೆ.

ಶ್ರೀ ಕೆ.ಹೆಚ್. ಪಾಟೀಲ್.— ನಾನು ನೇರವಾಗಿ ಹೇಳುತ್ತೇನೆ. ಫಾರೆಸ್ಟ್ ಲ್ಯಾಂಡಿನ ಉತ್ಪತ್ತಿಯಿಂದಲೇ ಯೂನಿವರ್ಸಿಟಿ ಮಾಡಬಹುದು ಎಂದು ನಾನು ಸಲಹೆ ಇಟ್ಟಿದ್ದೆ. ಅದಕ್ಕೆ ಅಡ್ಡಿ ಹಾಕಿದವರು ನಮ್ಮವರು, ನಿಮ್ಮವರು. ದೇವರ ಇಚ್ಛೆ, ಅನಾಯಾಸವಾಗಿ ನಿಮಗೆ ಕೀರ್ತಿ ಬರಬೇಕು ಎಂದು ಇರಬಹುದು.

ಶ್ರೀ ಕೆ. ಮಲ್ಲಪ್ಪ.— ನೀವು ಅಲ್ಲೇ ಉಳಿದುಕೊಂಡುಬಿಟ್ಟಿರಿ.

ಶ್ರೀ ಕೆ.ಹೆಚ್. ಪಾಟೀಲ್.— ನೀವು ತಜ್ಞರನ್ನು ನೇಮಿಸಿ ಧಾರವಾಡದಲ್ಲಿ ಮಾತ್ರ ಕಡಿಮೆ ಖರ್ಚಿನಲ್ಲಿ ಆಗಬಹುದು ಶಿವಮೊಗ್ಗದಲ್ಲಿ ೫೦ ಲಕ್ಷ ಬೇಕಾಗಬಹುದು. ಧಾರವಾಡದಲ್ಲಿ ಯೂನಿವರ್ಸಿಟಿಗೆ ಬೇಕಾದಂಥ ಎಲ್ಲಾ ಸೌಕರ್ಯ ಸಲಕರಣೆಗಳಿವೆ, ಹೋಂಸೈನ್ಸ್ ಕಾಲೇಜು ಇದೆ, ರೂರಲ್ ಡೆವಲಪ್‌ಮೆಂಟ್ ಕಾಲೇಜು ಇದೆ. ಫಾರೆಸ್ಟ್ರೀ ಇದು ಪ್ರಪೋಸಲ್ ಇತ್ತು. ಅದು ಶಿರಸಿ ಅಥವಾ ಕೂರ್ಗ್‌ನಲ್ಲಿ ಆಗಬೇಕು ಎಂದು ಇತ್ತು. ಧಾರವಾಡದಲ್ಲಿ ಯೂನಿವರ್ಸಿಟಿಗೆ ಬೇಕಾದಂಥ ಎಲ್ಲಾ ಕಾರ್ಯಕ್ರಮವಿದೆ, ಬಿಲ್ಡಿಂಗ್ ಇದೆ, ಲೈಬ್ರರಿ ಇದೆ, ಆದರೆ ಕೊರತೆ ಇರುವುದು ಮನಸ್ಸು. ನೀವು ೨೫ ಲಕ್ಷ ರೂಪಾಯಿಗಳನ್ನು ಕೊಡತಕ್ಕ ಪ್ರಯತ್ನ ಮಾಡಿ. ಹೇರಳವಾದ ಸ್ಕೀಂಸ್ ಇದೆ. ನೂರಕ್ಕೆ ನೂರರಷ್ಟು ಸೆಂಟ್ರಲ್ ಗವರ್ನ್‌ಮೆಂಟ್‌ನಿಂದ ಗ್ರ್ಯಾಂಟ್ ಪಡೆದುಕೊಂಡು ಮಾಡಬಹುದು. ನಿಮ್ಮ ಕೈಯಿಂದ ಈ ಒಂದು ಉತ್ತಮವಾದ ಕಾರ್ಯ ಆಗಬೇಕು ಎಂದು ನಾನು ಹೇಳಬಯಸುತ್ತೇನೆ.

(ಮಾನ್ಯ ಅಧ್ಯಕ್ಷರು ತಮ್ಮ ಪೀಠವನ್ನು ಅಲಂಕರಿಸಿದರು)

ಮಾನ್ಯ ಸಭಾಧ್ಯಕ್ಷರೆ, ನನಗೆ ಬೆಂಬಲ ಕೊಡುವ ದೃಷ್ಟಿಯಿಂದ ತಾವು ಬಂದಿರಿ ಎಂದು ನಾನು ಭಾವನೆ ಮಾಡುತ್ತೇನೆ,

ಶ್ರೀ ಎಂ.ಎಸ್. ಪಾಟೀಲ್.— ಮಾನ್ಯ ಮಂತ್ರಿಗಳೂ ಬೆಂಬಲ ಕೊಡುತ್ತಾರೆ.

ಶ್ರೀ ಕೆ.ಹೆಚ್. ಪಾಟೀಲ್.— ತಾವೆಲ್ಲಾ ಬಂದಿರಿ. ಮಾನ್ಯ ರಾಮಕೃಷ್ಣ ಹೆಗಡೆಯವರಿಗೆ ಗೊತ್ತಿದೆ. ನನ್ನ ಮಕ್ಕಳು ಯಾರೂ ಅಗ್ರಿಕಲ್ಚರಲ್ ಯೂನಿವರ್ಸಿಟಿಯಲ್ಲಿ ಓದುವುದಿಲ್ಲ. ನಾನು ಇರುವ ತನಕ ಕಳಿಸುವುದಿಲ್ಲ. ನನ್ನ ಮಕ್ಕಳ ದೃಷ್ಟಿಯಿಂದ ನಾನು ಹೇಳುತ್ತಾ ಇಲ್ಲ. ಅನೇಕ ಭೂಮಿ ಸಮಸ್ಯೆಗಳನ್ನು ಅರಿತುಕೊಳ್ಳುವ ಸಲುವಾಗಿ ಆಗಬೇಕು. ಬಾಂಬೆಯಲ್ಲಿ ೪–೫ ಯೂನಿವರ್ಸಿಟಿಗಳನ್ನು ಮಾಡಿದ್ದಾರೆ. ಕೊಠಾರಿ ಕಮಿಟಿ ರಿಪೋರ್ಟಿನಲ್ಲಿ ಯೂನಿವರ್ಸಿಟಿ ಆಗಬೇಕು ಎಂದು ಹೇಳಿದ್ದಾರೆ. ಕೃಷಿ ವಿಜ್ಞಾನ ಕೇಂದ್ರ ಒಂದು ಜಿಲ್ಲೆಗೆ ಒಂದು ಮಾಡಬೇಕು ಎಂದು ಹೇಳಿದ್ದಾರೆ. ಇವತ್ತು ಜಿಲ್ಲೆಗೆ ಒಂದು ಕೃಷಿ ವಿಜ್ಞಾನಕೇಂದ್ರ ಆಗಲೇಬೇಕು. ಆ ದೃಷ್ಟಿಯಿಂದ ತಾವು ಪ್ರಯತ್ನ ಮಾಡಿ ಕೃಷಿ ವಿಶ್ವವಿದ್ಯಾನಿಲಯವನ್ನು ಪ್ರಯತ್ನ ಮಾಡಬೇಕು ಎಂದು ನಾನು ಅವರನ್ನು ಕೇಳಿಕೊಳ್ಳುತ್ತೇನೆ. ಇವತ್ತು ಇರತಕ್ಕಂಥ ಕಾಲೇಜುಗಳಲ್ಲಿ ೭೦–೮೫ ಪರ್ಸೆಂಟ್ ಮಾರ್ಕ್ ಪಡೆದುಕೊಂಡವರಿಗೆ ಅಡ್ಮಿಷನ್. ನಮ್ಮ ನಿಮ್ಮ ಮಕ್ಕಳು ೮೦ ಪರ್ಸೆಂಟ್ ತಗೆದುಕೊಳ್ಳಲಿಕ್ಕೆ ಸಾಧ್ಯವೇ? ಹಳ್ಳಿಯಲ್ಲಿರತಕ್ಕ ರೈತರ ಮಕ್ಕಳು ಹೇಗೆ ತೆಗೆದುಕೊಳ್ಳಬೇಕು? ಅಡ್ಮಿಷನ್ ಹೆಚ್ಚು ಇದೆ, ಇನ್‌ಟೇಕ್ ಕಡಿಮೆ ಇದೆ. ಇದನ್ನು ತಪ್ಪಿಸಬೇಕಾದರೆ ಕಾಲೇಜುಗಳು ಹೆಚ್ಚಿಗೆ ಆಗಬೇಕು, ಪ್ರತಿಯೊಂದು ಗ್ರಾಮಕ್ಕೂ ಅಗ್ರಿಕಲ್ಚರಲ್ ಅಸಿಸ್ಟೆಂಟ್ ಇರಬೇಕು. ಅನಿಮಲ್ ಹಸ್ಬೆಂಡರಿಯಲ್ಲಿ ಪ್ರತಿಯೊಂದು ಹಳ್ಳಿಯಲ್ಲೂ ಸಹಾಯಕರು ಇರುವಂತೆ ಮಾಡುತ್ತೇವೆಂದು ಹೇಳುತ್ತಾರೆ. ಅಂತಹ ಅಗ್ರಿಕಲ್ಚರಲ್ ಗ್ರಾಜುಯೇಟ್ಸ್ ವೆಟರ್ನರಿ ಗ್ರಾಜುಯೇಟ್ಸ್ ಎಲ್ಲಿ ಸಿಗುತ್ತಾರೆ? ವೆಟರ್ನರಿ ಆಸ್ಪತ್ರೆಯಲ್ಲಿ ಡಾಕ್ಟರ್ಸ್ ಸಹಿತ ಇಲ್ಲ. ಆ ದೃಷ್ಟಿಯಿಂದ ಯೂನಿವರ್ಸಿಟಿ ಆಗಬೇಕು. ತಾವು ಮತ್ತೊಂದು ಯೂನಿವರ್ಸಿಟಿಯನ್ನು ಪ್ರಾರಂಭ ಮಾಡಲೇಬೇಕು. ಈ ಒಂದು ಕೀರ್ತಿಯನ್ನು ಪಡೆಯಲೇಬೇಕು ಎಂದು ಮಾನ್ಯ ಪ್ರಕಾಶ್‌ರವರಲ್ಲಿ ಬಿನ್ನಹ ಮಾಡಿಕೊಳ್ಳುತ್ತೇನೆ.

ಇನ್ನು ಅನಿಮಲ್ ಹಸ್ಬೆಂಡರಿ ಬಗ್ಗೆ ಒಂದೆರಡು ವಿಷಯಗಳನ್ನು ಹೇಳುತ್ತೇನೆ. ಅನಿಮಲ್ ಡಿಸ್ಟ್ರಿಬ್ಯೂಷನ್ ಬಗ್ಗೆ ತಾವು ವಿಶೇಷ ಗಮನ ಕೊಡಬೇಕು. ಆಕಳುಗಳನ್ನು ಪ್ರೊಕ್ಯೂರ್‌ಮೆಂಟ್ ಮಾಡುತ್ತಾ ಇದ್ದಾರೆ. ಇಲ್ಲಿ ಪ್ರೊಕ್ಯೂರ್‌ಮೆಂಟ್ ಮಾಡಿರತಕ್ಕ ಆಕಳನ್ನು ನೂಕಿದರೆ ಬೀಳುತ್ತವೆ, ತಳ್ಳಿದರೆ ಎಲುಬು ಮುರಿದುಕೊಳ್ಳುತ್ತದೆ. ಇವುಗಳ ಸಂರಕ್ಷಣೆ ಆಗಬೇಕಾಗಿದೆ. ಅದಕ್ಕೆ ಬೇಕಾದಂತಹ

ವ್ಯವಸ್ಥೆ ನಮ್ಮಲ್ಲೇ ತಯಾರಾಗಲಿ. ಮೈಸೂರಿನಲ್ಲಿ ಬೇಕಾದಂತಹ ವೆಟರ್ನರಿ ಸರ್ಜನ್ಸ್‌ನ್ನು ತಯಾರು ಮಾಡಿ ತೀವ್ರವಾಗಿ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಹಾರ್ಟಿಕಲ್ಚರ್ ಬಗ್ಗೆ ಹೇಳುವುದಾದರೆ ಇದು ಬಹಳ ಉತ್ತಮವಾದಂಥ ಡಿಪಾರ್ಟ್‌ಮೆಂಟ್ ನಾನು ವಿಶೇಷವಾಗಿ ಆಸಕ್ತಿವಹಿಸಿ ಕೆಲಸ ಮಾಡಿದಂಥ ಡಿಪಾರ್ಟ್‌ಮೆಂಟ್. ಇದರ ಬಗ್ಗೆ ಮಾತನಾಡುವಾಗ ಮರಿಗೌಡರನ್ನು ನೆನೆಸಿಕೊಳ್ಳಬೇಕು, ಅವರು ಹಾಕಿದಂಥ ಗಿಡಗಳು ಹೋಗಿವೆ. ಮಾನ್ಯ ತರುಣ ಮಂತ್ರಿ ಯವರಿಗೆ ಸಲಹೆ ಮಾಡುತ್ತೇನೆ. ಮರಿಗೌಡರ ಹೆಸರನ್ನು ತೆಗೆದುಕೊಂಡು ತೋಟದಲ್ಲಿ ಕಾಲಿಡಬೇಕು. ಬೇರೆಯವರು ಹೊಲಸು ಸಾಗಿಸುವಂಥ ವ್ಯಕ್ತಿಗಳು ಬರುತ್ತಿದ್ದರು. ಆದರೆ ಮರಿಗೌಡು ಡೈರೆಕ್ಟರಾಗಿದ್ದ ವ್ಯಕ್ತಿಗಳು ಹೊಲಸು ಸಾಗಿಸಿದ್ದಾರೆ ಅಂದರೆ ಎಷ್ಟು ಆಸಕ್ತಿವಹಿಸಿ ಕೆಲಸ ಮಾಡುತ್ತಿದ್ದರು ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕು. ಅನೇಕ ಸಂದರ್ಭದಲ್ಲಿ ಹಣ ಇಲ್ಲ ಅಂದರೆ ರಿಕಾರ್ಡ್‌ನಲ್ಲಿ ಮಾಡಿಬಿಡಿ ಎಂದು ಹೇಳುತ್ತಿದ್ದರು. ನಮ್ಮ ಭಾಗದಲ್ಲಿ ಹಾರ್ಟಿಕಲ್ಚರ್ ಡೆವಲಪ್‌ಮೆಂಟ್ ಬಹಳ ಕಡಿಮೆ. ಹಳೇ ಮೈಸೂರಿನಲ್ಲಿ ಹಾರ್ಟಿಕಲ್ಚರ್ ಡೆವಲಪ್‌ಮೆಂಟ್ ಆದರೂ ಸಹ ನಿಮ್ಮ ಬಡ್ಜೆಟ್‌ನಲ್ಲಿ ಏನಿದೆ ಎಂದರೆ ವಿಧಾನಸೌಧದ ಮುಂದೆ ಕಬ್ಬನ್‌ಪಾರ್ಕ್ ಒಳಗೆ ಹೆಚ್ಚಿನ ಹಣ ಹಾಕಿದಿರಿ. ಲಾಲ್‌ಬಾಗ್ ಮೂಗುತಿಯಂತೆ ಇರತಕ್ಕಂಥದ್ದು. ಲಾಲ್‌ಬಾಗ್ ನಮ್ಮ ದೇಶಕ್ಕೆ ಕೀರ್ತಿ ತಂದಿದೆ. ಅಂದಮೇಲೆ ಲಾಲ್‌ಬಾಗ್‌ಗೆ ಹೆಚ್ಚು ಹಣ ಹಾಕಿ ಹೆಚ್ಚು ಸುಂದರಮಯವಾಗಬೇಕು ಎಂದು ತಮ್ಮಲ್ಲಿ ಪ್ರಾರ್ಥಿಸುತ್ತೇನೆ, ಟ್ರೈನಿಂಗ್ ಬಗ್ಗೆ ಹೇಳುವುದಾದರೆ ನಮ್ಮಲ್ಲಿರತಕ್ಕ ಟ್ರೈನಿಂಗ್ ಬಹಳ ಕಡಿಮೆ, ಈಗಿರುವ ಪ್ರಕಾರ ಹೋದರೆ ೧೦ ವರ್ಷಗಳಾದರೂ ಹಾರ್ಟಿಕಲ್ಚರ್ ಅಸಿಸ್ಟೆಂಟ್ಸ್‌ನ್ನು ಕೊಡುವುದಕ್ಕಾಗುವುದಿಲ್ಲ. ಹಳ್ಳಿಗೆ ಒಬ್ಬ ಹಾರ್ಟಿಕಲ್ಚರಲ್ ಅಸಿಸ್ಟೆಂಟ್ ಬೇಕು. ಡೆಪ್ಯುಟೇಷನ್ ಕೊಡಿ. ಆದ್ದರಿಂದ ಹಾರ್ಟಿಕಲ್ಚರ್ ಡೆವಲಪ್‌ಮೆಂಟ್ ಹೆಚ್ಚು ಆಗಬೇಕು. ಎಲ್ಲಾ ಕಡೆ ನೀರಿಲ್ಲದೆ ಒಣಗಿಹೋಗುತ್ತಿದೆ. ಆದ್ದರಿಂದ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿರತಕ್ಕ ಬೋರಿಂಗ್ ಮಿಷಿನ್‌ನ್ನು ಉಪಯೋಗ ಮಾಡಿಕೊಂಡು ಬಂಕ್ ಅಡಜಸ್ಟ್‌ಮೆಂಟ್ ಮಾಡಿಕೊಂಡು ಮಾಡಬಹುದು, ನೀವು ರೊಕ್ಕ ಕೊಡುವ ಹಾಗಿಲ್ಲ. ಈ ರೀತಿ ಬೋರ್ ಮಾಡಿದರೆ ಉತ್ತಮವಾದ ಕೆಲಸ ಮಾಡಿದ ಹಾಗೆ ಆಗುತ್ತದೆ. ನಾನು ಇನ್ನೂ ಹೆಚ್ಚು ಸಮಯ ಮಾತನಾಡಬೇಕಾದರೂ ಸಹ ಮಾನ್ಯ ಅಧ್ಯಕ್ಷರು ಹೇಳಿದಮೇಲೆ ಮಾತನಾಡುವ ಧೈರ್ಯಮಾಡದೆ, ನಿಜವಾಗಿ ಈ ಮೂರು ಖಾತೆಯಲ್ಲಿ ಇನ್ನೂ ಹೆಚ್ಚು ಅಭಿವೃದ್ಧಿಗೊಳ್ಳಬೇಕು, ಯಶಸ್ವಿಯಾಗಬೇಕು, ಅವರು ಕೈಹೆಚ್ಚು ಬಲಪಡಿಸಬೇಕು ಎಂದು ಹೇಳಿ ಈ ಬೇಡಿಕೆಗಳನ್ನು ಪ್ರಬಲವಾಗಿ ವಿರೋಧ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

೫-೦೦ ಪಿ. ಎಂ.

† ಶ್ರೀ ವಿಶ್ವನಾಥ ರೆಡ್ಡಿ ಮುಂದ್ರಾಳ್ (ಯಾದ್‌ಗಿರ್).—ಸನ್ಮಾನ್ಯ ಅಧ್ಯಕ್ಷರೇ, ೧೯೮೫-೮೬ನೇ ಸಾಲಿನ ಭೂ ಸಾರ ಮತ್ತು ಜಲ ಸಂರಕ್ಷಣೆ ಕೃಷಿ ಮತ್ತು ಪಶು ಸಂಗೋಪನೆ, ತೋಟಗಾರಿಕೆ ಇಲಾಖೆಯ ಬೇಡಿಕೆಗಳನ್ನು ಸಮರ್ಥಿಸುತ್ತಾ ಕೆಲವು ಸಲಹೆ ಸೂಚನೆಗಳನ್ನು ನೀಡಬಯಸುತ್ತೇನೆ. ಈ ದೇಶದಲ್ಲಿ ಕೃಷಿ ಮೂಲವಾಗಿ ಉತ್ಪನ್ನ ಶೇಕಡ ೮೦ ರಷ್ಟು ಜನ ಅದರಿಂದಲೇ ಜೀವಿಸುತ್ತಿದ್ದಾರೆ. ಆದಕ್ಕಾಗಿ ಕೃಷಿ ಉತ್ಪನ್ನವನ್ನು ಅಭಿವೃದ್ಧಿಗೊಳಿಸಬೇಕು. ಒಕ್ಕಲುತನ ಬೆಳೆಯಬೇಕು. ಇದನ್ನು ಕಾರ್ಯಗತ ಮಾಡುವುದಕ್ಕೆ ಜನತಾ ಸರ್ಕಾರ ಬಂದ ಮೇಲೆ ಡ್ರೈ ಫಾರ್ಮಿಂಗ್ ಯೋಜನೆ ತೆಗೆದುಕೊಂಡಿದೆ. ಎಲ್ಲಿಯವರೆಗೆ ಭೂಮಿಗೆ ನೀರು ಸಿಗುವುದಿಲ್ಲ. ಅಲ್ಲಿಯವರೆಗೆ ಒಕ್ಕಲುತನ ಲಾಭದಾಯಕವಾಗುವುದಿಲ್ಲ ಎನ್ನತಕ್ಕ ಮಾತು ಸರ್ವೇ ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಸರ್ವ ಪ್ರಯತ್ನ ಮಾಡಿದರೂ ಕೂಡ ೧೦೦ಕ್ಕೆ ೨೦ಕ್ಕಿಂತ ಹೆಚ್ಚು ಮಾಡುವುದಕ್ಕೆ ಸಾಧ್ಯವಿಲ್ಲ. ಆ ದೃಷ್ಟಿಯಿಂದ ಒಕ್ಕಲುತನದ ಬೇಸಾಯ ಬೆಳೆಯಬೇಕು. ಒಕ್ಕಲಿಗನಿಗೆ ಆರ್ಥಿಕವಾಗಿ ಸಮೃದ್ಧಿ ತರತಕ್ಕಂಥದ್ದು ಆಗಬೇಕು ಎನ್ನತಕ್ಕಂತಹ ದೃಷ್ಟಿಯಲ್ಲಿ ಈ ಕಾರ್ಯಕ್ರಮ ತೆಗೆದುಕೊಂಡಿದೆ. ಈ ಕಾರ್ಯಕ್ರಮದಲ್ಲಿ ವಿಶೇಷವಾಗಿ ತೋಟಗಾರಿಕೆ ಮತ್ತು ಪಶುಸಂಗೋಪನಾ ಇಲಾಖೆಯು ಹೆಚ್ಚಿನ ಮಹತ್ವದ ಪಾತ್ರವನ್ನು ವಹಿಸಬೇಕಾಗುತ್ತದೆ. ನಮ್ಮ ಮಾನ್ಯ ಅನುಭವೀ ಮಿತ್ರರಾದಂತಹ ಶ್ರೀ ಕೆ. ಹೆಚ್. ಪಾಟೀಲ್‌ರವರು ಭೂ

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಸಾರ ಸಂರಕ್ಷಣೆಯ ಬಗ್ಗೆ ಕೆಲವು ಮಾತುಗಳನ್ನು ಹೇಳಿದರು. ಬಹುತೇಕ ಭೂ ಸಂರಕ್ಷಣೆಗೆ, ಸಾಯಿಲ್ ಕನ್‌ಸರ್‌ವೇಷನ್‌ಗೆ ಹೆಚ್ಚು ದುಡ್ಡು ಇಲ್ಲ ಎನ್ನತಕ್ಕಂತಹ ದೃಷ್ಟಿಯಿಂದ ೧೯ ವಾಟರ್ ಶೆಡ್ ಮಾಡಿ ಅಲ್ಲಿ ಇಂಟಗ್ರೇಟಿಯಾಗಿ ಭೂ ಸಂರಕ್ಷಣೆ ಮಾಡಬೇಕೆನ್ನುವ ದೃಷ್ಟಿಯಿಂದ ಈ ಯೋಚನೆ ಮಾಡಿರಬಹುದು. ಭೂ ಸಂರಕ್ಷಣೆಗಾಗಿ ಹೆಚ್ಚು ಹಣ ಕೊಡಬೇಕು. ಇದರ ಬಗ್ಗೆ ತಾಂತ್ರಿಕವಾಗಿ ಹೊಸ ಯೋಜನೆಯನ್ನು ತೆಗೆದುಕೊಂಡು ಬಂದಿದ್ದಾರೆ, ಅದು ಉಚಿತವೇ ಎನ್ನತಕ್ಕಂತಹ ಮಾತನ್ನು ಪರಿಶೀಲಿಸಬೇಕೆಂದು ಮಾನ್ಯ ಕೃಷಿ ಮಂತ್ರಿಗಳಲ್ಲಿ ಅರಿಕೆಮಾಡಿಕೊಳ್ಳುತ್ತೇನೆ. ಇನ್ನು ಯೂನಿವರ್ಸಿಟಿ ಬಗ್ಗೆ ಮಾನ್ಯ ಕೆ. ಹೆಚ್. ಪಾಟೀಲರು ಒಂದು ಮಾತನ್ನು ಹೇಳಿದರು. ಅದನ್ನು ನಾನು ಕೂಡಾ ಅನುಮೋದಿಸುತ್ತೇನೆ. ಡಿವಿಜನೆಗೆ ಒಂದು ಯೂನಿವರ್ಸಿಟಿ ಆಗಬೇಕು. ಗುಲ್ಬರ್ಗಾ ಭಾಗಕ್ಕೆ ಯೂನಿವರ್ಸಿಟಿಯಾಗಬೇಕೆಂದು ಮಹತ್ವಾಕಾಂಕ್ಷೆಯಿದ್ದರೂ ಕೂಡ, ಧಾರವಾಡದಲ್ಲಿ ಎಲ್ಲಾ ಅನುಕೂಲವಿರುವುದರಿಂದ, ಅಲ್ಲಿ ಯೂನಿವರ್ಸಿಟಿಯಾಗಬೇಕು ಮತ್ತು ಆ ಭಾಗದ ಅಭಿವೃದ್ಧಿಗಾಗಿ, ಇದೊಂದು ನಾಂದಿಯಾಗಬಹುದು ಎನ್ನತಕ್ಕಂತಹ ಮಾತನ್ನು ಹೇಳಬಯಸುತ್ತೇನೆ. ಇನ್ನು ನಾನು ವಿಶೇಷವಾಗಿ ಪಶುಸಂಗೋಪನೆ ಮತ್ತು ಪಶುವೈದ್ಯ ಇಲಾಖೆಯ ಬಗ್ಗೆ ವಿಸ್ತೃತವಾಗಿ ಕೆಲಸ ಮಾಡಿದ್ದನ್ನು ಹೇಳಬಯಸುತ್ತೇನೆ. ನಾನು ಪಶುಸಂಗೋಪನಾ ಮಂತ್ರಿಯಾಗಿ ಒಂದೂವರೆ ವರ್ಷಗಳ ಕಾಲ ಸೇವೆ ಸಲ್ಲಿಸಿದ ಅನುಭವವನ್ನು ಪಡೆದುಕೊಂಡು ಕೆಲವು ಸಲಹೆಗಳನ್ನು ನೀಡಬಯಸುತ್ತೇನೆ. ನಮ್ಮಲ್ಲಿ ಸುಮಾರು ೧೨೩೨ ಇನ್‌ಸ್ಟಿಟ್ಯೂಷನ್ ಇದೆ. ಅದರಲ್ಲಿ ೩೩ ಹಾಸ್ಪಿಟಲ್‌ಗಳು, ೪೯೨ ಪಶುವೈದ್ಯ ಶಾಲೆಗಳು ೭೫೨ ಗ್ರಾಮೀಣ ಪಶುವೈದ್ಯ ಶಾಲೆಗಳು ೫೩ ವೆಟರ್‌ನರಿ ಸೆಂಟರ್ಸ್ ಇವೆ. ೧೦ ಸಾವಿರ ದನಗಳ ಪಾಪ್ಯುಲೇಷನ್‌ಗೆ ಒಂದರಂತೆ ಗಣತಿಯಲ್ಲಿ ತೆಗೆದುಕೊಂಡು ಮಾಡಿದ್ದಾರೆ. ಇದು ಸರಿ ಹೋಗುವುದಿಲ್ಲವೆನ್ನತಕ್ಕಂತಹ ದೃಷ್ಟಿಯಿಂದ ೧೦ ಸಾವಿರ ಜಾನುವಾರುಗಳಿಗೆ ಒಂದು ಇನ್‌ಸ್ಟಿಟ್ಯೂಷನ್ ಆಗಬೇಕು. ಈ ಪ್ರಕಾರ ಅದರೆ ಇನ್ನೂ ಸುಮಾರು ೨೬೦೦ ಇನ್‌ಸ್ಟಿಟ್ಯೂಷನ್ ಆಗಬೇಕಾಗುತ್ತದೆ. ಇವತ್ತು ಎಷ್ಟೆಷ್ಟು ಸಂಸ್ಥೆಗಳಿವೆ ಅವುಗಳನ್ನು ದ್ವಿಗುಣ ಗೊಳಿಸುವಷ್ಟು ಸಂಸ್ಥೆಗಳು ಆಗಬೇಕು. ಇದರಿಂದ ಜನರಿಗೆ ಅನುಕೂಲವಾಗುತ್ತದೆ. ರಾಯಚೂರಿನಲ್ಲಿ ೩೨೭೪ ಜಾನುವಾರುಗಳ ಸಂಖ್ಯೆಗೆ ಒಂದು ಇನ್‌ಸ್ಟಿಟ್ಯೂಷನ್ ಪ್ರಕಾರ ವ್ಯವಸ್ಥೆ ಮಾಡಿದ್ದೀರಿ. ಉತ್ತರ ಕನ್ನಡ ಜಿಲ್ಲೆಯಲ್ಲಿ ೧೦ ಸಾವಿರ ಜಾನುವಾರುಗಳಿಗೆ ಆಗಿದೆ. ಆದುದರಿಂದ ಎಲ್ಲಾ ಕಡೆಗೂ ೧೦ ಸಾವಿರ ಜಾನುವಾರುಗಳಿಗೆ ಒಂದು ಇನ್‌ಸ್ಟಿಟ್ಯೂಷನ್ ಆಗತಕ್ಕ ವ್ಯವಸ್ಥೆಯಾಗಬೇಕೆಂದು ಹೇಳುತ್ತೇನೆ. ಇನ್ನು ಸಿಬ್ಬಂದಿ ವ್ಯವಸ್ಥೆಯ ಬಗ್ಗೆ ನೋಡಿದಾಗ ೧೨೩೨ ಸಂಸ್ಥೆಗಳಿಗೆ ಎಷ್ಟು ಕೊರತೆಯಿದೆಯೆಂದರೆ, ಸುಮಾರು ೧೪೪ ಲೈವ್ ಸ್ಟಾಕ್ ಇನ್‌ಸ್ಪೆಕ್ಟರ್‌ಗಳ ಕೊರತೆಯಿದೆ ಹಾಗೂ ಪಶುವೈದ್ಯಕೀಯ ಮತ್ತು ಜಾನುವಾರು ಪರಿವೀಕ್ಷಕರು (ದರ್ಜೆ ೨) ೮೫೫ ಹುದ್ದೆಗಳು ಕೊರತೆಯಿದೆ. ೭೩೩ ಔಷದಿ ಮಿಶ್ರಣಗಾರರ ಹುದ್ದೆ ಕೊರತೆಯಿದೆ. ದುರ್ದೈವ ೧೯೭೫-೭೬ರಿಂದಲೂ ಕೂಡ ಈ ಕೊರತೆಯನ್ನು ದೂರ ಮಾಡಲಿಕ್ಕೆ ಪ್ರಯತ್ನ ಮಾಡಲಿಲ್ಲ. ೧೯೭೯-೮೦ರಲ್ಲಿ ಇದರ ಬಗ್ಗೆ ಅರ್ಜಿಗಳನ್ನು ಕರೆದರೂ ಕೂಡ ಆ ಬಗ್ಗೆ ಯಾವುದೇ ಕಾರ್ಯಕ್ರಮ ತೆಗದುಕೊಳ್ಳಲಿಕ್ಕೆ ಆಗಿಲ್ಲ. ನಮ್ಮ ಸರ್ಕಾರ ಬಂದ ಮೇಲೆ, ನಾನು ಮಂತ್ರಿಯಾದ ಮೇಲೆ ಮೊಟ್ಟ ಮೊದಲನೆಯದಾಗಿ ಡಾಕ್ಟರುಗಳ ಕೊರತೆ ತುಂಬಲಿಕ್ಕೆ ಮತ್ತು ಹೆಚ್ಚು ಪಶುವೈದ್ಯ ಕಾಲೇಜು ಆಗಬೇಕೆಂದು ಪ್ರಯತ್ನ ಮಾಡಿದೆವು. ಸುದೈವದಿಂದ ಕೃಷಿ ಮಂತ್ರಿಗಳು ಮತ್ತು ಮುಖ್ಯ ಮಂತ್ರಿಗಳು ಒಪ್ಪಿ, ಬೀದರ್‌ನಲ್ಲಿ ಒಂದು ಕೃಷಿ ಕಾಲೇಜು ಮಾಡಿದ್ದೇವೆ. ಪಶುವೈದ್ಯ ಕಾಲೇಜು ಮಾಡಿದ್ದೇವೆ. ಇನ್ನು ಪಶುವೈದ್ಯಕೀಯ ಮತ್ತು ಜಾನುವಾರು ಪರಿವೀಕ್ಷಕರ, ಕಾಂಪೌಂಡರ್ ಸಲುವಾಗಿ ನಾನು ಪಟ್ಟ ಕಷ್ಟ ಯಾರಿಗೂ ಅನುಭವವಿಲ್ಲ. ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ತೆರೆಯಬೇಕು, ಇವರುಗಳಿಗೆ ಟ್ರೈನಿಂಗ್ ಕೊಡಬೇಕು, ಇವರಿಗೆ ಸ್ಟೈಫಂಡ್ ತೆಗೆದು ಮಾಡುವುದರಿಂದ ಇನ್ನೂ ೧೦ ವರ್ಷಗಳಲ್ಲಿಯಾದರೂ ಕೊರತೆ ಕಡಿಮೆಯಾಗುತ್ತದೆಂದು ಪಶು ಪರಿವೀಕ್ಷಕರ ೧೨ ಟ್ರೈನಿಂಗ್ ಸೆಂಟರ್‌ಗಳನ್ನು ಮತ್ತು ೧೨ ಕಾಂಪೌಂಡರ್ ಟ್ರೈನಿಂಗ್ ಸೆಂಟರ್‌ಗಳನ್ನು ತೆರೆಯಲಾಗಿದೆ. ೧೨ ಸೆಂಟರ್‌ಗಳಲ್ಲಿ ಇನ್ನು ಒಂದೆರಡು ತಿಂಗಳುಗಳಲ್ಲೇ ಒಂದು ವರ್ಷದ ಟ್ರೈನಿಂಗ್ ಮುಗಿದೆ, ಅದು ಮುಗಿಯುತ್ತದೆ. ನಮಗೆ ೩೮೫ ಜನ ಪಶು ಪರಿವೀಕ್ಷಕರು ೩೮೦ ಜನ ಕಾಂಪೌಂಡರ್ಸ್ ಸಿಗುತ್ತಾರೆ ಅವರು ಬಂದ ಕೂಡಲೇ ಅವರನ್ನು ನೇಮಿಸಿಕೊಳ್ಳಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಇನ್ನು ಮುಂದೆ ಟ್ರೈನಿಂಗ್ ಕೊಡುವ ಸಲುವಾಗಿ ವ್ಯವಸ್ಥೆ ಮಾಡಿ, ೧-೨ ವರ್ಷದಲ್ಲಿ ಈ ಕೊರತೆಯನ್ನು ಕಡಿಮೆ ಮಾಡಿ. ಮುಂದೆ ಹೊಸದಾಗಿ ಪಶುವೈದ್ಯ ಶಾಲೆಗಳನ್ನು ಗ್ರಾಮೀಣ ಪಶುವೈದ್ಯ ಶಾಲೆಗಳನ್ನು ತೆರೆಯಲಿಕ್ಕೆ ಅನುಕೂಲ

ಮಾಡಿಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಟ್ರೈನಿಂಗ್ ಸೆಂಟರ್‌ನ್‌ಗೆ ಸಿಬ್ಬಂದಿಗಳನ್ನು ನೇಮಕ ಮಾಡುತ್ತಾರೆ. ಅದರೊಳಗೆ ಡಿಸ್ಟ್ರಿಕ್ಟ್ ವೈಸ್ ಮಾಡಿದರೆ ಬಹಳ ಅನುಕೂಲ. ಹಿಂದೆ ನಾನು ಮಂತ್ರಿಯಾಗಿದ್ದಾಗ ಇಲ್ಲಿಂದ ಪಶುವೈದ್ಯ ಸರ್ಜನ್ಸ್ ಅನ್ನು ರಾಯಚೂರು ಗುಲ್ಬರ್ಗ ಜಿಲ್ಲೆಯ ಇಂಟೀರಿಯರ್ ಭಾಗದಲ್ಲಿ ಲೋಕಲ್ ಕ್ಯಾಂಡಿಡೇಟ್ ಎಂದು ಪೋಸ್ಟ್ ಮಾಡಿದರೆ, ವರ್ಷದಲ್ಲಿ ಒಂದೆರಡು ದಿವಸ ಅಲ್ಲಿ ಹೋಗಿ ಬಿಟ್ಟು, ನಿರಂತರವಾಗಿ ಬೆಂಗಳೂರಿನಲ್ಲಿ ಇರಬೇಕೆನ್ನುವಂತಹ ಪರಿಸ್ಥಿತಿ ಕಂಡು ಬಂತು. ಶಿಕ್ಷೆ ಕೊಟ್ಟೆ. ಮಾನವೀಯತೆಯ ದೃಷ್ಟಿಯಿಂದ ಪುನಃ ಅವರ ಕರ್ತವ್ಯ ಮಾಡಬೇಕೆನ್ನತಕ್ಕಂತಹ ಮಾತನ್ನು ಒಪ್ಪಿದೆ, ಅವರನ್ನು ಕೆಲಸಕ್ಕೆ ತೆಗೆದುಕೊಳ್ಳಲಾಗಿದೆ. ಇದು ಅನಿವಾರ್ಯ.

ಇವೊತ್ತು ಬೆಂಗಳೂರಿನವರನ್ನು ತೆಗೆದುಕೊಂಡು ಹೋಗಿ ಗುಲ್ಬರ್ಗಕ್ಕೆ ಹಾಕಿದರೆ ಅಥವಾ ಗುಲ್ಬರ್ಗದವರನ್ನು ತೆಗೆದುಕೊಂಡು ಬಂದು ಬೆಂಗಳೂರಿಗೆ ಹಾಕಿದರೆ ಅವರು ಕೆಲಸ ಮಾಡತಕ್ಕದ್ದು ಕಷ್ಟ ಇದೆ. ಅವರು ದೊಡ್ಡ ದೊಡ್ಡ ಹುದ್ದೆಗಳಲ್ಲಿದ್ದರೆ ಮಾತ್ರ ಸಾಧ್ಯವಾಗುತ್ತದೆಯೇ ಹೊರತು ಸಣ್ಣ ಸಣ್ಣ ಹುದ್ದೆಗಳಿದ್ದರೆ ಖಂಡಿತ ಸಾಧ್ಯವಿಲ್ಲ. ಆದ್ದರಿಂದ, ಈ ಟ್ರೈನಿಂಗ್ ಸೆಂಟರ್‌ನಲ್ಲಿ ತರಬೇತಿಯನ್ನು ಪಡೆದವರಿಗೆ ಆಯಾ ಡಿವಿಜನ್ ಮಟ್ಟದಲ್ಲಿ ಅಥವಾ ಡಿಸ್ಟ್ರಿಕ್ಟ್ ಮಟ್ಟದಲ್ಲಿ ಅವರನ್ನು ಹಾಕುವುದು ಉಚಿತ ಎಂದು ಹೇಳಲಿಕ್ಕೆ ಬಯಸುತ್ತೇನೆ. ಅದೇ ದೃಷ್ಟಿಯಿಂದ ನಾವು ಏನು ೧೨ ಪಶುಪರಿವೀಕ್ಷಕರುಗಳ ಟ್ರೈನಿಂಗ್ ಸೆಂಟರ್ ಮತ್ತು ೧೨ ಔಷಧ ಮಿಶ್ರಣ್‌ಕಾರರುಗಳ ಸೆಂಟರುಗಳನ್ನು ತೆಗೆದಿದ್ದೇವೆ ಆ ಒಂದು ಟ್ರೈನಿಂಗ್ ಸೆಂಟರುಗಳನ್ನು ಇಡೀ ರಾಜ್ಯದ ೧೯ ಜಿಲ್ಲೆಗಳಲ್ಲಿಯೂ ಹಬ್ಬುವಂತೆ ವ್ಯವಸ್ಥೆ ಮಾಡಿ ಅದನ್ನು ಮುಂದುವರಿಸಿಕೊಂಡು ಹೋಗಬೇಕು, ಅದೇ ದೃಷ್ಟಿಯಿಂದ ಅವರನ್ನು ನೇಮಕ ಮಾಡಿಕೊಳ್ಳಬೇಕೆಂದು ಹೇಳುತ್ತೇನೆ. ಇದನ್ನೂ ಎರಡು ವರ್ಷಗಳಿಂದಲೂ ಹೊಸ ಗ್ರಾಮ ಪಶುವೈದ್ಯಶಾಲೆಗಳನ್ನು ಕೊಟ್ಟಿಲ್ಲ ಎನ್ನತಕ್ಕ ದೂರು ಬಹಳ ಜನರಿಂದ ಬರುತ್ತಿದೆ. ಹೋದ ಸಾರಿ ನನ್ನ ಹತ್ತಿರ ಜನರು ಬಂದು ೧೯೮೨-೮೩ರಲ್ಲಿ ೨೦೦ ಗ್ರಾಮ ಪಶುವೈದ್ಯಶಾಲೆಗಳನ್ನು ಕೊಟ್ಟಿದ್ದಾರೆ, ನೀವು ಕಾನ್‌ಸ್ಟಿಟ್ಯುಯೆನ್ಸಿಗೆ ಒಂದಾದರೂ ಕೊಡಿ ಎಂದು ಹೇಳುತ್ತಿದ್ದರು. ಆಗ ನಾನು ಅವರಿಗೆ ಒಂದು ಮಾತು ಹೇಳಿದೆ, ಇದ್ದಂಥ ಪಶುವೈದ್ಯಶಾಲೆಗಳಿಗೆ ಸರಿಯಾದಂಥ ಔಷಧಿಗಳನ್ನು ಒದಗಿಸುವಂತಾದ್ದು ಮತ್ತು ಸರಿಯಾದ ಸಿಬ್ಬಂದಿ ಒದಗಿಸುವಂತಾದ್ದು ಇಲ್ಲದೇ ಇರುವುದರಿಂದ, ಇನ್ನೂ ಹೆಚ್ಚು ಪಶುವೈದ್ಯಶಾಲೆಗಳನ್ನು ಮಾಡತಕ್ಕದ್ದು ಉಚಿತ ಅಲ್ಲವೆಂದು ಮಾಡಲಿಲ್ಲ, ಅದಕ್ಕೆ ಆಗ ನಾನು ಚೆನ್ನಾಗಿ ಕೆಲಸ ಮಾಡಲಿಲ್ಲ ಎಂದು ನನ್ನ ಮೇಲೆ ಆರೋಪಿಸಿದರು. ೧೯೭೯-೮೦ರಲ್ಲಿ ೭೫ ವೆಟರ್‌ನರಿ ಡಿಸ್‌ಪೆನ್‌ಸರೀಸ್ ಸ್ಯಾಂಕ್ಷನ್ ಮಾಡಿದ್ದರು. ಇಂಪ್ಲಿಮೆಂಟ್ ಮಾಡಿದ್ದು ನಿಲ್. ೧೯೮೦-೮೧ರಲ್ಲಿ ೨೩ ಇಂಪ್ಲಿಮೆಂಟ್ ಮಾಡಿದ್ದು, ೧೯೮೨-೮೩ರಲ್ಲಿ ೫೦ ಸ್ಯಾಂಕ್ಷನ್ ಮಾಡಿದರೆ ೪ ಇಂಪ್ಲಿಮೆಂಟ್ ಮಾಡಿದರು. ರೂರಲ್ ವೆಟರ್‌ನರಿ ಡಿಸ್‌ಪೆನ್‌ಸರೀಸ್ ೧೯೭೯-೮೦ರಲ್ಲಿ ೧೫ ಸ್ಯಾಂಕ್ಷನ್ ಮಾಡಿದರು ಒಂದು ಇಂಪ್ಲಿಮೆಂಟ್ ಮಾಡಲಿಲ್ಲ. ೧೯೮೨-೮೩ರಲ್ಲಿ ೨೦೪ ಸ್ಯಾಂಕ್ಷನ್ ಮಾಡಿದ್ದರು ಇಂಪ್ಲಿಮೆಂಟ್ ಮಾಡಿದ್ದು ಕೇವಲ ೪. ೧೯೮೩-೮೪ರಲ್ಲಿ ಏನೂ ಆಗಿಲ್ಲ ೧೯೮೪-೮೫ರಲ್ಲಿ ಇದೇ ಪರಿಸ್ಥಿತಿ ಇದೆ, ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೆ, ಕೇವಲ ಸ್ಯಾಂಕ್ಷನ್ ಮಾಡುವುದರಿಂದ ಅರ್ಥ ಇಲ್ಲ, ಅದಕ್ಕೆ ಸರಿಯಾದಂಥ ಸಿಬ್ಬಂದಿ ಆದಮೇಲೆ, ಸರಿಯಾದ ವ್ಯವಸ್ಥೆ ಆದಮೇಲೆ ರೂರಲ್ ವೆಟರನರಿ ಡಿಸ್‌ಪೆನ್‌ಸರೀಸ್ ಸರಿಯಾಗಿ ನಡೆದಮೇಲೆ ಮುಂದಿನ ವಿಸ್ತರಣಾ ಕಾರ್ಯವನ್ನು ಕೈಗೊಳ್ಳಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ, ಸುಮ್ಮನೆ ಮನಸ್ಸಿಗೆ ಬಂದಹಾಗೆ ಇನ್‌ಸ್ಟಿಟ್ಯೂಷನ್ ಬೆಳೆಸಿ ಅದಕ್ಕೆ ಸರಿಯಾದಂಥ ವ್ಯವಸ್ಥೆ ಇಲ್ಲದೇ ಇದ್ದರೆ ಅದರಿಂದ ಜನರಿಗೆ ಲಾಭ ಆಗುವುದಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ, ಇನ್ನು ಸಿಬ್ಬಂದಿ ವಿಚಾರ ಹೇಳಬೇಕೆಂದರೆ, ಅವರುಗಳಿಗೆ ಪ್ರಮೋಷನ್ ಆಪರ್‌ಚ್ಯುನಿಟೀಸ್ ಇಲ್ಲ. ಅಲ್ಲಿ ಸೀನಿಯಾರಿಟಿ ಲಿಸ್ಟ್ ತಯಾರು ಮಾಡಿಲ್ಲ ಇದರ ಬಗ್ಗೆ ಬಹಳ ದಿವಸದಿಂದ ಹಾಗೆ ಇದೆ. ಡೆಪ್ಯುಟಿ ಡೈರಕ್ಟರ್‌ವರಿಗೆ ವೆಟರ್‌ನರಿನಲ್ಲಿ ಒಳ್ಳೆಯ ವ್ಯವಸ್ಥೆ ಇದೆ, ಅಲ್ಲಿ ನಾವು ಅವರಿಗೆ ವ್ಯವಸ್ಥೆ ಮಾಡಿದ್ದೇವೆ. ಇನ್ನು ಅಸಿಸ್ಟೆಂಟ್ ಡೈರೆಕ್ಟರ್‌ಸ್‌ಗಿಂತ ಕೆಳಗಿನವರಿಗೆ ಸೀನಿಯಾರಿಟಿ ಇನ್ನೂ ಸಂಪೂರ್ಣ ನಿರ್ಣಯ ಆಗಿಲ್ಲ. ಆದರ ಬಗ್ಗೆ ತೀವ್ರವಾಗಿ ನಿರ್ಣಯ ಮಾಡಿದರೆ ಅವರಿಗೆ ಯಾವುದೇ ರೀತಿಯ ಮಾನಸಿಕ ತೊಂದರೆಯಿಲ್ಲದೆ ಕೆಲಸ ಮಾಡಲಿಕ್ಕೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ. ಇನ್ನು ಪಗಾರದ ಬಗ್ಗೆ ಹೇಳಬೇಕೆಂದರೆ ಯಾರು ವೆಟರ್‌ನರಿ ಸರ್ಜನ್ಸ್ ನೇಮಕ ಆಗುತ್ತಾರೆ, ಅವರ ಪಗಾರ ಹೆಚ್ಚು ಇರುತ್ತದೆ, ಸೀನಿಯರ್

ಅಸಿಸ್ಟೆಂಟ್ ಡೈರೆಕ್ಟರ್, ಡೆಪ್ಯುಟಿ ಡೈರೆಕ್ಟರ್ ಪಗಾರದಲ್ಲಿ ತಾರತಮ್ಯ ಏನಿದೆ ಆ ತಾರತಮ್ಯವನ್ನು ನಾವು ಸರಿಮಾಡಿಲ್ಲ, ಅದನ್ನು ತೀವ್ರವಾಗಿ ಸರಿಮಾಡಬೇಕು. ಇಲ್ಲದೆ ಇದ್ದರೆ ಈ ಅನಾಮಲಿ, ಏನು ಬರುತ್ತದೆ, ಒಬ್ಬ ಅಸಿಸ್ಟೆಂಟ್ ಡೈರೆಕ್ಟರ್ ಸೀನಿಯರ್ ಮ್ಯಾನ್ ಈಗ ಬಂದಿದ್ದಾನೆ ಅಂದರೆ ನೇಮಕಾತಿ ಮನುಷ್ಯನಿಗೂ ಇವನಿಗೂ ಹೆಚ್ಚು ವ್ಯತ್ಯಾಸ ಇರುವುದಿಲ್ಲ. ಇದರ ಬಗ್ಗೆ ಸರಿಮಾಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ. ಇನ್ನು ತಾಲ್ಲೂಕು ಡೆವಲಪ್‌ಮೆಂಟ್ ಆಫೀಸಿನಲ್ಲಿ ಎಕ್ಸ್‌ಟೆನ್‌ಷನ್ ಆಫೀಸರ್ ಎಂದು ಇದ್ದಾರೆ, ನಮ್ಮ ಪಶುವೈದ್ಯಶಾಲೆಗಳ ಸರ್ಜನ್‌ಗಳು ಇರುತ್ತಾರೆ ಅವರ ಪಗಾರ ಕೆಲವುಕಡೆ ಬಿ.ಡಿ.ಓ. ಗಳಿಗಿಂತಲೂ ಹೆಚ್ಚು ಇರುತ್ತದೆ. ಆ ದೃಷ್ಟಿಯಿಂದ ಅವರ ಕೆಳಗೆ ಕೆಲಸ ಮಾಡಲಿಕ್ಕೆ ತೊಂದರೆಯಾಗುತ್ತದೆ. ಅದಕ್ಕಾಗಿ ಎಕ್ಸ್‌ಟೆನ್‌ಷನ್ ಆಫೀಸರ್ ನೇರವಾಗಿ ಅಸಿಸ್ಟೆಂಟ್ ಡೈರೆಕ್ಟರ್ ಕಂಟ್ರೋಲ್‌ನಲ್ಲಿ ಕೊಡಿ, ಉತ್ತಮವಾದ ಕೆಲಸ ಆಗುತ್ತದೆ ಎಂದು ಮಾನ್ಯ ಮಂತ್ರಿಗಳಲ್ಲಿ ತಿಳಿಸಲಿಕ್ಕೆ ಬಯಸುತ್ತೇನೆ ಇನ್ನು ಮೊಬೈಲ್ ಯೂನಿಟ್‌ಗಳ ಬಗ್ಗೆ ಹೇಳಬೇಕೆಂದರೆ ಪ್ರತಿಯೊಂದು ತಾಲ್ಲೂಕಿಗೂ ಒಂದು ಮೊಬೈಲ್ ವೆಟರ್‌ನರಿ ಕ್ಲಿನಿಕ್ಸ್ ಆಗಬೇಕು, ಇದು ಬಹಳ ಉಪಯೋಗವಾಗುತ್ತದೆ. ಇಲ್ಲದೆ ಹೋದರೆ ಜನರು ಪಶುವೈದ್ಯ ಶಾಲೆಗಳಿಗೆ ಬರುವುದಕ್ಕೆ ಕಷ್ಟವಾಗುತ್ತದೆ. ಈ ವೆಟರ್‌ನರಿ ಮೊಬೈಲ್ ಕ್ಲಿನಿಕ್ ಏನಿದೆ ಇದು ವಾರಕ್ಕೆ ಒಂದು ದಿವಸದಂತೆ ಪ್ರತಿಯೊಂದು ಹಳ್ಳಿಗೂ ಹೋಗುತ್ತಿದ್ದರೆ ಅನುಕೂಲವಾಗುತ್ತದೆ. ಈಗ ಇರತಕ್ಕ ಮೊಬೈಲ್ ಯೂನಿಟ್‌ಗಳು ೮೩ ಇವೆ ಎಂದು ನನ್ನ ಗಮನಕ್ಕೆ ಬಂದಿವೆ. ಸುಮಾರು ೧೭೫ ತಾಲ್ಲೂಕುಗಳಿಗೂ ಒಂದೊಂದರಂತೆ ಆಗುವಂಥ ವ್ಯವಸ್ಥೆಯನ್ನು ಮಾಡಬೇಕು. ಈ ವಿಚಾರದ ಬಗ್ಗೆ ಡಿಪಿಎಪಿ ಪ್ರೋಗ್ರಾಮ್‌ನಿಂದ ಆದರೂ ಹಣ ಒದಗಿಸಿ ಇಲ್ಲ ಯಾವ ಪ್ರೋಗ್ರಾಮ್‌ನಿಂದ ಆದರೂ ಹಣ ಒದಗಿಸಿ ಪ್ರತಿಯೊಂದು ತಾಲ್ಲೂಕಿಗೂ ಒಂದೊಂದು ಕೊಡುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ಸಿಬ್ಬಂದಿ ವ್ಯವಸ್ಥೆ ಬಗ್ಗೆ ಮುಖ್ಯವಾದದ್ದು ಅಂದರೆ ವೆಟರ್‌ನರಿ ಸರ್ಜನ್ ಮೊದಲಾದವರಿಗೆ ಆಸ್ಪತ್ರೆ ಪಕ್ಕದಲ್ಲಿಯೇ ಮನೆ ಆಗತಕ್ಕ ವ್ಯವಸ್ಥೆಯಾಗಬೇಕು ದೂರದ ವ್ಯವಸ್ಥೆ ಆದರೂ ಸಹ ಈ ಒಂದು ಯೋಜನೆಯ ಬಗ್ಗೆ ಹೆಚ್ಚು ಗಮನಕೊಟ್ಟು ಇದನ್ನು ಮಾಡಿಕೊಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ. ಇನ್ನು ನಮ್ಮ ಪಶುವೈದ್ಯ ಸಹಾಯಕ ಸರ್ಜನ್‌ಗಳಿಗೆ ಸೈಕಲ್ ಮೋಟಾರ್ ಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕು. ಸರ್ಕಾರದವರೇ ನೇರವಾಗಿ ಕೊಡಲಿಕ್ಕೆ ಸಾಧ್ಯ ಇದ್ದರೆ ಕೊಡಿ, ಇಲ್ಲದೇ ಹೋದರೆ ಬಡ್ಡಿ ರಹಿತವಾದ ಸಾಲವನ್ನು ಕೊಡತಕ್ಕ ವ್ಯವಸ್ಥೆಮಾಡಬೇಕು. ಈ ಒಂದು ಸ್ಕೀಮಿನ ಬಗ್ಗೆ ಮೊದಲೇ ಯೋಚನೆ ನಡೆದಿತ್ತು. ಆದುದರಿಂದ, ಈ ಒಂದು ಸ್ಕೀಮಿನ ಬಗ್ಗೆ ತೀವ್ರತರವಾದ ಕಾರ್ಯಕ್ರಮವನ್ನು ಹಾಕಿಕೊಂಡು ಎರಡೂ ಮೂರು ವರ್ಷಗಳಲ್ಲಿ ಇವರುಗಳಿಗೆಲ್ಲಾ ಮೋಟಾರ್ ಸೈಕಲ್ ಮತ್ತು ಕಿಟ್‌ಗಳನ್ನು ಕೊಡತಕ್ಕ ವ್ಯವಸ್ಥೆ ಮಾಡಿದರೆ ಹೆಚ್ಚಿನ ರೀತಿಯಲ್ಲಿ ಕೆಲಸ ಸಮರ್ಪಕವಾಗಿ ಆಗುತ್ತದೆಂದು ಹೇಳಲಿಕ್ಕೆ ಇಷ್ಟಪಡುತ್ತೇನೆ. ಇನ್ನು ವೆಟರ್‌ನರಿ ಇನ್‌ಸ್ಪೆಕ್ಟರುಗಳು, ಅಂದರೆ ಪಶುವೈದ್ಯಪರೀಕ್ಷಕರಿಗೆ ಸೈಕಲ್‌ಗಳನ್ನು ಕೊಡಿಸತಕ್ಕ ವ್ಯವಸ್ಥೆ ಮಾಡಬೇಕು. ಇನ್ನು ಪ್ರತಿಯೊಂದು ಜಿಲ್ಲೆಯಲ್ಲಿಯೂ ಕ್ಲಿನಿಕ್ ಲ್ಯಾಬೊರೇಟರಿ ಅಂಡ್ ಡೈಯಾಗ್ನೆಸೆಸ್ ಸೆಂಟರ್ ಆಗಬೇಕು, ಎಕ್ಸ್‌ರೇ ತೆಗೆಯುತಕ್ಕ ವ್ಯವಸ್ಥೆಯಾಗಬೇಕು. ಇನ್ನು ಪ್ರತಿಯೊಂದು ತಾಲ್ಲೂಕು ಆಫೀಸಿನಲ್ಲಿಯೂ ಎಸ್.ಡಿ.ಸಿ. ಇಲ್ಲ, ಪ್ಯೂನ್ಸ್ ಇಲ್ಲ. ಆ ಕಡೆಯಲ್ಲಿ ಹೆಚ್ಚು ಲಕ್ಷ್ಯ ಕೊಡಬೇಕು. ಏಕೆಂದರೆ ಇತ್ತೀಚೆಗೆ ಬರವಣಿಗೆ ಬಹಳ ಇದೆ, ಅದಕ್ಕೋಸ್ಕರ ತಾವು ಎಸ್.ಡಿ.ಸಿ. ಮತ್ತು ಪ್ಯೂನ್‌ಗಳನ್ನು ಕೊಡತಕ್ಕ ವ್ಯವಸ್ಥೆ ಮಾಡಿದರೆ ಹೆಚ್ಚು ನಿಖರವಾದಂಥ ಸೇವೆ ಮಾಡಲಿಕ್ಕೆ ಅನುಕೂಲವಾಗುತ್ತದೆ. ಇನ್ನು ಒಂದು ಮಾತು ಅಂದರೆ ಸಿಬ್ಬಂದಿ ಕೆಲಸಕಾರ್ಯದಲ್ಲಿ ಬಹಳ ನಿಗಾ ಇಡಬೇಕಾಗುತ್ತದೆ, ಏಕೆಂದರೆ ನಾನು ಬಹಳ ಕಡೆ ಪರೀಕ್ಷೆ ಮಾಡಿದ್ದೇನೆ, ಔಷಧಿ ಎಷ್ಟು ತರುತ್ತಾರೆಂಬುದೇ ಗೊತ್ತಾಗುವುದಿಲ್ಲ, ಎಷ್ಟು ಕೊಡುತ್ತಾರೆಂಬುದು ಗೊತ್ತಾಗುವುದಿಲ್ಲ, ಯಾವುದೇ ಔಷಧಿ ಕೇಳಿದರೂ ಇಲ್ಲ ಎಂದು ಹೇಳುತ್ತಾರೆ. ಅದಕ್ಕಾಗಿ ನಾನು ಹಿಂದೆ ಒಂದು ಆದೇಶ ಕೊಟ್ಟಿದ್ದೆ. ಅದೇನೆಂದರೆ ಯಾವುದೇ ಔಷಧಿ ಇದ್ದರೂ ಅದನ್ನು ಬೋರ್ಡ್ ಮೇಲೆ ಬರೆದು ತಿಳಿಸಬೇಕೆಂದು ಹೇಳಿದ್ದೆ. ಜೊತೆಗೆ ಒಂದು ಮೂವ್‌ಮೆಂಟ್ ರಿಜಿಸ್ಟರ್ ಮೈನ್‌ಟೈನ್ ಮಾಡಬೇಕು. ಯಾರಾದರೂ ಸರ್ಜನ್ ಎಲ್ಲಿ ಹೋಗಿದ್ದಾರೆ ಎಂದು ಕೇಳಿದರೆ, ಅವರು ಇಂಥಾ ಕಡೆಗೆ ಹೋಗಿದ್ದಾರೆಂಬುದು ಗೊತ್ತಾಗಬೇಕು. ಇಲ್ಲದೇ ಹೋದರೆ ಯಾವುದೋ ಊರಿಗೆ ಚೆಕ್ ಮಾಡಲಿಕ್ಕೆ ಹೋಗಿದ್ದೆ ಎಂದು ಬೆಂಗಳೂರಿಗೆ ಬಂದು ೮ ದಿವಸ ಇದ್ದು ಹೋಗುವಂತಾದ್ದು ಆಗುತ್ತದೆ. ಅದಕ್ಕೋಸ್ಕರ ಈ ಮೂವ್‌ಮೆಂಟ್ ರಿಜಿಸ್ಟರ್ ಇಟ್ಟು, ಅಲ್ಲಿ ಸಾಕಷ್ಟು ಚೆಕ್ ಮಾಡುವ ವ್ಯವಸ್ಥೆ ಇದ್ದರೆ ಸಮರ್ಪಕವಾದ ರೀತಿಯಲ್ಲಿ ಕೆಲಸ ನಡೆಯುತ್ತದೆ. ಇನ್ನು ಆಸ್ಪತ್ರೆಗಳಲ್ಲಿ ವಿಜಿಟರ್ಸ್ ಬೋರ್ಡ್ ಎಂದು ಏನು ಮಾಡಿದ್ದೇವೆ ಅದೇ ಪ್ರಕಾರ ರೂರಲ್ ವೆಟರ್‌ನರಿ ಡಿಸ್‌ಪೆನ್‌ಸರಿಗಳು ಮತ್ತು ವೆಟರ್‌ನರಿ ಡಿಸ್‌ಪೆನ್‌ಸರಿಗಳಿಗೆ

ಒಂದು ಕಮಿಟಿ ಮಾಡಿ ಆ ಕಮಿಟಿಗೆ ಲೋಕಲ್‌ನಲ್ಲಿರತಕ್ಕ ಮೂರು ಜನರನ್ನು ಹಾಕಿದರೆ ಅಲ್ಲಿ ಔಷಧಿ ಯಾವ ರೀತಿಯಲ್ಲಿ ವಿತರಣೆಯಾಗುತ್ತದೆ, ಮತ್ತು ಸಿಬ್ಬಂದಿ ವರ್ತನೆ ಯಾವರೀತಿ ಇರುತ್ತದೆ, ಅವರು ಯಾವ ತರಹ ಮಾಡುತ್ತಾರೆ ಎನ್ನುವ ಬಗ್ಗೆ ಸಲಹೆ ಸೂಚನೆ ಕೊಡಲಿಕ್ಕೆ ಈ ಕಮಿಟಿ ಮಾಡಿದರೆ ಅನುಕೂಲವಾಗುತ್ತದೆಂದು ಹೇಳಬಯಸುತ್ತೇನೆ.

ಡೈರಿ ವಿಚಾರದಲ್ಲಿ ನಾನು ಅಧಿಕಾರಕ್ಕೆ ಬರುವುದಕ್ಕೆ ಮುಂಚೆ ಬಿಜಾಪುರ, ಬಳ್ಳಾರಿ, ಗುಲ್ಬರ್ಗ್, ಕಲ್ಬುರ್ಗಿ, ರಾಯಚೂರು, ಬೀದರ್ ಇಷ್ಟು ಜಿಲ್ಲೆಗಳನ್ನು ಬಿಟ್ಟಿದ್ದರು. ಇವೆಲ್ಲವನ್ನೂ ಸೇರಿಸಿ ಆಪರೇಷನ್ ಫ್ಲಡ್-೨ ನಲ್ಲಿ ಈ ಎಲ್ಲಾ ಜಿಲ್ಲೆಗಳನ್ನು ಸೇರಿಸಿ ಇಡೀ ರಾಜ್ಯಕ್ಕೆ ಕ್ಷೀರ ಅಭಿವೃದ್ಧಿ ದೊರೆಯುವಂತೆ ಮಾಡಲಾಗಿದೆ. ಈಗಾಗಲೇ ಅದಕ್ಕೆ ಸಂಬಂಧಪಟ್ಟಂತಹ ಎಕ್ಸ್‌ಟೆನ್‌ಷನ್ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ. ಮುಂದೆ ಒಂದೆರಡು ವರ್ಷಗಳಲ್ಲಿ ಎಲ್ಲಾ ಕಡೆ ಕ್ಷೀರಾಭಿವೃದ್ಧಿ ಕಾರ್ಯಕ್ರಮ ಬಹು ಪಾಲು ಪ್ರಾರಂಭವಾಗುತ್ತದೆ. ಇನ್ನು ಸಿಬ್ಬಂದಿ ವರ್ಗವನ್ನು ನೇಮಕ ಮಾಡುವಾಗ ಆಯಾ ಭಾಗದ ಜನರಿಗೆ ಪ್ರಾಶಸ್ತ್ಯ ಕೊಡಬೇಕು ಮತ್ತು ಅಧಿಕಾರಿಗಳಿಗೆ ಬಡ್ತಿ ಕೊಡುವಾಗ ಸೀನಿಯಾರಿಟಿ ಮೇರೆಗೆ ಕೊಡುವಂತಹ ವ್ಯವಸ್ಥೆ ಮಾಡಿದರೆ, ನೌಕರರಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುವಂತಹ ಮನಸ್ಸು ಬರುತ್ತದೆ. ಆ ರೀತಿ ಮಾಡದೇ ಇದ್ದರೆ ನೌಕರರು ಮನಃಪೂರ್ವಕವಾಗಿ ಕೆಲಸ ಮಾಡುವುದಕ್ಕೆ ಇಚ್ಛೆ ಪಡುವುದಿಲ್ಲ. ಹಾಲಿ ಕೆಲಸ ಮಾಡತಕ್ಕಂತಹ ನೌಕರರು ವಾರದಲ್ಲಿ ಒಂದೆರಡು ದಿವಸ ಕೆಲಸ ಮಾಡಿ ಬೇರೆ ಕಡೆ ಹೋಗುತ್ತಾರೆ. ಇವತ್ತು ಸುದೈವದಿಂದ ನಮ್ಮ ಕರ್ನಾಟಕ ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಚೆನ್ನಾಗಿ ಕೆಲಸ ಮಾಡುತ್ತಿದೆ. ಅದರ ಮೂಲಕ ಇಡೀ ರಾಜ್ಯದಲ್ಲಿ ಹೈನುಗಾರಿಕೆ ಯೋಜನೆಯನ್ನು ಜಾರಿಗೊಳಿಸುವುದಕ್ಕೆ ಸಾಧ್ಯವಿದೆ. ಇನ್ನು ಫಾರ್ಮ್ಸ್‌ಬಗ್ಗೆ ಹೇಳುವುದಾದರೆ, ಪಶುಸಂಗೋಪನಾ ಇಲಾಖೆಯಲ್ಲಿ ಜಾನುವಾರಗಳಿಗೆ ಸಂಬಂಧಪಟ್ಟಂತೆ ೧೨ ತಳಿ ಸಮೃದ್ಧಿ ಕೇಂದ್ರಗಳನ್ನು ಕುರಿಗಳ ಸಲುವಾಗಿ ೬ ಕುರಿ ತಳಿ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ. ೧೨ ಕೋಳಿ ಸಾಕಾಣಿಕೆ ಕೇಂದ್ರಗಳಿದ್ದು, ಖಾಸಗಿಯವರೂ ಕೂಡ ಕೋಳಿ ಸಾಕಾಣಿಕೆ ಕೇಂದ್ರಗಳನ್ನು ನಡೆಸುತ್ತಿದ್ದಾರೆ. ಇವು ಲಾಭದಾಯಕವಾದ ರೀತಿಯಲ್ಲಿ ಚೆನ್ನಾಗಿ ನಡೆಸುತ್ತಿದ್ದಾರೆ. ಸರ್ಕಾರದವರು ಇವುಗಳ ವಿಚಾರದಲ್ಲಿ ಹೆಚ್ಚಿನ ನಿಗಾವಹಿಸಿ ಪ್ರೋತ್ಸಾಹ ಕೊಡಬೇಕೆಂದು ಹೇಳುತ್ತೇನೆ. ಇನ್ನು ತೋಟಗಾರಿಕೆ ಇಲಾಖೆಯ ಬಗ್ಗೆ ಹೇಳುವುದಾದರೆ, ರಾಜ್ಯದಲ್ಲಿ ೩೫೩ ತೋಟಗಾರಿಕೆ ಫಾರಂಗಳಿದ್ದು, ಇವುಗಳಿಂದ ೫ ಲಕ್ಷ ರೂಪಾಯಿ ಮಾತ್ರ ಲಾಭ ಬರುತ್ತಿದೆ. ನಾನು ಮಂತ್ರಿಯಾಗಿದ್ದಾಗ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಾಕೀತು ಮಾಡಿ ತೋಟಗಾರಿಕೆ ಫಾರಂಗಳಲ್ಲಿ ಹೆಚ್ಚಿನ ಉತ್ಪತ್ತಿ ಬರತಕ್ಕಂತಹ ಬೆಳೆಗಳನ್ನು ಬೆಳೆಸುವುದಲ್ಲದೆ ಆಯಾ ಭಾಗದ ರೈತರಿಗೆ ಮಾರ್ಗದರ್ಶನ ಮಾಡುವಂತಹ ರೀತಿಯಲ್ಲಿ ಸಂಶೋಧನೆಗಳನ್ನು ನಡೆಸಿ ತೋಟಗಾರಿಕೆ ಬೆಳೆ ಬೆಳೆಯುತಕ್ಕಂತಹ ರೈತರಿಗೆ ತಿಳುವಳಿಕೆ ಕೊಡತಕ್ಕಂತಹ ವ್ಯವಸ್ಥೆ ಮಾಡಬೇಕೆಂದು ತಿಳಿಸಿದ್ದೆ. ಜೊತೆಗೆ ತೋಟಗಾರಿಕೆ ಇಲಾಖೆಯಲ್ಲಿ ಕೆಲಸ ಮಾಡತಕ್ಕಂತಹ ಅಧಿಕಾರಿಗಳಿಗೆ ಬಡ್ತಿ ಕೊಡುವ ವಿಚಾರದಲ್ಲೂ ಕೂಡ ಪ್ರಾಮಾಣಿಕವಾದ ರೀತಿಯಲ್ಲಿ ಅವರಿಗೆ ನ್ಯಾಯ ದೊರಕಿಸಿ ಕೊಡಬೇಕು. ಸಿಬ್ಬಂದಿ ವರ್ಗದಲ್ಲಿ ಪ್ರಾಮಾಣಿಕತೆ ಬರದೇ ಹೋದರೆ ಸರ್ಕಾರದ ಕೆಲಸಗಳು ಸರಿಯಾದ ರೀತಿಯಲ್ಲಿ ನಡೆಯುವುದಿಲ್ಲವೆಂದು ಹೇಳುತ್ತೇನೆ, ಪ್ರತಿ ತಾಲ್ಲೂಕು ಕೇಂದ್ರದಲ್ಲಿಯೂ ಕೂಡ ತೋಟಗಾರಿಕೆ ಬೆಳೆಗಳನ್ನು ಬೆಳೆಯುವುದರ ಬಗ್ಗೆ ತರಬೇತಿ ಕೊಡತಕ್ಕಂತಹ ವ್ಯವಸ್ಥೆ ಮಾಡಬೇಕಾಗುತ್ತದೆ. ಇನ್ನು ತೆಂಗು ಅಭಿವೃದ್ಧಿ ಬಗ್ಗೆ ೩೫ ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ಮತ್ತು ಅಣಬೆ ಬೇಸಾಯ ಅಭಿವೃದ್ಧಿ ಬಗ್ಗೆ ೧೪ ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ತಯಾರು ಮಾಡಿ ಕೇಂದ್ರಕ್ಕೆ ಕಳಿಸಲಾಗಿದೆ. ಇದರ ಬಗ್ಗೆ ತೀವ್ರ ಪರಿಶೀಲನೆ ಮಾಡಿ ಕಾರ್ಯಗತ ಮಾಡಿದರೆ ಇದರಿಂದ ಜನರಿಗೆ ಹೆಚ್ಚಿನ ಅನುಕೂಲವಾಗುತ್ತದೆ. ತೋಟಗಾರಿಕೆ ಇಲಾಖೆಯ ಮೂಲಕ ಹೆಚ್ಚಿನ ಪ್ರಮಾಣದಲ್ಲಿ ಹೂಗಿಡಗಳನ್ನು ಮತ್ತು ಕಾಯಿಪಲ್ಯೆಗಳನ್ನು ಬೆಳೆಸುವ ವ್ಯವಸ್ಥೆ ಮಾಡುವುದರಿಂದ ಹೆಚ್ಚಿನ ಅನುಕೂಲವಾಗುವುದಲ್ಲದೆ, ಆಕರ್ಷಕದಾಯಕವಾದ ಮತ್ತು ಲಾಭದಾಯಕವಾದ ಬೆಳೆಗಳನ್ನು ಬೆಳೆಯುವುದಕ್ಕೆ ಸಹಾಯಕವಾಗುತ್ತದೆ. ಹೆಚ್ಚಿನ ಪ್ರಮಾಣದಲ್ಲಿ ಬೆಳೆದಂತಹ ಹೂ ಗಿಡಗಳನ್ನು ಮತ್ತು ಕಾಯಿಪಲ್ಯೆಗಳನ್ನು ಬೇರೆ ದೇಶಗಳಿಗೆ ರವಾನಿಸುವಂತಹ ವ್ಯವಸ್ಥೆ ಮಾಡಬೇಕು. ಅದಕ್ಕಾಗಿ ಎಕ್ಸ್‌ಪೋರ್ಟ್ ಕಂಟ್ರೋಲ್ ಆಫೀಸ್ ಬೆಂಗಳೂರಿನಲ್ಲೇ ಇದ್ದರೆ ಅನುಕೂಲವಾಗುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ತೋಟಗಾರಿಕೆ ಬೆಳೆಗಳನ್ನು ಬೆಳೆಯುವುದಕ್ಕೆ ನೀರಿನ ಅನುಕೂಲ ಮಾಡಿಕೊಡಬೇಕಾದುದು ಸರ್ಕಾರದ ಕರ್ತವ್ಯ. ಈ ವಿಚಾರದಲ್ಲಿ ತೋಟಗಾರಿಕೆ ಇಲಾಖೆಯಲ್ಲಿ ಕೂಡ ಕಾರ್ಯಕ್ರಮಗಳನ್ನು ರೂಪಿಸ ಬೇಕಾಗುತ್ತದೆ. ಒಟ್ಟಿ

ನಲ್ಲಿ ಎರಡು ಇಲಾಖೆಗಳಿಗೂ ಹೆಚ್ಚಿನ ಧನಸಹಾಯವನ್ನು ಒದಗಿಸಿ ಅವುಗಳ ಫಲ ನೇರವಾಗಿ ಜನತೆಗೆ ಸಿಗುವಂತೆ ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ಹೇಳಿ. ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

೫–೩೦. ಪಿ.ಎಂ.

†ಶ್ರೀ ಪಟಮಕ್ಕಿ ರತ್ನಾಕರ್ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ. ರೈತ ನಮ್ಮ ದೇಶದ ಬೆನ್ನೆಲುಬು ಎನ್ನತಕ್ಕ ಮಾತನ್ನು ನಾವು ಬಹಳ ವರ್ಷಗಳಿಂದ ಕೇಳುತ್ತಾ ಬಂದಿದ್ದೇವೆ. ರೈತನ ಬೆನ್ನೆಲುಬಿನ ಪರಿಸ್ಥಿತಿ ಹೇಗಾಗಿದೆ ಎಂದರೆ ೬೦ ವರ್ಷದ ಮುದುಕನ ಹಾಗೆ ಆಗಿದೆ. ಅವನಿಗೆ ಶಕ್ತಿಯಿಲ್ಲ, ಬೆನ್ನು ಬಾಗಿ ಹೋಗಿದೆ, ಚೈತನ್ಯವಿಲ್ಲದೆ ಬದುಕುತ್ತಿದ್ದಾನೆ. ಅಂತಹ ಪರಿಸ್ಥಿತಿಯಲ್ಲಿ ದೇಶದ ಪ್ರಗತಿಗಾಗಿ ದುಡಿಯಬೇಕು, ಬಾಳಬೇಕು, ಕೃಷಿ ಮಾಡಬೇಕು, ಇವತ್ತು ಅವನಿಗೆ ಮನೆ ಭೂಮಿ ಇಲ್ಲದಂತಹ ಸ್ಥಿತಿ ಇದೆ. ನಮ್ಮ ದೇಶದಲ್ಲಿ ಕೃಷಿ ಮಾಡತಕ್ಕ ಜನಾಂಗದ ಬದುಕಿನಲ್ಲಿ ಇಂತಹ ಒಂದು ದೌರ್ಬಲ್ಯ ಅಡಗಿದೆ ಎಂದರೆ ಇದಕ್ಕೆ ಏನು ಕಾರಣ ? ಗಾಢವಾದ ಅಂಧಕಾರದ ಕತ್ತಲೆಯಲ್ಲಿ ಮುಳುಗಿಹೋಗಿದ್ದಾನೆ. ಅವನ ಬದುಕಿನಲ್ಲಿ ಪೂರಕವಾಗಿ ವೈಜ್ಞಾನಿಕ ತಿಳುವಳಿಕೆಯನ್ನು ಕೊಡುವಂತಹ ಕೆಲಸವನ್ನು ಅಧಿಕಾರಿವರ್ಗದವರು ಮಾಡದೇ ಇರುವುದರಿಂದ, ಜೊತೆಗೆ ರೈತನ ವ್ಯವಸಾಯಕ್ಕೆ ಯಾವ ಪಾಶ್ಚಿಮಾತ್ಯ ಆಧುನೀಕರಣ ವೈಜ್ಞಾನಿಕ ಮನೋಭಾವನೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಸರ್ಕಾರ ಪಂಚವಾರ್ಷಿಕ ಯೋಜನೆಗಳಲ್ಲಿ ಅಳವಡಿಸಿಕೊಂಡು ಅದರ ಬಗ್ಗೆ ಹೆಚ್ಚು ಆಸಕ್ತಿಯನ್ನು ತೋರದೆ ಇರುವುದರಿಂದ ರೈತರಿಗೆ ಕೃಷಿಯ ಮೇಲೆ ಜಿಗುಪ್ಸೆ ಬಂದಿದೆ. ಇವತ್ತು ರೈತನಿಗೆ ೧೮೦ ರೂಪಾಯಿ ಆದಾಯ ಬರುವುದಾದರೆ ೧೧೧ ರೂಪಾಯಿ ಖರ್ಚಾಗುತ್ತದೆ. ನಾನು ಕೆಲವು ವಿಚಾರಗಳನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಮೊದಲನೆಯದಾಗಿ ಮಲೆನಾಡಿನ ರೈತರಿಗೆ ಎಲ್ಲಾ ರೈತರಿಗೆ ಬಿತ್ತನೆ ಬೀಜಗಳನ್ನು ಕೊಡುತ್ತೀರಿ. ಬಿತ್ತನೆ ಬೀಜಗಳನ್ನು ಕೊಡಬೇಕಾದರೆ ಯಾವುದೋ ಒಂದು ಸಂಶೋಧನಾ ಕೇಂದ್ರದಿಂದ ಸಂಶೋಧನೆ ಮಾಡಿದಂತಹ ಒಂದೇ ಬೀಜವನ್ನು ನಮ್ಮ ರಾಜ್ಯದಲ್ಲಿ ಹಂಚಲಿಕ್ಕೆ ಪ್ರಯತ್ನ ಮಾಡುತ್ತಾರೆ. ಮಣ್ಣಿನಲಿರತಕ್ಕ ಗುಣ ಮತ್ತು ಬೀಳುವ ಮಳೆಯ ಪ್ರಮಾಣ ಮಣ್ಣಿನಲ್ಲಿರತಕ್ಕ ಸತ್ವ ಅವುಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಬೀಜಗಳನ್ನು ಹಂಚಬೇಕು. ಮಲೆನಾಡು ಮತ್ತು ಬಯಲುಸೀಮೆ ಎರಡೂ ಪ್ರದೇಶಗಳಿಗೆ ಅನ್ವಯವಾಗುವ ಬೀಜಗಳನ್ನು ಹಂಚಬೇಕು. ಮಲೆನಾಡು ಪ್ರದೇಶಗಳಿಗೆ ಮಳೆಗಾಲದಲ್ಲಿ ಹೊಂದಿಕೊಳ್ಳತಕ್ಕ ಬೀಜಗಳನ್ನು ಕೊಡಬೇಕು. ಯಾವ ಬೀಜಗಳನ್ನು ಬಿತ್ತಿದರೆ ಹೆಚ್ಚು ಬೆಳೆ ಬೆಳೆಯಬಹುದು, ಅದರ ಜೊತೆಗೆ ಯಾವ ಭೂಮಿ ಅನುಕೂಲವಾಗಿದೆ ಎಂಬುದನ್ನು ಸಹಾ ನೋಡಿಕೊಂಡು ಬೀಜಗಳನ್ನು ವಿತರಣೆ ಮಾಡಬೇಕು. ಮಲೆನಾಡು ಪ್ರದೇಶಗಳಲ್ಲಿ ಮಳೆ ಜಾಸ್ತಿ ಬೀಳುವುದರಿಂದ ಭೂಮಿಯ ಸಾರ ಸಂಪೂರ್ಣವಾಗಿ ಕೊಚ್ಚಿಕೊಂಡು ಹೋಗಿ ಒಂದು ತರಹ ಆಮ್ಲೀಯ ಮಣ್ಣಾಗಿ ಪರಿವರ್ತನೆಯಾಗುತ್ತದೆ. ಇವೆಲ್ಲಾ ಕಾರಣಗಳಿಂದ ಒಟ್ಟಾರೆ ಇಳುವರಿ ಒಂದು ಎಕರೆಗೆ ೧.೨೫ ಇದೆ. ಬಯಲುಸೀಮೆಗಳಲ್ಲಿ ಸುಮಾರು ೧೨.೬೩ ಇದೆ. ಹೀಗೆ ಬೇರೆ ಬೇರೆ ಪ್ರದೇಶಗಳ ಮಣ್ಣಿಗೆ ಅನುಗುಣವಾಗಿ ಪೂರಕವಾಗಿರತಕ್ಕ, ಹೊಂದಿಕೊಳ್ಳತಕ್ಕ ಬಿತ್ತನೆ ಬೀಜಗಳನ್ನು ಸಂಶೋಧನಾ ಕೇಂದ್ರಗಳಲ್ಲಿ ಕಂಡುಹಿಡಿಯುವುದಕ್ಕೆ ಹೆಚ್ಚು ಪ್ರೋತ್ಸಾಹ ಕೊಡಬೇಕು. ಜೊತೆಗೆ ಜಿಲ್ಲೆಯಲ್ಲಿ ಎರಡು ಕಡೆಗಳಲ್ಲಿ ಬಿತ್ತನೆಬೀಜ ಕೇಂದ್ರಗಳನ್ನು ಸ್ಥಾಪನೆ ಮಾಡಿದರೆ ಹಳ್ಳಿಯ ಜನರು ಅಲ್ಲಿಯೇ ಬಿತ್ತನೆ ಬೀಜಗಳನ್ನು ಕೊಂಡುಕೊಳ್ಳುವಂತಹ ಕೆಲಸವನ್ನು ಮಾಡಿದರೆ, ಸಮಯಕ್ಕೆ ಸರಿಯಾಗಿ ಬೀಜಗಳನ್ನು ಕಡಿಮೆ ಬೆಲೆಗೆ ಕೊಳ್ಳಲಿಕ್ಕೆ ಸಾಧ್ಯವಿದೆಯೆಂದು ನನ್ನ ಭಾವನೆ. ಕರ್ನಾಟಕ ರಾಜ್ಯದ ಬೀಜ ನಿಗಮದ ವತಿಯಿಂದ ಬೀಜ ಪೂರೈಕೆಯಾಗುತ್ತದೆ. ಅಲ್ಲಿಂದ ಸರಬರಾಜು ಆಗತಕ್ಕ ಬೀಜಗಳು ಬೆರಕೆ ಇರುತ್ತವೆ, ಜೊಳ್ಳು ಬೀಜಗಳು ಇರುತ್ತವೆ ಎನ್ನುವ ಆಪಾದನೆಗಳು ಇವೆ. ಮಲೆನಾಡು ಪ್ರದೇಶಗಳಲ್ಲಿ ನಮ್ಮ ಜಿಲ್ಲೆಯಲ್ಲಿ ಈ ರೀತಿಯ ಆಪಾದನೆಗಳು ಇವೆ. ಇದರ ಕಡೆಗೆ ಮಾನ್ಯಮಂತ್ರಿಗಳು ಹೆಚ್ಚು ಗಮನ ಕೊಡಬೇಕಾಗಿದೆ ಎಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಮತ್ತೊಂದು ವಿಚಾರ ಏನೆಂದರೆ, ತಾವೊಂದು ಉಪಕಾರವನ್ನು ಮಾಡಬೇಕಾಗುತ್ತದೆ. ನಮ್ಮ ಮಲೆನಾಡು ಪ್ರದೇಶಗಳಲ್ಲಿ ಸಾಮೂಹಿಕ ಬೇಲಿ ಹಾಕತಕ್ಕ ವ್ಯವಸ್ಥೆಯನ್ನು ನೀವು ಮಾಡಬೇಕು. ಬಯಲು ಸೀಮೆಗಳಲ್ಲೂ ಮಾಡಬೇಕಾಗುತ್ತದೆ. ಸಾಮೂಹಿಕ ಬೇಲಿ ವ್ಯವಸ್ಥೆಯನ್ನು ಮಾಡಿದರೆ ಆರ್ಥಿಕ ಬೆಳೆಗಳನ್ನು ಬೆಳೆಯಲಿಕ್ಕೆ ಅನುಕೂಲವಾಗುತ್ತದೆ. ಭೂ ಬ್ಯಾಂಕ್ ನವರು ಸಾಲವನ್ನು ಕೊಟ್ಟ

ದ್ವಾರೆ, ಶೇಕಡ ೨೫ ರಷ್ಟು ಸಬ್ಸಿಡಿಯನ್ನು ಕೊಡಿರಿ. ಅದರ ಜೊತೆಗೆ ಸಾಮೂಹಿಕ ಬೇಲಿ ವ್ಯವಸ್ಥೆಯನ್ನು ಮಾಡಿದರೆ ಆರ್ಥಿಕ ಬೆಳೆಯನ್ನು ಬೆಳೆಯುವುದರ ಜೊತೆಗೆ ಎರಡನೇ ಬೆಳೆಯನ್ನು ಬೆಳೆಯಲಿಕ್ಕೆ ಅವಕಾಶವಾಗುತ್ತದೆ. ಇದರಿಂದ ರಾಷ್ಟ್ರಮಟ್ಟದಲ್ಲಿ ಅಗತ್ಯವಿರತಕ್ಕ ದ್ವಿದಳಧಾನ್ಯದ ಕೊರತೆಯನ್ನು ನೀಗಬಹುದು. ನಮಗೆ ಬೇಕಾದ ಬೆಳೆಯನ್ನು ಬೆಳೆಯುವುದಕ್ಕೆ ಅನುಕೂಲವಾಗುತ್ತದೆ.

ಇನ್ನು ನೂರು ಬಾವಿಗಳ ಯೋಜನೆಯನ್ನು ಮಾಡಿದ್ದೀರಿ. ನೂರು ಬಾವಿಗಳ ಯೋಜನೆಯನ್ನು ಆದಷ್ಟು ಜಾಗ್ರತೆ ಗ್ರಾಮಾಂತರ ಪ್ರದೇಶಗಳಲ್ಲಿ ತೆಗೆದುಕೊಳ್ಳಬೇಕು. ಪಂಪ್‌ಸೆಟ್ಟುಗಳನ್ನು ಹಾಕಿಸಲಿಕ್ಕೆ ನೀರಾವರಿ ಇಲಾಖೆಯ ಅನುಮತಿಯನ್ನು ಪಡೆಯಬೇಕು. ವಿದ್ಯುತ್ ಕನೆಕ್ಷನ್ ತೆಗೆದುಕೊಳ್ಳಲಿಕ್ಕೆ ಬೆಂಗಳೂರಿಗೆ ಬರಬೇಕು. ನದಿ ಹಳ್ಳಗಳ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಬಹಳಷ್ಟು ತೊಂದರೆಯಾಗಿದೆ. ನೂರು ಬಾವಿಗಳ ಯೋಜನೆಯನ್ನು ಮಾಡಿದ್ದೀರಿ, ಒಂದು ತಾಲ್ಲೂಕಿಗೆ ಎರಡು ಕಡೆ ನೀರಾವರಿ ಇಲಾಖೆಯಿಂದ ಅನುಮತಿ ಪಡೆಯಲಿಕ್ಕೆ ಮತ್ತು ಬೇಗ ವಿದ್ಯುತ್ ಕನೆಕ್ಷನ್ ಕೊಡಲಿಕ್ಕೆ ನೀವು ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ವಿದ್ಯುಚ್ಛಕ್ತಿ ಮಂಡಲಿಗೆ ಕೆಲವು ವಿಚಾರಗಳನ್ನು ತಿಳಿಸಿ, ಆದಷ್ಟು ಜಾಗ್ರತೆ ಎಕ್ಸಿಕ್ಯುಟೀವ್ ಇಂಜನಿಯರ್ ಅವರಿಂದ ಮಂಜೂರಾತಿಯನ್ನು ದೊರಕಿಸಿ ಕೊಡುವುದರ ಬಗ್ಗೆ ನೀವು ಪ್ರಯತ್ನಮಾಡಬೇಕೆಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ರೈತರಿಗೆ ತಿಳುವಳಿಕೆ ಕೊಡುವುದಕ್ಕಾಗಿ ವ್ಯವಸಾಯ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ವಿಚಾರಗೋಷ್ಠಿಗಳನ್ನು ಗ್ರಾಮಮಟ್ಟಗಳಲ್ಲಿ ಮಾಡಬೇಕು. ಯಾವರೀತಿ ವ್ಯವಸಾಯವನ್ನು ಮಾಡಬೇಕು, ಯಾವ ರೀತಿ ಬಿತ್ತನೆ ಮಾಡಬೇಕು, ಯಾವ ರೀತಿ ಗೊಬ್ಬರ ಹಾಕಬೇಕು ಇದರ ಬಗ್ಗೆ ತಿಳುವಳಿಕೆ ಕೊಡತಕ್ಕ ಸಭೆಗಳನ್ನು ಗ್ರಾಮಮಟ್ಟದಲ್ಲಿ ಮಾಡುವುದರಿಂದ ರೈತರಿಗೆ ಉತ್ತೇಜನ ಬರುತ್ತದೆ ಅವರಿಗೆ ಪ್ರೋತ್ಸಾಹ ಸಿಗುತ್ತದೆ. ಇದರಿಂದ ಹೊಸ ಹೊಸ ದೇಶಿಯಾ ಮತ್ತು ವೈಜ್ಞಾನಿಕ ವಿಧಾನಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಆಸಕ್ತಿಯಿಂದ ಬೆಳೆಯನ್ನು ಬೆಳೆಯುತ್ತಾರೆಂದು ನನ್ನ ಭಾವನೆ. ಮಲೆನಾಡು ಮತ್ತು ಬಯಲುಸೀಮೆಗಳಲ್ಲಿ ನೀರಿನ ದುರುಪಯೋಗ ಬಹಳಷ್ಟು ನಡೆಯುತ್ತದೆ. ಇದರ ಕಡೆಗೆ ಹೆಚ್ಚು ಗಮನ ಕೊಡಬೇಕು. ನೀರನ್ನು ಎಷ್ಟು ಉಪಯೋಗಿಸಬೇಕೆನ್ನುವುದು ಗೊತ್ತಿಲ್ಲದೆ ನೀರಿನ ದುರುಪಯೋಗ ಮಾಡುತ್ತಾರೆ. ಅದಕ್ಕೋಸ್ಕರ ಫ್ಲೋ ಇರಿಗೇಷನ್ ಇರಬೇಕೇ ? ಪೈಪು ಇರಿಗೇಷನ್ ಇರಬೇಕೇ ? ಸ್ಪ್ರಿಂಕ್ಲರ್ ಇರಿಗೇಷನ್ ಇರಬೇಕೇ ? ಇದರ ಬಗ್ಗೆ ತಾವು ಯೋಚನೆ ಮಾಡಬೇಕು. ಇಸ್ರೇಲ್ ಮತ್ತು ಅಮೆರಿಕಾದಲ್ಲಿ ಡ್ರಿಪ್ ಇರಿಗೇಷನ್‌ನಿಂದ ನೀರನ್ನು ಉಳಿತಾಯ ಮಾಡತಕ್ಕ ರೀತಿಯಲ್ಲಿ ವ್ಯವಸಾಯ ಮಾಡುತ್ತಿದ್ದಾರೆ. ಆ ಬಗ್ಗೆಯೂ ನಮ್ಮ ರೈತರಿಗೆ ತಿಳುವಳಿಕೆಯನ್ನು ಕೊಡಬೇಕಾಗುತ್ತದೆ.

(ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಇನ್ನು ಆಹಾರ ತಾಂತ್ರಿಕ ಸಂಶೋಧನಾ ಸಂಸ್ಥೆ ಇದೆ, ಅಲ್ಲಿ ಯಾವ್ಯಾವ ಬೆಳೆಗಳಲ್ಲಿ ಯಾವ್ಯಾವ ಜೀವನಾಂಶಗಳಿವೆ ! ಎಷ್ಟು ಸತ್ವ ಇರುತ್ತದೆ ? ಇನ್ನಿತರ ಸಂಶೋಧನೆಗಳನ್ನು ಮಾಡತಕ್ಕ ತಂಡವಿದೆ. ಆ ಸಂಸ್ಥೆಗೆ ಹೆಚ್ಚು ಹಣವನ್ನು ಒದಗಿಸಿ, ಹೆಚ್ಚು ಕಾರ್ಯ ಪ್ರವೃತ್ತರಾಗುವಂತೆ ಮಾಡಿದರೆ ರೈತರಿಗೆ ಅನುಕೂಲವಾಗುತ್ತದೆ. ಅವರು ಸಂಶೋಧನೆ ಮಾಡಿದಂತಹ ವಿಚಾರಗಳು ರೈತರಿಗೆ ಕೂಡಲೇ ಮುಟ್ಟುವಂತಾಗಬೇಕು. ಇಂತಹ ವ್ಯವಸ್ಥೆಯನ್ನು ಮಾಡಬೇಕು. ಇಂತಹ ಸಂಸ್ಥೆಗಳು ರೈತರನ್ನು ದೃಷ್ಟಿಯಲ್ಲಿಟ್ಟುಕೊಂಡು ಸೂಕ್ಷ್ಮವಾಗಿ ಸಂಶೋಧನೆಗಳನ್ನು ಮಾಡಿ ಯಾವ ಬೆಳೆಯನ್ನು ಬೆಳೆಯಬೇಕೆಂಬುದರ ಬಗ್ಗೆ ಗ್ರಾಮಮಟ್ಟದಲ್ಲಿ ರೈತರಿಗೆ ಮುಟ್ಟಿಸುವಲ್ಲಿ ಸಫಲವಾದರೆ ಕೃಷಿ ಇಲಾಖೆ ಹೆಸರು ಪಡೆಯಬಹುದು. ನಮಗೆ ಮೂಲಭೂತವಾಗಿ ಬೇಕಾಗಿರತಕ್ಕದ್ದು ಹಸಿರೆಲೆ ಗೊಬ್ಬರ. ನಾವೇನು ಗದ್ದೆ ತೋಟಗಳನ್ನು ಮಾಡಿಕೊಂಡಿದ್ದೇವೆ ಅವುಗಳಿಗೆ ಹಸಿರೆಲೆ ಗೊಬ್ಬರಗಳನ್ನು ಹಾಕಬೇಕು. ಕೋಟ್ಯಾಂತರ ರೂಪಾಯಿ ಬೆಲೆ ಬಾಳತಕ್ಕ ಕಾಡನ್ನು ಬಿರ್ಲಾದವರು ಅಕ್ರಮಣ ಮಾಡಿಕೊಂಡಿರುವುದರಿಂದ, ಇವತ್ತು ಹಸಿರೆಲೆ ಗೊಬ್ಬರವನ್ನು ಹಾಕತಕ್ಕದ್ದು ದುಬಾರಿಯಾಗಿದೆ, ಹಸಿರೆಲೆ ಗೊಬ್ಬರವನ್ನು ಹಾಕದೆ ಇರುವಂತಹ ಸ್ಥಿತಿಗೆ ಬಂದಿದೆ. ಈ ರೀತಿಯಾದರೆ ರೈತರು ಬೆಳೆಯನ್ನು ಬೆಳೆಯುವುದು ಹೇಗೆ ?

ಸುಮನಾಗಿ ರೈತರಿಗೆ ಬೇಕಾಗಿರತಕ್ಕ ಹಸಿರು ಎಲೆ ಗೊಬ್ಬರವನ್ನು ಕಡಾಯವಾಗಿ ಕೊಡಬೇಕು ಅದಕ್ಕೆ ಆಯಾ ಜಮೀನಿನಲ್ಲಿ ಒಂದು ಕಡೆ ಇಂತಿಷ್ಟು ಎಕರೆ ಪ್ರದೇಶದಲ್ಲಿ ಹಸಿರು ಎಲೆ ಗೊಬ್ಬರ ಬರತಕ್ಕಂತಹ ಮರಗಳನ್ನು ಬೆಳೆಸಬೇಕೆಂದು ಬೇಕಾದರೆ ಕಡ್ಡಾಯ ಮಾಡಿ. ಅದನ್ನು ಬಿಟ್ಟು ನೀಲಗಿರಿ

ಮರಗಳನ್ನು ಬೆಳೆಯುವುದರಿಂದ ರೈತನಿಗೆ ಯಾವ ಪ್ರಯೋಜನವೂ ಇಲ್ಲ. ಆದರಿಂದ ರೈತರಿಗೆ ಬೇಕಾಗಿರತಕ್ಕ ಹಸಿರು ಎಲೆ ಗೊಬ್ಬರವನ್ನು ಪಡೆಯುವುದಕ್ಕೆ ಸಾಧ್ಯವಿಲ್ಲದೇ ಇರತಕ್ಕಂತಹ ಪರಿಸ್ಥಿತಿ ಮುಂದೆ ನಿರ್ಮಾಣವಾಗಬಹುದು ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ನಮ್ಮ ತೀರ್ಥಹಳ್ಳಿಯಲ್ಲಿ ಅಥವಾ ಮಲೆನಾಡಿನ ಪ್ರದೇಶದಲ್ಲಿ ಇರತಕ್ಕಂತಹ ಸಮಸ್ಯೆಯ ಬಗ್ಗೆ ಹೇಳುವುದಾದರೆ, ನಮ್ಮ ಭಾಗದಲ್ಲಿ ಅತಿ-ವೃಷ್ಟಿಯಿಂದ ಮಣ್ಣಿನ ಸಾರ ಕೊಚ್ಚಿ ಹೋಗುತ್ತದೆ. ಇದಕ್ಕೆ ಹಿಂದೆ ಏನು ಮಾಡುತ್ತಿದ್ದರು ಅಂದರೆ, ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆಯಲ್ಲಿ ಸುಣ್ಣ ಮತ್ತು ಶಿಲಾರಂಜಕಗಳನ್ನು ಕೊಡುತ್ತಿದ್ದರು. ಆದರೆ ಈಗ ಅದನ್ನು ನಿಲ್ಲಿಸಿದ್ದಾರೆ ಕಾರಣ ತಿಳಿಯದು. ಇದರ ಬೆಲೆ ದುಬಾರಿಯಾಗಿರುವುದರಿಂದ ರೈತರು ಅದನ್ನು ಕೊಂಡು ಕೊಂಡು ತನ್ನ ಬೇಸಾಯಕ್ಕೆ ಅದನ್ನು ಉಪಯೋಗ ಮಾಡುವುದು ಕಷ್ಟವಾಗಿದೆ. ಇದರ ಬಗ್ಗೆ ಮಾನ್ಯ ಸಚಿವರು ತಮ್ಮ ಗಮನ ಹರಿಸಬೇಕು. ನಮ್ಮಲ್ಲಿ ಅತಿ-ವೃಷ್ಟಿಯಿಂದ ಮಣ್ಣಿನ ಸಾರ ಕೊಚ್ಚಿ ಹೋಗುವುದರಿಂದ ಸುಣ್ಣ ಮತ್ತು ಶಿಲಾ ರಂಜಕಗಳನ್ನು ಸಬ್ಸಿಡಿ ದರದಲ್ಲಿ ರೈತರಿಗೆ ಕೊಡಿಸುವಂತಹ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು.

ಇನ್ನು ನಮ್ಮ ಪಶುಸಂಗೋಪನಾ ಇಲಾಖೆಯ ಬಗ್ಗೆ ಹೇಳುವುದಾದರೆ. ಈ ಬಗ್ಗೆ ಸಚಿವರಾಗಿ ಸೇವೆ ಸಲ್ಲಿಸಿರತಕ್ಕಂತಹ ಹಿರಿಯ ಸದಸ್ಯರಾದ ಶ್ರೀಮಾನ್ ಮುದ್ದಾಳ್‌ರವರು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅಲ್ಲದೆ ಕೆಲವು ಉತ್ತಮವಾದ ಸಲಹೆಗಳನ್ನೂ ಕೂಡಾ ಕೊಟ್ಟಿದ್ದಾರೆ. ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದಾದರೆ, ನಿಮ್ಮ ಖಾತೆ ರೈತರ ಅಭಿವೃದ್ಧಿ ಬಗ್ಗೆ ಅಷ್ಟೇ ಪ್ರಾಮುಖ್ಯವಾದ ಖಾತೆಯಾಗಿದೆ. ನಿಮ್ಮ ಇಲಾಖೆಗೆ ಗ್ರಾಮೀಣ ಪ್ರದೇಶದ ರೈತರಿಗೆ ಬಹಳಷ್ಟು ಸಹಕಾರಿಯಾಗಿದೆ. ಆದ್ದರಿಂದ ರೈತನಿಗೆ ಬೇಕಾಗುವ ಅನುಕೂಲವನ್ನು ನಾವು ಒದಗಿಸಿ ಕೊಡಬೇಕಾದುದು ತಮ್ಮ ಅತ್ಯಂತ ಜವಾಬ್ದಾರಿ. ಈ ಬಗ್ಗೆ ತಾವು ಗಮನ ಹರಿಸಬೇಕು. ತಾಲ್ಲೂಕು ಮಟ್ಟದಲ್ಲಿ ಆರ್ಟಿಫಿಸಿಯಲ್ ಇನ್‌ಸೆಮಿನೇಷನ್ ಕೊಡತಕ್ಕಂತಹ ವ್ಯವಸ್ಥೆ ಇದ್ದು, ಇದನ್ನು ಹೋಬಳಿ ಮಟ್ಟದಲ್ಲಿರುವ ಆಸ್ಪತ್ರೆಗಳಲ್ಲಿಯೂ ಇರುವಂತಹ ವ್ಯವಸ್ಥೆ ಮಾಡಿ. ಗ್ರಾಮೀಣ ಮಟ್ಟದಲ್ಲೂ ಮಿಶ್ರ ತಳಿ ಹಸುಗಳನ್ನು ಪಡೆಯುವುದಕ್ಕೆ ಅನುವು ಮಾಡಿಕೊಡಬೇಕು. ಜೊತೆಗೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂತಹ ಪಶು ವೈದ್ಯಕೀಯ ಘಟಕಗಳು ಏನಿವೆ, ಅವುಗಳು ನಮ್ಮ ಪ್ರಾಥಮಿಕ ಶಾಲೆಗಳು ಹೇಗೆ ಇವೆಯೋ ಅದೇ ರೀತಿಯಲ್ಲಿವೆ. ಇವತ್ತು ಗ್ರಾಮೀಣ ಮಟ್ಟದಲ್ಲಿರುವ ಪ್ರಾಥಮಿಕ ಶಾಲಾ ಕಟ್ಟಡಗಳು ನಾ ದುರಸ್ತಿ ಸ್ಥಿತಿಯಲ್ಲಿವೆ. ಅದೇ ರೀತಿ ನಮ್ಮ ಪಶು ವೈದ್ಯ ಶಾಲೆಯ ಕಟ್ಟಡಗಳೂ ಕೂಡ ನಾ ದುರಸ್ತಿ ಹಂತದಲ್ಲಿವೆ. ನಾನು ನಮ್ಮ ಕ್ಷೇತ್ರದಲ್ಲಿ ಒಂದು ಆಸ್ಪತ್ರೆಗೆ ಹೋಗಿದ್ದೆ, ಅಲ್ಲಿದ್ದಂತಹ ಅಧಿಕಾರಿಗಳು ಹೇಳಿದರು, ತಾವು ದಯಮಾಡಿ ಒಳಗಡೆ ಬರಬೇಡಿ. ಇದು ಯಾವಾಗ ಬೀಳುತ್ತದೋ ಗೊತ್ತಿಲ್ಲ ಅಂತ ಹೇಳಿದರು. ಮತ್ತೆ ಇರತಕ್ಕಂತಹ ಎಷ್ಟೋ ಆಸ್ಪತ್ರೆಗಳು ಖಾಸಗಿ ಕಟ್ಟಡದಲ್ಲಿ ನಡೆಯುತ್ತಿವೆ. ಇರುವಂತಹ ಕಟ್ಟಡಗಳೆಲ್ಲವೂ ನಾ-ದುರಸ್ತಿ ಸ್ಥಿತಿಯಲ್ಲಿವೆ. ಆದ್ದರಿಂದ ಗ್ರಾಮೀಣ ಮಟ್ಟದ ಟೈಪ್ ಡಿಸೈನಿನ ರೀತಿಯಲ್ಲಿ ಹೆಚ್ಚಿನ ರೀತಿಯಲ್ಲಿ ಕಟ್ಟಡಗಳನ್ನು ಕಟ್ಟಿಸಬೇಕು. ಜೊತೆಗೆ ಇರತಕ್ಕಂತಹ ೭೦ ರಷ್ಟು ಆಸ್ಪತ್ರೆಗಳಲ್ಲಿ ವಿದ್ಯುಚ್ಛಕ್ತಿಯ ಸೌಕರ್ಯವೇ ಇಲ್ಲ. ೩೦ ಪರ್ಸೆಂಟ್ ಆಸ್ಪತ್ರೆಗಳಿಗೆ ವಿದ್ಯುಚ್ಛಕ್ತಿ ಸೌಲಭ್ಯಗಳನ್ನು ಕೊಟ್ಟಿದ್ದಾರೆ. ಎಲ್ಲ ಆಸ್ಪತ್ರೆಗಳಿಗೂ ವಿದ್ಯುಚ್ಛಕ್ತಿ ಸೌಲಭ್ಯಗಳನ್ನು ಒದಗಿಸಿಕೊಡುವಂತಹ ವ್ಯವಸ್ಥೆ ಯಾಗಬೇಕು. ಇರತಕ್ಕಂತಹ ಆಸ್ಪತ್ರೆಗಳಲ್ಲಿ ೮೫ ಪರ್ಸೆಂಟ್ ಆಸ್ಪತ್ರೆಗಳಲ್ಲಿ ಕ್ರ್ಯಾಸ್ಟಿಂಗ್ ಫುಟ್ ಹಾಗೂ ಡ್ರೆಸ್ಸಿಂಗ್ ಶೆಡ್‌ಗಳೇ ಇಲ್ಲ. ಆಸ್ಪತ್ರೆಗಳನ್ನು ಕೊಡುತ್ತೀರಿ. ಇದರ ಅರ್ಥವೇನು? ಸಾಮಾನ್ಯವಾಗಿ ಇರತಕ್ಕಂತಹ ಎಲ್ಲ ಸೌಕರ್ಯಗಳೂ ಅಲ್ಲಿ ಇರಬೇಕು. ಆ ರೀತಿಯ ಸೌಕರ್ಯಗಳು ಇಲ್ಲದ ಆಸ್ಪತ್ರೆಗಳನ್ನು ಕೊಟ್ಟರೆ ಅದಕ್ಕೆ ಅರ್ಥ ಏನಾದರೂ ಬರುತ್ತದೆಯೇ? ಆದ್ದರಿಂದ ಆ ಬಗ್ಗೆ ಮಾನ್ಯ ಮಂತ್ರಿಗಳು ಹೆಚ್ಚು ಗಮನವನ್ನು ಹರಿಸಬೇಕು. ಜೊತೆಗೆ ಸರಬರಾಜು ಮಾಡತಕ್ಕ ಔಷಧಿಗಳು ಸಮರ್ಪಕವಾಗಿಲ್ಲ. ಯಾವ ಕಾಯಿಲೆಗೆ ಯಾವ ಔಷಧಿ ಇರಬೇಕೆಂದು ಕೊಡುವುದಿಲ್ಲ. ಕಾಯಿಲೆ ಬಂದಿರುವುದು ಒಂದಾದರೆ ಆಸ್ಪತ್ರೆಗಳಲ್ಲಿ ಇರುವಂತಹ ಔಷಧಿಯೇ ಮತ್ತೊಂದು ಆಗಿರುತ್ತದೆ. ಯಾವ ಸಮಯದಲ್ಲಿ ಎಂಥ ಕಾಯಿಲೆ ಬರುತ್ತದೆ. ಅದಕ್ಕೆ ತಕ್ಕ ಔಷಧಿ ಎಲ್ಲ ಆಸ್ಪತ್ರೆಗಳಲ್ಲೂ ಇರಬೇಕು. ತಾಲ್ಲೂಕುಮಟ್ಟದಲ್ಲಿರತಕ್ಕಂತಹ ಅಸಿಸ್ಟೆಂಟ್ ಡೈರೆಕ್ಟರ್‌ರವರು ಈ ಔಷಧಿಯನ್ನು ಡಿಸ್ಟ್ರಿಬ್ಯೂಷನ್ ಮಾಡತಕ್ಕಂತಹವರು. ಅವರು ತಮಗೆ ಬೇಕಾದರೆ ಹೆಚ್ಚು ಪ್ರಮಾಣದ ಔಷಧಿಯನ್ನು ಕೊಡುತ್ತಾರೆ, ಇಲ್ಲದಿದ್ದರೆ ಔಷಧಿಯನ್ನೇ ಕೊಡುವುದಿಲ್ಲ. ಹೆಚ್ಚಿನ ಪ್ರಮಾಣದಲ್ಲಿ ಆಸ್ಪತ್ರೆಗಳಲ್ಲಿ ಕಾಂಪೌಂಡರ್‌ಗಳೇ ಇರುವುದಿಲ್ಲ. ೯೫ ಪರ್ಸೆಂಟ್

ಆಸ್ಪತ್ರೆಗಳಲ್ಲಿ ಕಾಂಪೌಂಡರ್‌ಗಳೇ ಇರುವುದಿಲ್ಲ. ಇದರ ಬಗ್ಗೆ ಮಾನ್ಯ ಸಚಿವರು ಗಮನಹರಿಸಬೇಕು. ಇನ್ನೊಂದು ಗುರುತರವಾದ ಜವಾಬ್ದಾರಿ ತಮ್ಮ ಮೇಲೆ ಇದೆ. ಅದು ಏನೆಂದರೆ, ಐ.ಆರ್.ಡಿ.ಪಿ. ಯೋಜನೆಯಡಿಯಲ್ಲಿ ಕೊಡತಕ್ಕಂತಹ ಎಮ್ಮೆ, ಹಸು, ಕೋಳಿ, ಕುರಿ ಯಾರ್ಯಾರಿಗೆ ಕೊಟ್ಟಿದ್ದೀರಿ, ಅವುಗಳು ಅವರ ಹತ್ತಿರ ಇವೆಯೇ? ಅವುಗಳಿಂದ ಉಪಯೋಗವನ್ನು ಪಡೆಯುತ್ತಿದ್ದಾರೆಯೇ ಎಂಬುದನ್ನು ನೋಡುತ್ತಿದ್ದೀರಾ? ಅದನ್ನು ಉಸ್ತುವಾರಿ ಮಾಡುವ ಕಡೆ ಹೆಚ್ಚು ಗಮನ ಹರಿಸಬೇಕು. ಮತ್ತೆ ಐ.ಆರ್.ಡಿ.ಪಿ. ಯೋಜನೆಯಲ್ಲಿ ಎಲ್ಲರಿಗೂ ಎಮ್ಮೆಗಳನ್ನು ಕೊಡುತ್ತಿದ್ದಾರೆ. ಮಿಶ್ರ ತಳಿಯ ಹಸುಗಳನ್ನು ಕೊಡುವುದಕ್ಕೂ ಕೂಡ ಪ್ರಯತ್ನ ಮಾಡಬೇಕು. ಹೆಚ್ಚು ಹಾಲನ್ನು ಕೊಡತಕ್ಕಂತಹ ಹಸುಗಳನ್ನು ಕೊಟ್ಟರೆ, ಅವುಗಳನ್ನು ಆತ ಚೆನ್ನಾಗಿ ಸಾಕಿ ಹಾಲನ್ನು ಮಾರಾಟ ಮಾಡಿ, ಅದರಿಂದ ಬಂದಂತಹ ಲಾಭದಲ್ಲಿ ತಾವೂ ಬದುಕುವುದಕ್ಕೆ ಸಹಾಯಕವಾಗುತ್ತದೆ. ಆದ್ದರಿಂದ ಐ.ಆರ್.ಡಿ.ಪಿ. ಯೋಜನೆಯಲ್ಲಿ ಹೆಚ್ಚು ಮಿಶ್ರ ತಳಿಯ ಹಸುಗಳನ್ನು ಕೊಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಅದೇ ರೀತಿ ಮಿಶ್ರ ತಳಿಯ ಹೋರಿಗಳನ್ನು ಕಸಿ ಮಾಡತಕ್ಕ ಕೆಲಸವನ್ನೂ ಕೂಡ ಮಾನ್ಯ ಮಂತ್ರಿಗಳು ತೀವ್ರವಾಗಿ ಮಾಡಬೇಕು. ಇದನ್ನು ಮಾಡದಿದ್ದರೆ ಏನೂ ಪ್ರಯೋಜನ ಇಲ್ಲದಂತಾಗುತ್ತದೆ. ಜೊತೆಗೆ ಗ್ರಾಮೀಣ ಪ್ರದೇಶದಲ್ಲಿ ಮಿಶ್ರ ತಳಿ ಹೋರಿಗಳನ್ನು ಬೆಳೆಸುವುದಕ್ಕೆ ಪಶ್ಚಿಮ ಘಟ್ಟದ ಯೋಜನೆಯನ್ವಯ ಅವರಿಗೆ ಪ್ರೋತ್ಸಾಹವನ್ನು ಕೊಡುತ್ತಿದ್ದರು. ಅದನ್ನೂ ಕೂಡ ಈಗ ನಿಲ್ಲಿಸಿದ್ದಾರೆ. ಕಾರಣ ತಿಳಿಯದು. ಮಿಶ್ರ ತಳಿ ಹೋರಿಗಳನ್ನು ಸಾಕುವಂತಹ ರೈತರಿಗೆ ೨೫೦ ರೂ. ಗಳನ್ನು ಪಶ್ಚಿಮ ಘಟ್ಟದ ಅಭಿವೃದ್ಧಿ ಯೋಜನೆಯ ಅಡಿಯಲ್ಲಿ ಸಹಾಯಧನವನ್ನಾಗಿ ಮೊದಲು ಕೊಡುತ್ತಿದ್ದರು. ಯಾವ ಕಾರಣವೋ ತಿಳಿಯದು ಈಗ ಅದನ್ನು ನಿಲ್ಲಿಸಿದ್ದಾರೆ. ಯಾವ ಕಾರಣಕ್ಕಾಗಿ ಅದನ್ನು ನಿಲ್ಲಿಸಿದ್ದಾರೆ ಎಂಬುದರ ಬಗ್ಗೆ ವಿವರಗಳನ್ನು ಮಾನ್ಯ ಮಂತ್ರಿಗಳಿಂದ ಪಡೆಯ ಬಯಸುತ್ತೇನೆ. ಜೊತೆಗೆ ತಾಂತ್ರಿಕ ಸಿಬ್ಬಂದಿ ಇರತಕ್ಕ ಒಂದು ಸಂಚಾರಿ ಘಟಕವನ್ನು ಕೊನೆಯ ಪಕ್ಷ ೨ ತಾಲ್ಲೂಕುಗಳಿಗೆ ಒಂದನ್ನಾದರೂ ತಾವು ಒದಗಿಸಬೇಕು. ಆ ಬಗ್ಗೆ ಮಾನ್ಯ ಮಂತ್ರಿಗಳು ಹೆಚ್ಚು ಗಮನ ಹರಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ.

ನಂತರ ಹಸಿರು ಮೇವನ್ನು ಬೆಳೆಯುವುದಕ್ಕೆ ಒಂದು ಎಕರೆಗೆ ೨ ಸಾವಿರ ರೂ.ಗಳನ್ನು ಸಹಾಯಧನವಾಗಿ ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆಯಡಿಯಲ್ಲಿ ಮೊದಲು ಕೊಡುತ್ತಿದ್ದರು. ಈಗ ಅದೂ ಕೂಡ ನಿಲ್ಲಿಸಿದ್ದಾರೆ. ಇದರ ಬಗ್ಗೆ ಬಹಳ ಗಂಭೀರವಾಗಿ ಯೋಚನೆ ಮಾಡಬೇಕು.

ಇನ್ನು ತೋಟಗಾರಿಕೆ ಇಲಾಖೆಯ ಬಗ್ಗೆ ಒಂದೆರಡು ವಿಷಯಗಳನ್ನು ಪ್ರಸ್ತಾಪ ಮಾಡಿ ನನ್ನ ಮಾತುಗಳನ್ನು ಮುಗಿಸುವವನಿದ್ದೇನೆ. ತೋಟಗಾರಿಕೆ ಇಲಾಖೆ ಸಹ ಅತ್ಯಂತ ಪ್ರಮುಖವಾದ ಇಲಾಖೆ. ಹೇಗೆ ರೈತ ಭತ್ತ, ಕಬ್ಬು, ಜೋಳ, ರಾಗಿ ಬೆಳೆಯುತ್ತಾನೆ ಅದರ ಜೊತೆಗೆ ಪೂರಕವಾಗಿ ಹೊಂದಿಕೊಂಡಂತೆ ಆರ್ಥಿಕ ಬೆಳೆಗಳನ್ನು ಆತ ಬೆಳೆಯುವುದಕ್ಕೆ ಹೆಚ್ಚಿನ ಆಸಕ್ತಿ ಬರುವಂತೆ ಮಾಡತಕ್ಕ ಜವಾಬ್ದಾರಿ ನಿಮ್ಮ ಮೇಲಿದೆ. ನೀವು ಆ ಬೇಸಾಯದ ಜೊತೆಗೆ ಮಿಶ್ರ ಬೇಸಾಯವನ್ನು ಮಾಡಲಿಕ್ಕೆ ಆತನಿಗೆ ಸಾಮಾನ್ಯ ತಿಳಿವಳಿಕೆ ಕೊಡಬೇಕಾಗುತ್ತದೆ. ಇಲ್ಲದೆ ಹೋದರೆ ಅವನು ಕಬ್ಬು, ಭತ್ತ, ರಾಗಿ ಬೆಳೆದರೆ ಆತನಿಗೆ ಲಾಭ ಇರುವುದಿಲ್ಲ. ಬೆಳೆಗಳ ಬಗ್ಗೆ ಆತನಿಗೆ ಜಿಗುಪ್ಸೆ ಬರುತ್ತದೆ. ಆದ್ದರಿಂದ ಮಿಶ್ರ ಬೇಸಾಯ ಪದ್ಧತಿ ಬಗ್ಗೆ ಸಾಮಾನ್ಯ ಜ್ಞಾನ, ತಿಳಿವಳಿಕೆ ಕೊಟ್ಟರೆ ರೈತ ಮುಂದುವರಿಯುತ್ತಾನೆ. ತೆಂಗು, ಕರಿ ಮೆಣಸು, ಬಾಳೆ, ಮಾವು, ಟೊಮ್ಯಾಟೋ ಗೋಡಂಬಿ ಹೀಗೆ ವಿವಿಧ ಹಣ್ಣುಹಂಪಲು, ತರಕಾರಿ ಹಾಗೂ ಪುಷ್ಪಗಳನ್ನು ಆಧುನಿಕ ರೀತಿಯಲ್ಲಿ ಬೆಳೆಯುವುದಕ್ಕೆ ತಿಳಿವಳಿಕೆ ನೀಡಬೇಕು. ರೈತನ ಮಣ್ಣಿನ ಗುಣ ಹೇಗಿದೆ, ನೀರಿನ ಸೌಲಭ್ಯ ಹೇಗಿದೆ, ಆರ್ಥಿಕ ಸ್ಥಿತಿ ಹೇಗಿದೆ ಎಂಬುದನ್ನು ಅಧ್ಯಯನ ಮಾಡಿ ಅವನಿಗೆ ತಿಳಿವಳಿಕೆ ಕೊಟ್ಟು ತೋಟದ ಬೆಳೆಗಳನ್ನು ಬೆಳೆಸುವ ಬಗ್ಗೆ ಮಾರ್ಗದರ್ಶನ ನೀಡಿ ಆತನ ಆರ್ಥಿಕ ಶಕ್ತಿ ಹೆಚ್ಚುವಂತೆ ಮಾಡಿದರೆ ಆತನ ಬದುಕಿಗೆ ಹೊಸ ರೂಪವನ್ನು ಕೊಟ್ಟಂತಾಗುತ್ತದೆ. ಇದಕ್ಕೋಸ್ಕರ ತಾಲ್ಲೂಕು ಮಟ್ಟದಲ್ಲಿ ಒಂದು ಮೊಬೈಲ್ ಯೂನಿಟ್ ಅನ್ನು ಏತಕ್ಕೆ ಮಾಡಬಾರದು? ಯಾವ ಮಣ್ಣಿನಲ್ಲಿ ಯಾವ ಬೆಳೆ ಬೆಳೆಯಬಹುದು ಆತನ ಆರ್ಥಿಕ ಸ್ಥಿತಿ ಹೇಗಿದೆ ಎಂಬ ಸಾಮಾನ್ಯ ಜ್ಞಾನ ಹೊಂದಿರುವ ಅಧಿಕಾರಿಯ ನೇತೃತ್ವದಲ್ಲಿ ಮೊಬೈಲ್ ಯೂನಿಟ್ ಮಾಡಿ, ಆ ಅಧಿಕಾರಿ ತಿಂಗಳಿಗೆ ನೂರು ಮಂದಿ ರೈತರನ್ನು ಭೇಟಿ ಮಾಡಿ ಸಾಮಾನ್ಯ ತಿಳಿವಳಿಕೆ ಅಥವಾ ಪ್ರಬುದ್ಧ ತಿಳಿವಳಿಕೆ ಕೊಡುವ ವ್ಯವಸ್ಥೆಯನ್ನು ಮಾಡಬೇಕು. ಜೊತೆಗೆ

ತೋಟಗಾರಿಕೆ ಅಧಿಕಾರಿಗಳು ರೈತರಿಗೆ ಬೀಜ, ಸಸಿ, ಬೇಸಾಯ ಕ್ರಮಗಳ ಬಗ್ಗೆ ತಿಳಿವಳಿಕೆ ನೀಡತಕ್ಕ ಕೆಲಸವನ್ನು ಮಾಡಬೇಕಾಗುತ್ತದೆ. ಮಣ್ಣಿನ ಗುಣ ಗೊತ್ತಿಲ್ಲದೆ ತೆಂಗು, ಅಡಿಕೆ ಹಾಕಿದರೆ ಒಳ್ಳೆಯ ರೀತಿಯಲ್ಲಿ ಪ್ರತಿಫಲ ಬರುವುದಿಲ್ಲ. ಮಣ್ಣಿನ ಗುಣದ ಬಗ್ಗೆ ತಿಳಿವಳಿಕೆ ನೀಡುವ ಕೆಲಸವನ್ನು ತೋಟಗಾರಿಕೆ ಇಲಾಖೆಯವರು ಮಾಡಬೇಕು. ನಿಮ್ಮ ಫಾರಂ ಏನಿದೆ ಅದಕ್ಕೆ ರೈತ ಭೇಟಿ ನೀಡಬೇಕು. ಅದು ಮಾದರಿ ಫಾರಂ ಆಗಿರಬೇಕು. ಇಲ್ಲಿ ಇಂಥಿಂಥ ಬೆಳೆ ಬೆಳೆದಿದ್ದಾರೆ, ನಾನೂ ಕೂಡ ನನ್ನ ಜಮೀನಿನಲ್ಲಿ ಇಂಥಿಂಥ ಬೆಳೆ ಬೆಳೆಯಬಹುದೆಂಬ ಭಾವನೆ ಬೆಳೆದು ಬರುವಂತೆ ತೋಟಗಾರಿಕೆ ಫಾರಂ ಅನ್ನು ಒಳ್ಳೆಯ ರೀತಿಯಲ್ಲಿ ಇಡಬೇಕು. ಅದರ ಬಗ್ಗೆ ಹೆಚ್ಚು ತಿಳಿವಳಿಕೆ ಪಡೆಯತಕ್ಕ ರೈತರು ಇದ್ದರೆ ಫಾರಂನಲ್ಲಿ ವಿಚಾರ ಗೋಷ್ಠಿ ಏರ್ಪಡಿಸಿ ಇಂಥಿಂಥ ಬೆಳೆಗಳನ್ನು ಹೀಗೆ ಹೀಗೆ ಮಾಡಿ ಎಂದು ಹೇಳಿ ಎರಡು ತಿಂಗಳಿಗೊಮ್ಮೆ ರೈತರ ಗೋಷ್ಠಿ ಕರೆದರೆ ಉಪಯುಕ್ತವಾಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೃಷಿ ಇಲಾಖೆಯ ಮಾದರಿಯಲ್ಲಿ ತೋಟಗಾರಿಕೆ ಇಲಾಖೆಯನ್ನು ರೀ ಆರ್ಗನೈಸೇಷನ್ ಮಾಡಿದರೆ ಒಳ್ಳೆಯದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಗ್ರಾಮಾಂತರ ಪ್ರದೇಶಗಳಿಗೆ ತಾಂತ್ರಿಕ ಸಲಹೆಗಳನ್ನು ಕೊಡುವ ಸಲುವಾಗಿ ಕೃಷಿ ಇಲಾಖೆಯವರು ಹೇಗೆ ಹೆಚ್ಚು ಸಿಬ್ಬಂದಿಯನ್ನು ಒದಗಿಸಿ ವ್ಯವಸ್ಥೆ ಮಾಡಿದ್ದಾರೋ ಅದೇ ರೀತಿ ತೋಟಗಾರಿಕೆ ಇಲಾಖೆಯವರು ಮಾಡಿದರೆ ಅದರಿಂದ ಹೆಚ್ಚು ಅನುಕೂಲವಾಗುತ್ತದೆ, ಸಣ್ಣ ಮತ್ತು ಅತಿ ಸಣ್ಣ ರೈತರ ಜಮೀನಿನಲ್ಲಿ ಒಂದು ಗುಂಟೆ ಜಾಗವನ್ನು ಬಿಡದೆ ತೋಟಗಾರಿಕೆ ಇಲಾಖೆ ಆರ್ಥಿಕ ಬೆಳೆ ಬೆಳೆಯುವ ಮನೋಭಾವವನ್ನು ಮೂಡಿಸಬೇಕು. ಅದಕ್ಕೋಸ್ಕರ ಮೊಬೈಲ್ ಯೂನಿಟ್ ಅನ್ನು ಚೆನ್ನಾಗಿ ಉಪಯೋಗಿಸಿಕೊಂಡರೆ ರೈತರಿಗೆ ಮತ್ತು ಅವರ ಕುಟುಂಬಗಳಿಗೆ ಅರ್ಥ ಕೊಟ್ಟಂತಾಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದುವರೆಗೆ ನನಗೆ ತಿಳಿದ ಮಟ್ಟಿಗೆ ನನ್ನ ಸಾಮಾನ್ಯ ಜ್ಞಾನವನ್ನು ವ್ಯಕ್ತಪಡಿಸಿದ್ದೇನೆ. ಈಗಾಗಲೇ ಅಧ್ಯಕ್ಷರು ಎರಡು ಬಾರಿ ಎಚ್ಚರಿಕೆ ನೀಡಿರುವುದರಿಂದ ಕೃಷಿ ಇಲಾಖೆಯಲ್ಲಿ ವೈಜ್ಞಾನಿಕ ದೃಷ್ಟಿಕೋನದ ಕೊರತೆ ಮತ್ತು ಪಶುಸಂಗೋಪನಾ ಇಲಾಖೆಯಲ್ಲಿ ದೂರದೃಷ್ಟಿಯ ಕೊರತೆ ಇದೆ ಎಂದು ಹೇಳಿ, ನಿಶ್ಚಿತ ಗುರಿ ಇಲ್ಲದ ತೋಟಗಾರಿಕೆ ಇಲಾಖೆಯ ಬೇಡಿಕೆಗಳನ್ನು ಖಂಡಿತವಾಗಿ ವಿರೋಧಿಸಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ರೇವಣಸಿದ್ಧಯ್ಯ (ಶಿರುಗುಪ್ಪ).—ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಈ ಸಭೆಯ ಮುಂದೆ ಮಂಡಿಸಿರತಕ್ಕ ಕೃಷಿ ಪಶುಸಂಗೋಪನೆ ಹಾಗೂ ತೋಟಗಾರಿಕೆ ಇಲಾಖೆಯ ಬೇಡಿಕೆಗಳನ್ನು ಬೆಂಬಲಿಸುತ್ತಾ ಕೆಲವು ವಿಷಯಗಳನ್ನು ಮಾತನಾಡಬಯಸುತ್ತಿದ್ದೇನೆ. ವ್ಯವಸಾಯ ಖಾತೆ ಬಹಳ ದೊಡ್ಡ, ಅಗತ್ಯವಾದ ಮತ್ತು ಪುರಾತನ ಖಾತೆ. ಇತ್ತೀಚೆಗೆ ಅನೇಕ ಖಾತೆಗಳು ಆರಂಭವಾಗಿವೆ. ಅವೆಲ್ಲಕ್ಕೂ ಪುರಾತನವಾದುದು ಇದು. ಈ ದೇಶ ಕೃಷಿ ಪ್ರಧಾನವಾದ ದೇಶ. ವ್ಯವಸಾಯವನ್ನು ಕೃಷಿ ಎಂತಲೂ, ಆರಂಭ ಎಂತಲೂ ಕರೆಯುತ್ತಾರೆ. ಆರಂಭ ಎಂದರೆ ಅರ್ಥ ಆರಂಭೋತ್ಸವ ಎಂದು ಮನೆಯಲ್ಲಿ ಮಾತಾಡಿಕತೆ ನಡೆಸುತ್ತಿದ್ದರೆ ಅದಕ್ಕೆ ಆರಂಭ ಕೃಷಿ. ದೇಶದ ಒಡನಾಟಕ್ಕೆ ಆರಂಭ ಮುಖ್ಯ ಅದು ನಡೆಯದಿದ್ದರೆ ದೇಶದ ಒಡನಾಟವೇ ನಡೆಯುವುದಿಲ್ಲ. ಅದರ ಅರಿವು ಈ ದೇಶದಲ್ಲಿ ಆಗದೆ ನಾವು ಚಿಂತಿಸತಕ್ಕ ಕಾಲ ಬಂದಿದೆ. ಅದಕ್ಕೆ ಸರ್ವಜ್ಞರು ಹೇಳಿದರು.—

ಒಕ್ಕಲಿಗನೊಕ್ಕದೊಡೆ ನಕ್ಕಿಹುದು ಜಗವೆಲ್ಲ,
ಒಕ್ಕಲಿಗ ತಾ ನೊಕ್ಕದೊಡೆ ಜಗವು ತಾ
ಬಿಕ್ಕುವುದು ನೋಡಾ ಸರ್ವಜ್ಞ

ಇವತ್ತು ಅದರ ಅರ್ಥವನ್ನು ಪ್ರತಿಪಾದನೆ ಮಾಡುವುದಕ್ಕೆ ತಯಾರಿಲ್ಲ, ಅದನ್ನು ಪುನರ್ ಆಲೋಚನೆ ಮಾಡುವುದಕ್ಕೆ ಯಾರೂ ತಯಾರಿಲ್ಲ. ಅಷ್ಟರಮಟ್ಟಿಗೆ ಆಗಿದೆ ವ್ಯವಸಾಯ. ವ್ಯವಸಾಯ ನಡೆಯದಿದ್ದರೆ ಜಗದಾಟವೇ ಕೆಡಗು ಸರ್ವಜ್ಞ ಅಂದಮೇಲೆ ವ್ಯವಸಾಯವನ್ನು ಬಿಡುವ ಹಾಗೆ ಇಲ್ಲ. ವ್ಯವಸಾಯ ಈ ಜಗತ್ತಿನ ಮೂಲ ವೃತ್ತಿ. ಇದರ ಮೇಲೆ ಅನೇಕ ವೃತ್ತಿಗಳು ಬಂದಿವೆ. ಆದರಿಂದ ಅನೇಕ ವೃತ್ತಿಗಳು ಬದುಕಿವೆ. ನಮ್ಮ ವೃತ್ತಿಯನ್ನು ನಿಲ್ಲಿಸುತ್ತೇವೆ, ಸ್ಟ್ರೈಕ್ ಮಾಡುತ್ತೇವೆ ಎಂದು ಹೇಳುತ್ತಾರೆ. ಆದರೆ ರೈತ ಏನಾದರೂ ಸ್ಟ್ರೈಕ್ ಮಾಡಿದರೆ ಜಗತ್ತು ಏನಾಗುತ್ತದೆ ? ಆದರೆ ರೈತ ಹಾಗೆ ಅಲ್ಲ. ಎಷ್ಟೇ ಕಷ್ಟ ಇರಲಿ, ನಷ್ಟ ಇರಲಿ ವ್ಯವಸಾಯದಿಂದಲೇ ಅವನು ಜೀವನ ಮಾಡುತ್ತಿದ್ದಾನೆ. ಇವತ್ತು ತಿಳಿದವರು ಬುದ್ಧಿವಂತರು, ಹಣವುಳ್ಳವರು, ಆಸ್ತಿವುಳ್ಳವರು ಯಾರೂ ವ್ಯವಸಾಯ ಮಾಡುವುದಕ್ಕೆ ಒಲ್ಲರು

ಏಕೆಂದರೆ ಅದರಿಂದ ಬರುವುದು ಕನಿಷ್ಟ ಆದಾಯ ಮಾತ್ರ. ಮಾತ್ರ ಸಾಲಗಳಲ್ಲಿ ಮುಳುಗಿ ಹೋಗತಕ್ಕ ಪರಿಸ್ಥಿತಿ ಇದೆ. ಅವನಿಗೆ ಆಸ್ತಿ ಇದೆ, ಬಂಗಲೆ ಇದೆ ಎಂದು ಹೇಳುವ ಸ್ಥಿತಿಯಲ್ಲಿ ಇಲ್ಲ. ಅದಕ್ಕೆ ಮಹಾತ್ಮ ಗಾಂಧಿಯವರು ಹೇಳಿದರು.—

"If I succeed in ridding the poverty in tha villages I have won Swaraj.

Such is the problem of the farmer. ನಮಗೆ ಸ್ವಾತಂತ್ರ್ಯ ಬಂದು ೩೮ ವರ್ಷ ವಾಯಿತು. ಅಂದು ನಮ್ಮ ದೇಶದ ಪಿತಾಮಹ ಹೇಳಿದ ಮಾತು ಇಂದಿಗೂ ನೆನಪಾಗುತ್ತವೆ. ಹಳ್ಳಿಗಳ ಉದ್ಧಾರವಾಗಬೇಕಾದರೆ, ಬಡತನ ನಿರ್ಮೂಲನವಾಗಬೇಕು. ಸಾಲವಿಮುಕ್ತಿ ಆಗಬೇಕು ಆದರೆ ಎಷ್ಟಾಗಿದೆ? ಕಂತುಕಂತುಗಳಲ್ಲಿ ಸಾಲತೆಗೆದುಕೊಳ್ಳುತ್ತಿದ್ದಾನೆ ರೈತ ಗೊಬ್ಬರಕ್ಕೆ ಬೀಜಕ್ಕೆ, ಮನೆಗೆ, ಮದುವೆಗೆ ಎಲ್ಲದಕ್ಕೂ ಸಾಲ ತೆಗೆದು ಕೊಳ್ಳುತ್ತಿದ್ದಾನೆ. ಹೆಂಡರು, ಮಕ್ಕಳು, ಮುದಿ ತಂದೆ, ತಾತ ಇವರುಗಳ ಜವಾಬ್ದಾರಿಯಿಂದಾಗಿ ಕುಟುಂಬದವರೆಲ್ಲರೂ ನಿಕೃಷ್ಟ ಜೀವನ ಮಾಡಿದರೂ ಸಹ ತಿನ್ನುವುದಕ್ಕೆ ಅನ್ನವಿಲ್ಲ.

೬-೦೦ ಪಿ.ಎಂ.

ಯಾರ ದುಡಿಮೆಯ ಪ್ರತಿಫಲದಿಂದ ನಾವೆಲ್ಲರೂ ಸಂತೋಷದಿಂದ ಅಲಂಕೃತವಾದ ಈ ಭವನದಲ್ಲಿ, ಈ ಮನೆಯಲ್ಲಿ ಕುಳಿತು ಮಾತನಾಡುತ್ತೇವೋ ನಮ್ಮಲ್ಲಿರುವ ಅನೇಕರು ಜಗತ್ತಿನಲ್ಲಿ ಅವನ ಕಷ್ಟ ಏನಾಗಿದೆ, ಅವನ ಜೀವನ ಪರಿಸ್ಥಿತಿ ಏನಾಗಿದೆ ಎಂಬುದನ್ನು ವಿಚಾರ ಮಾಡತಕ್ಕ ಕಾಲ ದೂರ ಇರಲಾರದು. ಈಗ ದೂರವಾಗಿದೆ. ಅದಕ್ಕೆ ಒಂದು ದಿನ ಬರುತ್ತದೆ. ಕೃಷಿ ವಿಚಾರದ ಅನುಭವಿಗಳಾಗಿರತಕ್ಕ ಮಾನ್ಯ ಕೆ.ಹೆಚ್. ಪಾಟೀಲರು, ವಿಶ್ವನಾಥರೆಡ್ಡಿ ಮುದ್ನಾಳ್ ಅವರು, ಮುಂತಾದವರು ಬಿಡಿಬಿಡಿಯಾಗಿ ವಿಚಾರಗಳನ್ನು ಹೇಳಿದ್ದಾರೆ. ಇದೊಂದೇ ಇಲಾಖೆಯಿಂದ ಕೃಷಿಕನ ಅಭಿವೃದ್ಧಿಯಾಗುತ್ತದೆ, ಅವನ ಆರ್ಥಿಕ ಸ್ಥಿತಿ, ಸಾಮಾಜಿಕ ಸ್ಥಿತಿ ರಾಜಕೀಯ ಅನುಕೂಲ, ಒಡನಾಟ ಸುಧಾರಿಸುತ್ತದೆ ಎಂದು ಅಲ್ಲ. ಎಲ್ಲ ವಿಚಾರದಲ್ಲೂ ಬದಲಾವಣೆಯಾಗಬೇಕು. ಕೃಷಿಕನ ಅಭಿವೃದ್ಧಿಯೇ ದೇಶದ ಅಭಿವೃದ್ಧಿ. ದೇಶ ಎಂದರೆ ಏನು? ದೇಶ ಎಂದರೆ ಬರೀ ಬೆಂಗಳೂರಾ? ಅಥವಾ ದೇಶ ಎಂದರೆ ರಾಜಕಾರಣಿಗಳಾ? ದೇಶ ಎಂದರೆ ಬರೀ ಅಧಿಕಾರಿಗಳಾ? ದೇಶ ಎಂದರೆ ವ್ಯಾಪಾರಸ್ಥರಾ? ಭಾರತ ದೇಶ ಎಂದರೆ ಕೃಷಿಕರು, ಸಂಪತ್ತೆಲ್ಲಾ ಹಳ್ಳಿಗಳಿಂದ ಪರಾರಿಯಾಗಿ ಪಟ್ಟಣ ಸೇರುತ್ತಿದೆ. ಹಳ್ಳಿಗಳಲ್ಲಿ ಇವತ್ತಿನ ದಿವಸ ಏನಿದೆ? ಕಾಡು, ಮಣ್ಣು, ನೀರು ಇದೆ. ಸಾಲ ತೆಗೆದುಕೊಳ್ಳಿ, ದುಡಿಯಿರಿ ಎಂದು ಹೇಳುತ್ತಾರೆ. ಹಗಲುರಾತ್ರಿ ದುಡಿಯುವ ರೈತರಿಗೆ ಸಾಲ ಏತಕ್ಕೆ ಬೇಕು? ದುಡಿದರೂ ಸಾಲಗಾರರಾಗಬೇಕು ಎಂದು ಯಾವ ಎಕನಾಮಿಸ್ಟ್ ಹೇಳುತ್ತಾನೆ? ಇವತ್ತು ರೈತ ಕೊಡುವ ದುಡ್ಡು. ಆದರೆ ಅವನು ಕೊಳ್ಳುವ ವಸ್ತುಗಳ ಬೆಲೆ ಮಾತ್ರ ಮಿತಿಮೀರಿ ಹೋಗುತ್ತಿದೆ. ಎಲ್ಲದಕ್ಕೂ ಟ್ಯಾಕ್ಸ್. ಆತ ಮಾರುವ ಪದಾರ್ಥದ ಮೇಲೆ ಸುಂಕ. ಯಾವುದರ ಮೇಲೆ ಕಡಿಮೆ ಇದೆ? ಉದಾರಣೆಗೆ ಜೂಟ್ ತೆಗೆದುಕೊಳ್ಳಿ. ನಮ್ಮ ರಾಜ್ಯಕ್ಕಿಂತ ಬೇರೆ ರಾಜ್ಯದಲ್ಲಿ ಇದು ಜಾಸ್ತಿ ಇದೆ. ಇದರಿಂದ ಬರತಕ್ಕ ತೆರಿಗೆ ಎಷ್ಟು? ಇದು ಕೇಂದ್ರಕ್ಕೆ ಹೋಗತಕ್ಕ ತೆರಿಗೆ. ೮ ಸಾವಿರ ಕೋಟಿ ರೂಪಾಯಿ ಬರುತ್ತಿದೆ. ಜೂಟನ್ನು ಬಳಸುವವರು ಯಾರು? ಒಕ್ಕಲಿಗರು. ಗೋಣಿ ಚೀಲ ಬೇರೆ ಯಾರಾದರೂ ಬಳಸುತ್ತಾರಾ? ೮ ಸಾವಿರ ಕೋಟಿ ರೂಪಾಯಿ ಕೇಂದ್ರಕ್ಕೆ ಇದರಿಂದ ಬರುತ್ತಿದೆ. ಕಬ್ಬಿನಿಂದ ಎಷ್ಟು ಆದಾಯ ಬರುತ್ತಿದೆ? ಯಾರ ಕೊಡುಗೆ ಅದು? ಕಬ್ಬನ್ನು ಪಟ್ಟಣದಲ್ಲಿ ಯಾರಾದರೂ ಬೆಳೆಯುತ್ತಾರಾ? ಹತ್ತು ಅಂತಸ್ತಿನ ಮಹಡಿಯ ಮೇಲೆ ಬೆಳೆಯುತ್ತಾರಾ? ಯಾವ ಪದಾರ್ಥವನ್ನು ತೆಗೆದುಕೊಂಡರೂ ರೈತರು ಸುಂಕ ಕೊಡಬೇಕು. ಆತನು ಮಾರುವ ಎಲ್ಲ ಪದಾರ್ಥಗಳ ಮೇಲೂ ಸುಂಕ. ಬೀರಿಯಿಂದಕ್ಕೆ ಇಲ್ಲ. ಆಹ್ಲಾದಕ್ಕಾಗಿ ಬಳಸುವ ವಸ್ತುಗಳ ಮೇಲೆ ಸುಂಕ ಕಡಿಮೆ ಮಾಡತಕ್ಕ ದೊಡ್ಡ ಮನಸ್ಸಿದೆ ಈ ಸರ್ಕಾರಕ್ಕೆ. ಎಸೆನ್ಷಿಯಲ್ ಕಮೊಡಿಟೀಸ್ ಎಂದು ಹೇಳುತ್ತಾರೆ. ಎಸೆನ್ಷಿಯಲ್ ಕಮೊಡಿಟೀಸ್–ಬಹಳ ಸುಂದರವಾದ ಮಾತಿನಿಂದ ಹೇಳುತ್ತಾರೆ. ಇವುಗಳಿಗೆಲ್ಲಾ ಬೆಲೆ ಕಡಿಮೆಯಾಗಬೇಕು. ಇದಕ್ಕೆ ಬೆಲೆ ನಿಗದಿಯಾಗಬೇಕು. ಆದರೆ ರೈತ ಕೊಳ್ಳುವ ವಸ್ತುವಿಗೆ ಮಾತ್ರ ಬೆಲೆ ಕಡಿಮೆಯಾಗಬಾರದು. ಇದನ್ನು ಯಾವ ಜ್ಞಾನಿ ಹೇಳುತ್ತಾನೆ? ಯಾವ ತಜ್ಞ ಹೇಳುತ್ತಾನೆ? ಫ್ಯಾಕ್ಟರಿಯಲ್ಲಿ ತಯಾರಾಗತಕ್ಕ ಫಿನಿಷ್ಡ್ ಗೂಡ್ಸ್‌ಗೆ ಬೆಲೆ ದಿನೇ ದಿನೇ ಏರುತ್ತಿದೆ ಆದರೆ ವ್ಯವಸಾಯಗಾರ ಬೆಳೆದ ಪದಾರ್ಥಕ್ಕೆ ಮಾತ್ರ ಬೆಲೆ ಏರುತ್ತಿಲ್ಲ. ೧೫೦ ರೂಪಾಯಿಗೆ ಒಂದು ಕ್ವಿಂಟಾಲ್ ಭತ್ತ ಮಾರಬೇಕು.

೧೫೦ ರೂಪಾಯಿಗೆ ಇಲ್ಲಿ ಒಂದು ಚಪ್ಪಲಿಯೂ ಸಿಗುವುದಿಲ್ಲ. ಅದೂ ಸಾಯಿ ಹೊತ್ತುಕೊಂಡು ಹೋದರೆ ಮುಗಿಯಿತು. ಆದರೆ ಅಲ್ಲಿ ಒಂದು ಕ್ವಿಂಟಾಲ್ ಭತ್ತ ಕೊಟ್ಟು ಒಂದು ತಿಂಗಳು ಜೀವನ ಸಾಗಿಸುತ್ತಾರೆ ರೈತ. ಸಂತೋಷಕ್ಕಾಗಿ ಕೃತ್ರಿಮವಾಗಿ ಬೇಕಾಗತಕ್ಕ ವೆಚ್ಚಗಳಿಗೆ ದುಡ್ಡಿದೆ. ತಾನು ದುಡಿದು, ಹೊಟ್ಟೆ ಬಟ್ಟೆ ಕಟ್ಟಿ ಬೆಳೆದ ಬೆಳೆಗೆ ಸರಿಯಾದ ಬೆಲೆ ರೈತನಿಗೆ ಸಿಗುತ್ತಿಲ್ಲ. ಆದರೆ ಟಾಟಾ. ಬಿರ್ಲಾ ತಯಾರು ಮಾಡತಕ್ಕ ಪದಾರ್ಥಗಳ ಮೇಲಿನ ಬೆಲೆ ಏರುತ್ತಾ ಇರಬೇಕೆ ? The cost of goods manufactured in factories doesn't even exceed 10%. But to grow foodgrains the expenditure cost is 90%. In the name of essential commodities they say the foodgrains should be sold at lesser prices. But industrialists. ತಯಾರು ಮಾಡತಕ್ಕ ವಸ್ತುಗಳು ಅಂದರೆ ಅದು ಪ್ಲಾಸ್ಟಿಕ್ ಇರಬಹುದು, ಕಾಪರ್ ಇರಬಹುದು, ೧೦ ರೂಪಾಯಿ ಬೆಲೆ ತೆಗೆದು ಕೊಳ್ಳುತ್ತಾರೆ. ಅವರಿಗೆ ವೈಭವದ ಜೀವನ, ಎಸ್ಟೇಲ್, ಎಲ್ಲಾ ಕೊಟ್ಟಿದ್ದೇ ಕೊಟ್ಟಿದ್ದು. ಕೊಟ್ಟಿದ್ದೇ ಕೊಟ್ಟಿದ್ದು. ಹಳ್ಳಿಯವರು ಮಾತ್ರ ಕೆಳಗೆ ಹೋಗುತ್ತಿದ್ದಾರೆ. ಗ್ರೀ-ಡೌನ್ ಆಗತಕ್ಕ ದಿನ ಬರಬಾರದು. ಇದನ್ನು ಎಲ್ಲರೂ ಚೆನ್ನಾಗಿ ತಿಳಿದುಕೊಳ್ಳಬೇಕು. ಬುದ್ಧಿವಂತರು ಯಾರೂ ಇವತ್ತು ಒಕ್ಕಲುತನಕ್ಕೆ ಹೋಗುವುದಿಲ್ಲ. ಸನ್ನಂಥ ದಡ್ಡ ಮಾತ್ರ ಒಕ್ಕಲುತನ ಮಾಡುತ್ತಾನೆ. ನಾನೂ ಸಾಲದವ, ನಾನು ಸತ್ತರೆ ನನ್ನ ಮಕ್ಕಳೂ ಸಾಲದವರು. ಒಕ್ಕಲುತನದ ಮನೆಗೆ ಹೆಣ್ಣು ಕೊಡುವವರೂ ಇಲ್ಲ. ಪೇಟೆಯಲ್ಲಿ ಜವಾನನಾಗಿದ್ದರೂ ಹೆಣ್ಣು ಕೊಡುತ್ತಾರೆ. ಇಂಥ ಪರಿಸ್ಥಿತಿ ಬಂದಿದೆ. ಯಾವ ದೇಶದಲ್ಲಿ ಮುಖ್ಯವಾದ ವೃತ್ತಿ ವ್ಯವಸಾಯವೋ ಅಂಥ ದೇಶದಲ್ಲಿ ವ್ಯವಸಾಯಗಾರನಿಗೆ ಈ ಸ್ಥಿತಿ ಬಂದಿದೆ. ಇವನು ಶೂದ್ರ, ಮುಟ್ಟಲಾರದ ಮನುಷ್ಯನಾಗಿದ್ದಾನೆ. ಅವನು ದುಡಿದರೆ ಮಾತ್ರ ಪೇಟೆಯಲ್ಲಿರುವವರು ಹೊಟ್ಟೆ ತುಂಬಾ ಉಂಡು ಲೋಲುಪ್ತ ಜೀವನ ನಡೆಸುವುದು. ಈ ಬಗ್ಗೆ ಅರಿವು ಬರಬೇಕು. ರೈತರು ಸಂಘಟಿತರಾಗಬೇಕು, ಅವರ ಹಿತಸಾಧನೆಯಾಗಬೇಕು ಎಂಬುದೇ ಮುಖ್ಯವಾದ ಗುರಿಯಾಗಿರಬೇಕು. ಯಾವುದೇ ಪ್ರತಿನಿಧಿಯಾಗಿರಲಿಲ್ಲ ಅವನು ಪಂಚಾಯಿತಿ ಅಧ್ಯಕ್ಷನೇ ಆಗಿರಲಿ ಅಥವಾ ಭಾರತದ ಪ್ರಧಾನ ಮಂತ್ರಿಯೇ ಆಗಿರಲಿ ಮುಖ್ಯವಾದ ಗುರಿ ಯಾವ ದೇಶ ವ್ಯವಸಾಯ ಪ್ರಧಾನವಾದ ದೇಶವೋ, ಯಾವ ದೇಶದಲ್ಲಿ ವ್ಯವಸಾಯಗಾರ ನಿಕೃಷ್ಟವಾಗಿ ಜೀವನ ಮಾಡಿ ತಾನೇ ತಿನ್ನಲಾರದ್ದನ್ನು ಬೇರೆಯವರಿಗೆ ಕೊಡುತ್ತಿದ್ದಾನೋ ಅಂಥ ತ್ಯಾಗಮಯ ಜೀವನ ಮಾಡತಕ್ಕ ವ್ಯವಸಾಯಗಾರನ ಬಗ್ಗೆ ಚಿಂತನೆ ಮಾಡಬೇಕು. ಆ ಕಾಲ ಇನ್ನೂ ಬರಲಿಲ್ಲ. ಅಧಿಕಾರದಲ್ಲಿರುವವರು ಇದನ್ನು ಯೋಚನೆ ಮಾಡಬೇಕು. ನಾನು ಒಬ್ಬ ಡೆಪ್ಯುಟಿ ಕಮೀಷನರ್ ಜೊತೆ ಮಾತನಾಡುತ್ತಿದ್ದೆ. ರೈತರ ಜೀವನ ಬಹಳ ಕಷ್ಟ ಎಂದು ಅವರಿಗೆ ಹೇಳಿದೆ. ಅದಕ್ಕೆ ಅವರು ಹೇಳಿದರು ''ಏನ್ರಿ ಇವರು ಒಂದು ಚೌಕಟ್ಟಿನಲ್ಲಿ ಜೀವನ ಮಾಡುವುದಿಲ್ಲ, ದುಂದು ವೆಚ್ಚ ಮಾಡುತ್ತಾರೆ. ನನಗೆ ೩೫೦೦ ರೂಪಾಯಿ ಸಂಬಳ ಬರುತ್ತದೆ ನಾನು ಅದರಲ್ಲೇ ಜೀವನ ಮಾಡುತ್ತೇನೆ" ಎಂದು. ಅದಕ್ಕೆ ನಾನು ಹೇಳಿದೆ, ''ನಮ್ಮ ಭೂಮಿ, ಎತ್ತು, ಕರು, ದನ ಎಲ್ಲಾ ಕೊಡುತ್ತೇನೆ, ವರ್ಷಕ್ಕೆ ೩ ಸಾವಿರ ರೂಪಾಯಿ ಕೊಡಿ'' ಎಂದು.

This is the understanding that is prevailing among the IAS officers under whom the country is being ruled. It should go. ಇದು ಬದಲಾವಣೆಯಾಗಬೇಕು. ತೋಟಕ್ಕೆ ಕಡಿಮೆ ಮಾಡಿದ್ದೇವೆ, ವ್ಯವಸಾಯಕ್ಕೆ ಕಡಿಮೆ ಮಾಡಿದ್ದೇವೆ ಎಂದು ಹೇಳುತ್ತಾರೆ. ರೈತನಿಗೆ ಹಾಕುವ ಯೋಜನೆ ದುಡ್ಡು ಸರ್ಕಾರದಿಂದ ರೈತನಿಗೆ ಮುಟ್ಟುವುದರೊಳಗಾಗಿ ಐಸ್ ತರಹ ಕರಗಿಹೋಗುತ್ತದೆ. ಒಂದು ಮುದ್ದೆ ಐಸ್ ಕೊಟ್ಟರೆ ರೈತನ ಹತ್ತಿರ ಹೋಗುವ ಹೊತ್ತಿಗೆ ಗೋಲಿಯಷ್ಟು ಆಗಿಬಿಡುತ್ತದೆ. ವ್ಯವಸಾಯಗಾರನಿಗೆ ಇರುವ ತೊಂದರೆ ಬಗ್ಗೆ ಮತ್ತು ವ್ಯವಸಾಯ ಇಲಾಖೆಯಲ್ಲಿ ಆಗುತ್ತಿರುವ ಕಾರ್ಯಕ್ರಮದ ಬಗ್ಗೆ ಮಾನ್ಯ ಕೆ. ಹೆಚ್. ಪಾಟೀಲರು ಬಹಳ ಚೆನ್ನಾಗಿ ಹೇಳಿದರು, ಆದುದರಿಂದ ನಾನು ಅದರ ಬಗ್ಗೆ ಪುನಃ ಹೆಚ್ಚು ಹೇಳುವುದಿಲ್ಲ. ನಮಗೆ ಒಕ್ಕಲುತನ ಮಾಡುವುದೇ ಸಾಕಾಗಿದೆ. ವ್ಯವಸಾಯ ಬಾಬಿನಲ್ಲಿ ನೋಡಿದರೆ ಸಂಬಳ ಎರಡರಷ್ಟು, ಖರ್ಚು ಒಂದರಷ್ಟು ಆಗಿದೆ. ಪ್ರಕಾಶ್ ಅವರು ಬಹಳ ಕಿರಿಯ ವಯಸ್ಸಿನ ಕೃಷಿ ಮಂತ್ರಿಯಾಗಿದ್ದಾರೆ. ಇವರಿಗೆ ಇದೆಲ್ಲಾ ಅರ್ಥವಾಗುವುದಿಲ್ಲ. ಎಂಥೆಂಥ ಮೇಧಾವಿಗಳು ಇವರಲ್ಲಿದ್ದಾರೆಂದರೆ ರೈತನಿಗೆ ಮುಟ್ಟಿದ ಹಾಗೆ ಬಹಳ ಚಂದಾಗಿ ರೈತರ ಹೆಸರಿನಲ್ಲಿ ತಾವೇ ತೆಗೆದುಕೊಳ್ಳುತ್ತಾರೆ. ಇದು ಹೋಗಬೇಕು. ದೇಶದಲ್ಲಿ

ಎಂದಾದರೂ ಒಂದು ದಿವಸ ಕ್ರಾಂತಿಯಾಗುತ್ತದೆ. ನಾನು ಹೇಳುವ ಮಾತಲ್ಲ ಇದು. ಜನರು ತಾವಾಗಿಯೇ ಮಾಡುತ್ತಾರೆ. ಅದು ಆಗದ ರೀತಿಯಲ್ಲಿ ನೋಡಿಕೊಳ್ಳತಕ್ಕದ್ದು ಪ್ರತಿಯೊಬ್ಬ ಪ್ರತಿನಿಧಿಯ, ಪ್ರತಿಯೊಬ್ಬ ಅಧಿಕಾರಿಯ ಕರ್ತವ್ಯ. ನನಗೆ ಹೆಚ್ಚು ಮಾತನಾಡುವ ಇಚ್ಛೆ ಇಲ್ಲ. ನಾನು ಹೆಚ್ಚು ಮಾತನಾಡಿ ಮಾನ್ಯ ಅಧ್ಯಕ್ಷರು ಗಂಟೆ ಬಾರಿಸುವುದು ಬೇಕಾಗಿಲ್ಲ. ವ್ಯವಸಾಯಗಾರರ ಬಗ್ಗೆ ಎಲ್ಲರಿಗೂ ಯೋಚನೆ ಕಡಿಮೆ ಇದೆ. ಇವನು ಹೇಗೆ ಬದುಕುತ್ತಿದ್ದಾನೆ ಎಂಬ ಅರಿವು ಪ್ರಜಾಪ್ರತಿನಿಧಿಗಳಿಗೆ ಮತ್ತು ಅಧಿಕಾರಿಗಳಿಗೆ ಇರಬೇಕು. ಕಾನೂನುಗಳು ಹಳ್ಳಿಗೆ ಮಾತ್ರ ಇದೆಯೆ? ಹಳ್ಳಿಗೆ ಮಾತ್ರ ಸೀಲಿಂಗ್. ಎಲ್ಲಾ ಆಸ್ತಿ ಮೇಲೂ ಇರಬೇಕು. ಇವತ್ತು ಹಳ್ಳಿಯಲ್ಲಿ ಆಸ್ತಿ, ಬಂಗಾರ ಎಲ್ಲಾ ಕಿತ್ತುಕೊಂಡುಹೋಗಿದೆ. ರೈತ ಸಾಲಗಾರನಾಗಿದ್ದಾನೆ. ಆಸ್ತಿ ಮಿತಿ ಅಲ್ಲಿ ತಂದರು. ಭೂಮಿತಿ ಶಾಸನ ಅಲ್ಲಿ ತಂದರು. ಪಟ್ಟಣದಲ್ಲಿ ಮಿತಿಯೇ ಇಲ್ಲ. ರೈತ ಕಂಡಕಂಡವರ ಕಾಲು ಹಿಡಿದುಕೊಂಡ. ಮಾನ್ಯ ನಾಗರತ್ನಮ್ಮನವರು ಹೇಳುತ್ತಿದ್ದರು ನಾನು ೩೦೦ ಎಕರ ಭೂಮಿ ಕಳೆದುಕೊಂಡಿದ್ದೇನೆ ಎಂದು. ೩೦೦ ಎಕರೆ ಭೂಮಿ ಮಾರಿದರೆ ಈ ಊರಿನಲ್ಲಿ ಒಂದು ಮನೆಯೂ ಬರುವುದಿಲ್ಲ. ಇಲ್ಲಿ ಮಾತ್ರ ಯಾವ ಸೀಲಿಂಗೂ ಇಲ್ಲ, ಪ್ರಾಪರ್ಟಿ ಸೀಲಿಂಗೂ ಇಲ್ಲ. ಅಧಿಕಾರಿಗಳು, ರಾಜಕಾರಣಿಗಳು ಎಂಥೆಂಥವರೋ ರೊಕ್ಕ ತೆಗೆದುಕೊಂಡು ಆಸ್ತಿ ಮಾಡಿಕೊಳ್ಳುತ್ತಿದ್ದಾರೆ. ವರ್ತಕರು ಮಾಡಿಕೊಳ್ಳುತ್ತಿದ್ದಾರೆ. ಅರ್ಬನ್ ಏರಿಯಾದಲ್ಲಿ ಯಾವ ಸೀಲಿಂಗೂ ಇಲ್ಲ. ಅವಿದ್ಯಾವಂತರಿಗೆ, ದಡ್ಡರಿಗೆ ಸೀಲಿಂಗ್ ಹಾಕುತ್ತಿದ್ದಾರೆ. ೫೦ ಎಕರೆ ಏತಕ್ಕಿಟ್ಟುಕೊಂಡಿದ್ದೀಯಾ ಎಂದು ಕೇಳುತ್ತಾರೆ.

You say that you are a most socialistic Government. Socialism doesn't begin with the villages alone. it must come from Delhi.

ಅನುಕೂಲಗಳೆಲ್ಲಾ ಪಟ್ಟಣಿಗರಿಗೆ ಅನಾನುಕೂಲಗಳೆಲ್ಲಾ ರೈತನಿಗೆ. ಅವನು ಕಂಡವರ ಕಾಲಿಡಿಯ ಬೇಕು. ಇದು ಬಹಳ ಅನ್ಯಾಯ. ದೊಡ್ಡ ದುರಂತ, ಈ ದೇಶದಲ್ಲಿ ನಡೆದಿರೋದು. ಇವತ್ತು ನಮ್ಮ ಊರಿನಲ್ಲಿರತಕ್ಕ ಎಲ್ಲಾ ರೈತರ ಮನೆಗಳನ್ನು ಕಲೆಹಾಕಿದರೆ ಈ ಊರಿನಲ್ಲಿ ಇರತಕ್ಕ ಒಂದು ಮನೆ ಬೆಲೆ ಆಗೋಂಗಿಲ್ಲ. ನಮ್ಮ ಊರಿನ ಎಲ್ಲಾ ರೈತರ ಆಸ್ತಿಯನ್ನು ಒಟ್ಟು ಮಾಡಿದರೆ ಇಲ್ಲಿಯ ಒಬ್ಬ ಶ್ರೀಮಂತನ ಕಾರ್ಖಾನೆ ಆಗುವುದಿಲ್ಲ. ಇನ್ನು ಏನು ಈ ಪಹಣಿಯ ದುರಂತ? ಇವತ್ತು ಇದಕ್ಕೆ ಕೊನೆಯೇ ಇಲ್ಲವೇ? ಈ ಬಗ್ಗೆ ನಾನು ಹೇಳಬೇಕೆಂದರೆ, ಒಬ್ಬ ವಿಲೇಜ್ ಅಕೌಂಟೆಂಟ್ ಒಬ್ಬ ಐ.ಎ.ಎಸ್. ಅಧಿಕಾರಿ ಮಾಡಿಕೊಳ್ಳುವಷ್ಟು ದುಡ್ಡು ಮಾಡುತ್ತಿದ್ದಾರೆ. ಮುಗ್ಧ ರೈತರನ್ನು ಕಟ್ಟಿಕೊಂಡು ನೋಡಪ್ಪಾ ನಿನ್ನ ಹೊಲ ಅವರ ಹೆಸರಿಗೆ ಬರೀತೀನಿ ಅಂತಾನೆ. ಆಗ ಇವ ಅಯ್ಯೋ ಮಾರಾಯ, ನೀನು ಹಾಗೆ ಮಾಡಬೇಡ, ನಾನು ಮೂರು ಕೊಡುತ್ತೇನೆ ಅಂತಾನೆ. ಇವತ್ತು ಪಹಣಿಯ ಕಥೆ ಏನು? ಇವತ್ತು ಪಹಣಿ ಹೋಗಬೇಕು Should we live under the grip of the Village Accountant or the DC or the Secretary? why? for no fault of us ಏನು ಕಾನೂನು ಇದು? ಇದನ್ನು ಎಲ್ಲರೂ ಹೇಳುತ್ತಾರೆ. ಇದನ್ನು ಎಂದು ಮಾಡಿದಿರಿ? Pahani system should go; it should be abolised, and scrapped, Section No. 5 of the Act should be scrapped. ಅರಸ್ಮಾತ್ ಮಿತಿಮೀರಿ ಭೂಮಿ ಇದ್ದವನು ಕೊಡಲಿ. We have totally agreed with the land ceiling. ಅದನ್ನು ಕೊಟ್ಟ ನಂತರ ಉಳಿದ ಜಮೀನನ್ನು ಸಾಗುವಳಿಗೆ ಕೊಡಬಾರದು ಎನ್ನತಕ್ಕದ್ದು as I have came to know – ಈ ತರಹದ್ದು ದೇಶದ ಯಾವ ಭಾಗದಲ್ಲೂ ಇಲ್ಲ. ಇದು ನಮ್ಮ ರಾಜ್ಯ ಒಂದರಲ್ಲಿಯೇ ಇರುವುದು. ಇದು ಆಂಧ್ರದಲ್ಲಿಯೂ ಇಲ್ಲ. ಸೀಲಿಂಗ್ ಮೇಲೆ ಬರತಕ್ಕ ಭೂಮಿ ಕೂಡ ಕೊಡತಕ್ಕದ್ದು. ಉಳಿದದ್ದು ಅವನು ಯಾರಿಗೆ ಬೇಕಾದರೂ ಮಾರ್ರ್ಯೋ ಬಹುದು. ಇವತ್ತು ನಾನು ಭೇಷ್ ಇದ್ದೇನೆ, ಕೆಲಸ ಮಾಡುತ್ತಿದ್ದೇನೆ. ಆದರೆ I have no issues. ನಾಳೆ ನನ್ನ ತಲೆ ಕೆಟ್ಟಿತು, ಕೈಕಾಲು ಮುರೀತು, ಆಗ ನನ್ನನ್ನು ಯಾರು ನೋಡಿಕೊಳ್ಳುವವರು? ಆಗ ನನ್ನ ಹೆಂಡತಿ ಜಮೀನನ್ನು ನೋಡಿಕೊಳ್ಳುವುದಕ್ಕೆ ಆದೀತೆ? Under that circumstances should we not think of a away to cultivate the lands ಪಟ್ಟಣ ಆಸ್ತಿ ಆದಾಯಕ್ಕೆ ಮಿತಿಯಿಲ್ಲ. Have you borning Africa; have you born in America? Why this legislation? Section- 5 of the land Reforms Act is

detrimental to the interests of farmers. ಇವತ್ತು ಏನಾಗಿದೆ ಎಂದರೆ ಇವರು ಬರೆಯುತ್ತಾರೆ. ನಾನು ಹೋಗುತ್ತೇನೆ, ನೋಡಪ್ಪ ನನ್ನ ಹೆಸರಿಗೆ ಬರೆದುಬಿಡು. ಸರ್ಕಾರಕ್ಕೆ ಭೂಮಿ ಹೋಗುತ್ತದೆ. ಲೆಜಿಸ್ಲೇಷನ್ ಏನಿದೆ? ೧೨ ಸಾವಿರ ಆದಾಯ ಬರತಕ್ಕವರು ಯಾರೂ ಭೂಮಿಯನ್ನು ಕೊಡಬಾರದು ಎಂದು ಏನು ಇದರ ಅರ್ಥ? ಇವತ್ತು ಏನಾಗಿದೆ? ಯಾವ ದೇಶದಲ್ಲಿ ಇದನ್ನು ಮಾಡಿದ್ದಾರೆ ಎಂದು ನಾವು ನೋಡಿಕೊಂಡು ಬರೋಣ. ಎಲ್ಲರೂ ಬನ್ನಿ. Come on, appoint a study team to find out what is there in other countries. ನಾನು ಹಿಂದೆ ಸೆಂಟ್ರಲ್ ಅಗ್ರಿಕಲ್ಚರ್ ಮಿನಿಸ್ಟರ್ ಆಗಿದ್ದ ಬರ್ನಾಲಾ ಅವರ ಹತ್ತಿರ ಮಾತನಾಡಿದ್ದೇನೆ. He said, wehave gladly accepted the land legislation. ಪಂಜಾಬ್‌ನಲ್ಲಿ ಕರ್ನಾಟಕದ ಮೂರರಷ್ಟು ನಾಲ್ಕರಷ್ಟು ಭೂಮಿ ಉಳಿಸಿಕೊಂಡಿದ್ದಾರೆ ಅವರು. That is the land legislation/ceiling in punjab compared to Karnataka. ಅದನ್ನು ನಾನು ಒಪ್ಪಿದ್ದೇನೆ ಎಂದು ಹೇಳಿದರು. Whoever has lea sed out the land ಅದು ರೆಕಾರ್ಡ್‌ನಲ್ಲಿ ಇಲ್ಲ. The interest of the farmer is at a loss; the interest of the cultivator is at a loss. ಅವನಿಗೆ ನಾಲ್ಕು ವರ್ಷ ಬರೆದುಕೊಟ್ಟರೆ ಅವನು ಗೊಬ್ಬರ ಹೊಡೆಯುತ್ತಾನೆ. ಮಡಕೆ ಹೊಡೆಯುತ್ತಾನೆ ಇದರಿಂದ ಹೆಚ್ಚು ಬೆಳೆ ಬೆಳೆಯುತ್ತಾನೆ. ದೇಶಕ್ಕೆ ಒಳ್ಳೆಯದಾಗುತ್ತದೆ. ಆಗ ಅವನಿಗೆ ಕೊಟ್ಟಿದ್ದಕ್ಕೂ ಚೀಪ್ ಆಯಿತು. ಅವನು ತೆಗೆದುಕೊಂಡಿದ್ದಕ್ಕೂ ಸರಿ ಆಯಿತು, ಯಾರು ಮಾಸ್ಟರು? ಸೋಶಿಯಲಿಸ್ಟಿಕ್ ಎಂದು ಹೇಳುವುದರಲ್ಲಿ ಅರ್ಥ ಇಲ್ಲ. It should have some meaning. ಇದರ ಮೇಲೆ ಆಧಾರ ಆಗುವತಕ್ಕವರಿಗೆ ಅನುಕೂಲ ಮಾಡಬೇಕಾಗುತ್ತದೆ. ಇನ್ನು ೧೨ ಸಾವಿರ ಆದಾಯದವರು ಭೂಮಿಕೊಳ್ಳಬಾರದು ಎಂದು ಮಾಡಿದ್ದಾರೆ. ಈಗ ಒಬ್ಬ employee retires. After retirement if he gets Rs. 12000 he is not eligible to inherit his parents property. Whereas, ಒಬ್ಬ ದೊಡ್ಡ ಉಚ್ಚ ಉದ್ಯಮಿಯ ಮಗ ಕೋಟಿಗಟ್ಟಲೆ ಆದಾಯ ಬರುತ್ತಿದ್ದರೂ ಕೆಲಸದಿಂದ ನಿವೃತ್ತಿಯಾದರೆ ಎಷ್ಟೇ ಹಣಬಂದರೂ ಅವರಿಗೆ ಬರುವುದು ಬಂದೇ ಬರುತ್ತದೆ. ಅವರಿಗೆ ಎಷ್ಟೇ ಇದ್ದರೂ ಪಿಂಚಣಿ ಮಾತ್ರ ಬಂದೇ ಬರುತ್ತದೆ. But not a farmer's son. After all what is 12,000 rupees now a days when things are costly. ಇದು ಬದಲಾವಣೆಯಾಗಬೇಕು. ಈ ಕೆಲವೊಂದು ವಿಚಾರದಲ್ಲಿ ರೈತ ತಜ್ಞರ ಸಮಿತಿಯನ್ನು ಏರ್ಪಾಡು ಮಾಡಿ ನಾನು ಆಗಲೇ ಹೇಳಿದ್ದೇನೆ. Let it find out what is the legislation existing throughout the country and deal with all the problems concerning the farmers ಎಂದು ಹೇಳುತ್ತಿದ್ದೇನೆ. ನಮ್ಮ ರಾಜ್ಯದಲ್ಲಿ ಬಂದಿರುವ ಲ್ಯಾಂಡ್ ಲೆಜಿಸ್ಲೇಷನ್ ಸಕ್ರಮವಾಗಿದೆಯೋ ಮತ್ತು ದೇಶದ ಇನ್ನಿತರೇ ಭಾಗಗಳಿಗೆ ಸರಿ ಹೊಂದಾಣಿಕೆಯಲ್ಲಿದೆಯೋ? ಇಲ್ಲದಿದ್ದರೆ ಅಸಮಾನುಕೂಲವಾಗಿದೆಯೋ? ಎಂಬುದರ ಬಗ್ಗೆ ಕಮಿಟಿ ಮಾಡಬೇಕೆಂದು ಹೇಳುತ್ತೇನೆ. ಇವತ್ತು ರೆವಿನ್ಯೂ ಮಂತ್ರಿಗಳು ಇಲ್ಲ. ಆದರೂ ಕೂಡಾ ಈ ಬಗ್ಗೆ ಸದನದಲ್ಲಿ ಹೇಳಬಯಸುತ್ತೇನೆ. ಇವತ್ತು ವ್ಯವಸಾಯದ ಬಗ್ಗೆ ಕೂಡಾ ಕೂಲಂಕುಷವಾದ ಚರ್ಚೆ ಆಗಿದೆ. ಇದರಲ್ಲೂ ಕೂಡಾ ನಾನಾ ಯೋಜನೆಗಳು ಇದ್ದು ಹಣ ಬಹಳ ಖರ್ಚು ಆಗುತ್ತಿದ್ದರೂ ನಮಗೆ ಏನೂ ಮುಟ್ಟುತ್ತಾ ಇಲ್ಲ. ಇವತ್ತು ವ್ಯವಸಾಯ ಇಲಾಖೆಗೆ ಬರುತ್ತಿರುವ ಹಣ ಸೋರಿಹೋಗುತ್ತಿದೆ. ಇದು ರೈತನಿಗೆ ಸಿಗುತ್ತಿಲ್ಲ. ಇವತ್ತು ಊರಿಗೆ ೩-೪ ಜನ ಅಧಿಕಾರಿಗಳು ಇದ್ದಾರೆ. ಇವರು ಹೊಲದ ಹತ್ತಿರ ಹೋಗುವುದಿಲ್ಲ. ಒಂದು ಸಾರಿ ನಮ್ಮಲ್ಲಿಗೆ ಅಮೇರಿಕದಿಂದ ಒಂದು ಗ್ಯಾಂಗ್ ಜನ ಬಂದಿದ್ದರು. ಪೀಸ್ ಫೂರ್ ವಾಲೇಂಟೀರ್ಸ್ ಎಂದು ಹೇಳಿ ಬಂದಿದ್ದರು. ಅವರಲ್ಲಿ ಒಬ್ಬ ಅಧಿಕಾರಿ ನಮ್ಮ ಹೊಲಕ್ಕೆ ಬಂದು ಮೊಣಕಾಲಿನಲ್ಲಿ ಕುಳಿತು ತನ್ನ ಕೈಯನ್ನು ಹೊಲದೊಳಕ್ಕೆ ಅರ್ಧ ಅಡಿ ತೂರಿಸಿದ. ಮಣ್ಣನ್ನು ಪರೀಕ್ಷೆ ಮಾಡಲು. ಒಂದು ಗಾಡಿಯಲ್ಲಿ ಆ ಕಂಪನಿ ಜನ ಬಂದು ಟೆಸ್ಟ್ ಮಾಡಿದರು. ಆದರೆ ನಮ್ಮ ದೇಶದ ಅಧಿಕಾರಿಗಳು ಜೀಪನ್ನು ಬಿಟ್ಟು ಕೆಳಕ್ಕೆ ಇಳಿಯುವುದಿಲ್ಲ. ಅವರೆಲ್ಲಾ ಮನೆಯಲ್ಲೇ ಸೈ ಹೊಲಕ್ಕೆ ಬಂದರೂ ಕೂಡೋದಿಲ್ಲ. ನಮ್ಮ ಏರಿಯಾದಲ್ಲಿ ಭತ್ತಕ್ಕೆ ಎಂದು ಒಂದು ರೀತಿಯ ರೋಗ ಬಂತು ಶಿವಮೊಗ್ಗ ಕಡೆ ಅದೇನೋ ಕೆಂಪು ರೋಗಾನೋ ನಿಂಬೇಹುಳಿ ರೋಗಾನೋ ಎಂದು ಹೇಳುತ್ತಾರಲ್ಲಾ ಆ ರೀತಿ ರೋಗ. ಇದನ್ನು ಯಾರು ಉಳಿಸಿದರು? ಇದರ ಬಗ್ಗೆ ಅವರು ಕಂಡುಹಿಡಿಯದೆ ಹೋದ ಮೇಲೆ ನನಗೂ ಇವರಿಗೂ ಏನು ವ್ಯತ್ಯಾಸ? ನಾನೇನೂ ಇದರಲ್ಲಿ ತಜ್ಞನಲ್ಲ. ಅವರು ಬಿ.ಎಸ್‌ಸಿ, ಎ.ಜಿ. ಹಾಗೂ ಏನೇನೋ ಓದಿರುತ್ತಾರೆ. ಇವತ್ತು ಆ ರೋಗ ಬಂದಾಗ ಅದಕ್ಕೆ ಮುಂಜಾಗ್ರತೆ ಕ್ರಮ ಅವರು ತೆಗೆದುಕೊಳ್ಳಬೇಕು. ಅದು ಎಲ್ಲಾ

ಕಡೆ ಹರಡಿ ಎಲ್ಲಾ ರೈತರು ಹಾಳಾದ ಮೇಲೆ ಇವರು ಏನು ಮಾಡಿ ಏನು ಪ್ರಯೋಜನ? ಬಳ್ಳಾರಿ ಕಡೆ ಬ್ಲಾಸ್ಟ್ ಎಂದು ತುಂಗಭದ್ರಾ ಪ್ರಾಜೆಕ್ಟ್ ಅಡಿಯಲ್ಲಿ ಒಂದು ಎಲ್ಲಾ ನಾಶ ಮಾಡಿತು. ಅಲ್ಲಿ ೫ ಚೀಲ ನೆಲ್ಲೂ ಕೂಡಾ ಬರಲಿಲ್ಲ ಒಂದು ಎಕರೆಗೆ. ಅವರು ಇದೂ ಕೂಡಾ ಮಾಡಿದ್ದಿರಬೇಕು ಎಂದು ಹೇಳಿದರು. ಇವತ್ತು ಸತ್ತ ಹೆಣಕ್ಕೆ ಇಂಜೆಕ್ಷನ್ ಕೊಟ್ಟರೆ ಏನು ಪ್ರಯೋಜನ? ಇಂಜೆಕ್ಷನ್ ಕೊಟ್ಟಿದ್ರೆ ಭೇಶಿತ್ತು ಎನ್ನುವ ಬದಲು ಸಾಯೋದಕ್ಕೆ ಮೊದಲು ಇಂಜೆಕ್ಷನ್ ಕೊಟ್ಟು ಜೀವ ಉಳಿಸಿದರೆ ಅವ ಹೇಳೋದು ಖರೆ. ಇನ್ನೂ ಹೆಚ್ಚು ಹೇಳುವುದಕ್ಕೆ ನನಗೆ ಅವಕಾಶ ಇಲ್ಲ. ಆದರೂ ಕೂಡಾ ವಿಚಾರ ಮಾಡಿ ಎಲ್ಲೆಲ್ಲಿ ಎಷ್ಟೆಷ್ಟು ಸ್ಟಾಫ್ ಕಡಿಮೆ ಮಾಡಬೇಕು, ಎಲ್ಲೆಲ್ಲಿ ಅಪಾಯಿಂಟ್ ಮಾಡಬೇಕು, ಎಲ್ಲೆಲ್ಲಿ ಅಧಿಕಾರ ವಿಕೇಂದ್ರೀಕರಣ ಮಾಡಬೇಕು ಎಂಬ ಬಗ್ಗೆ ವಿಭಾಗೀಯ ಕೇಂದ್ರಗಳಲ್ಲಿ, ಜಿಲ್ಲಾ ಕೇಂದ್ರ ಗಳಲ್ಲಿ ಅಲ್ಲಿಯ ವ್ಯವಸಾಯಗಾರರ ಪ್ರತಿನಿಧಿಗಳ ಸಲಹೆ ಪಡೆದು ರೈತ ಮುಖ್ಯಸ್ಥರ ಸಲಹೆ ಪಡೆದು ವ್ಯವಸಾಯ ಇಲಾಖೆಯಲ್ಲಿ ಆಮೂಲಾಗ್ರ ಬದಲಾವಣೆ ಆಗೇ ತೀರ ಬೇಕೆಂದು ಮಾನ್ಯ ವ್ಯವಸಾಯ ಮಂತ್ರಿಗಳ ಮುಂದೆ ಹೇಳಿಕೊಳ್ಳುತ್ತೇನೆ. ಇನ್ನು ಪಶು ಸಂಗೋಪನೆ ಬಗ್ಗೆ ಹೇಳುವುದಾದರೆ ನಮಗೆ ವ್ಯವಸಾಯಕ್ಕೆ ಮುಖ್ಯವಾಗಿ ದನಗಳ ಸಂಪತ್ತು ಹಾಗೂ ಅವುಗಳ ಆರೋಗ್ಯ ಹೆಚ್ಚು ಅಗತ್ಯ. ಇವತ್ತು ನಾವು ಉಪವಾಸ ಇದ್ದರೂ ಚಿಂತೆ ಇಲ್ಲ. ಎತ್ತಿಗೆ ಹತ್ತಿ ಕಾಳು ಇರಲೇಬೇಕು, ಇವತ್ತು ಎತ್ತು ಕೊಳ್ಳಲು ರೊಕ್ಕ ಇಲ್ಲ. ಇನ್ನು ಹತ್ತಿ ಕಾಳಿಗೆ ರೊಕ್ಕ ಎಲ್ಲಿಂದ ಬರಬೇಕು. ಇವತ್ತು ದನಗಳ ಔಷಧಿಯ ಬಹಳ ತುಟ್ಟಿಯಾಗಿದೆ, ಇವತ್ತು ಜನಗಳ ಔಷಧಿ ಬೆಲೆ ಒಂದು ರೂ. ಇದ್ದರೆ ಇವುಗಳ ಔಷಧಿ ಬೆಲೆ ೫ ರೂ. ಆಗಿದೆ. ಏಕೆ ಇದು ಇಷ್ಟು ತುಟ್ಟಿ ಎಂಬ ಬಗ್ಗೆ ಮಾನ್ಯ ಸಿದ್ಧರಾಮಯ್ಯನವರು ತಿಳಿದುಕೊಳ್ಳಬೇಕು. ಇವತ್ತು ದನಗಳಿಗೆ ಕೊಡುವ ಔಷಧಿಯನ್ನು ರೊಕ್ಕ ಪಡೆಯದೇ ಸರಬರಾಜು ಮಾಡುವ ವ್ಯವಸ್ಥೆ ಆಗಬೇಕು. ಇವತ್ತು ರೊಕ್ಕ ಇಲ್ಲದೆ ದನ ಸತ್ತರೆ ಆ ರೈತ ಒಂಟಿ ಎತ್ತು ಇಟ್ಟುಕೊಂಡು ಹೇಗೆ ಜೀವನ ಮಾಡಲು ಸಾಧ್ಯ? ಇವತ್ತು ಈ ಔಷಧಿಗಳನ್ನು ತನ್ನಿ ಎಂದು ಬರೆದುಕೊಡುವುದನ್ನು ಬಿಟ್ಟು ಅವರೇ ತಂದು ಅದಕ್ಕೆ ಕೊಡುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ತೋಟಗಾರಿಕೆ ಬಗ್ಗೆ ಹೇಳಬೇಕೆಂದರೆ ಹಣ್ಣು ಹಂಪಲನ್ನು ಬೆಳೆಸತಕ್ಕದ್ದು ಅನಾದಿ ಕಾಲದಿಂದ ಬೆಳೆದುಬಂದಿದೆ. ನಾನೂ ಕೂಡಾ ಬಳ್ಳಾರಿಗೆ ಹೋಗಿ ತುಂಗಭದ್ರಾ ಪ್ರಾಜೆಕ್ಟ್ ಸ್ಕೀಂನಲ್ಲಿ ಏನು ತೋಟ ಮಾಡಿದ್ದಾರೆ ಆ ರೀತಿ ಇಲ್ಲೂ ಅವರು ಬಂದು ಅರ್ಧ ಎಕರೆ, ಒಂದು ಎಕರೆ ಜಾಗದಲ್ಲಿ ಹಣ್ಣು ಹಂಪಲು ಗಿಡ ನೆಡುವ ಯೋಜನೆ ಕಾರ್ಯಗತ ಮಾಡಬೇಕೆಂದು ಹೇಳಿದ್ದೆ. ನಾನು ಈಗ ಕಂಪ್ಲೇಂಟ್ ಮಾಡುತ್ತಿದ್ದೇನೆಂದು ತಿಳಿದುಕೊಳ್ಳಬೇಡಿ. ಇವತ್ತು ಈ ಇಲಾಖೆಯವರು ಎಷ್ಟು ಗಿಡಗಳನ್ನು ಹಾಕಿದ್ದಾರೆ? ಎಷ್ಟು ರೈತರನ್ನು ಕಂಡಿದ್ದಾರೆ, ಹಾಗೂ ಎಷ್ಟು ತೋಟಗಳನ್ನು ಅಭಿವೃದ್ಧಿ ಮಾಡಿದ್ದಾರೆ ಎಂದು ಹೇಳಬೇಕು. ಈ ಒಂದು ಕಾರ್ಯಕ್ರಮವನ್ನು ಯೋಜಿತ ರೀತಿಯಲ್ಲಿ ತರಬೇಕೆಂದು ಮಾನ್ಯ ಸೋಮಶೇಖರ್ ಅವರಿಗೆ ಹೇಳುತ್ತೇನೆ. ಇವತ್ತು ಎಲ್ಲೆಲ್ಲೂ ವ್ಯವಸಾಯದ ಬಗ್ಗೆ ಆಧ್ಯತೆ ದೊರೆಯ ಬೇಕೆಂದು ಹೇಳಿ ಇನ್ನೂ ಹೇಳುವುದಕ್ಕೆ ಎಷ್ಟೋ ವಿಷಯಗಳು ಇದ್ದರೂ ಚರ್ಚೆಗೆ ವೇಳೆ ಇಲ್ಲದ ಕಾರಣ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಬೇಗ ಮುಗಿಸಬೇಕು ವೆಂಕಟರಾಮಯ್ಯನವರೇ.

† ಶ್ರೀ ಆರ್. ವೆಂಕಟರಾಮಯ್ಯ (ಮುಳುಬಾಗಿಲು) —ಮಾನ್ಯ ಅಧ್ಯಕ್ಷರೇ, ಈಗ ತಾನೇ ಬಹಳ ಆವೇಶ ಭರಿತವಾದ ಡಿಸ್ಕಷನ್ ಅನ್ನು ದೀರ್ಘವಾಗಿ ಕೇಳಿದ್ದೇವೆ.

ಅಧ್ಯಕ್ಷರು.—ಅಷ್ಟೊಂದು ಮಾತನಾಡಿದರೂ ಕಳಿತುಕೊಳ್ಳಿ ಎಂದು ಹೇಳಿಸಿ ಕೊಳ್ಳದೆ ಕುಳಿತು ಕೊಂಡಿದ್ದಾರೆ.

ಶ್ರೀ ಆರ್. ವೆಂಕಟರಾಮಯ್ಯ.—ಶ್ರೀ ರೇವಣ್ಣಸಿದ್ದಯ್ಯನವರು ರೈತಸಂಘದ ಪ್ರತಿನಿಧಿಯಾಗಿ ಬಹಳ ಕೆಲಸ ಮಾಡಿದ್ದಾರೆ. ರೈತಸಂಘಕ್ಕಾಗಿ ಬಹಳ ಹೋರಾಟ ಮಾಡಿದವರು. ಇದರಿಂದ ಅವರಿಗೆ ರೈತರ ಬಗ್ಗೆ ಎಷ್ಟೊಂದು ಕಳಕಳಿ ಇದೆ ಎಂಬುದು ಗೊತ್ತಾಯಿತು. ಅವರಿಗೆ ಅದಕ್ಕಾಗಿ ಅಭಿನಂದನೆ ಗಳನ್ನು ಸಲ್ಲಿಸುತ್ತಾ ಕೆಲವು ವಿಷಯಗಳನ್ನು ಮಾತ್ರ ಮಾತನಾಡುತ್ತೇನೆ. ನಮ್ಮ ದೇಶದಲ್ಲಿ ಶೇಕಡ ೮೦ ರಷ್ಟು ಜನ ಕೃಷಿಕರಿದ್ದಾರೆ. ನಮ್ಮದು ಕೃಷಿಕರ ದೇಶ. ಆದರೆ ಈ ಡಿಪಾರ್ಟ್‌ಮೆಂಟಿಗೆ ಇಟ್ಟಿರತಕ್ಕ ಬಜೆಟ್ ನಿಜಕ್ಕೂ ಏನೂ ಸಾಕಾಗುವುದಿಲ್ಲ. ಸೆಂಟ್ರಲ್ ಬಜೆಟ್‌ನಲ್ಲಿ ಕೂಡ ಕೃಷಿಗೆ ಅಲೋಕೇಷನ್ ಕಡಿಮೆ ಮಾಡಿದ್ದಾರೆ. ಅನುಕೂಲವಾಗುವುದು ಏನೂ ಇಲ್ಲ.

ರೈತರ ಬೆಳೆಗೆ ನ್ಯಾಯವಾದ ಬೆಲೆಯನ್ನು ಕೊಡಬೇಕು. ಅದನ್ನು ಈಗಲೂ ಮರೆತಿದ್ದಾರೆ. ೪ ವರ್ಷಗಳ ಹಿಂದೆ ಬಂಗಾರಪ್ಪ ಸಮಿತಿ ಮಾಡಿದ್ದರು. ಆ ಸಮಿತಿ ವರದಿಯನ್ನೂ ಕೊಟ್ಟಿತು. ಈಗ ಮಾನ್ಯ ಪ್ರಕಾಶರವರು ಮಂತ್ರಿಗಳಾಗಿದ್ದಾರೆ. ಅವರ ಹತ್ತಿರ ಎಲ್ಲ ರೆಪೋರ್ಟ್ ಇರಬಹುದು. ಆದರೂ ರೈತರ ಬೆಳೆಗೆ ನ್ಯಾಯವಾಗಿ ಎಷ್ಟು ಬೆಲೆ ಸಿಗಬೇಕೋ ಅಷ್ಟು ಸಿಗುತ್ತಿಲ್ಲ. ೩೦೦ ಜನ ಪ್ರಾಣ ತ್ಯಾಗ ಮಾಡಿದರೂ ಕೂಡ ಅವರ ಬೇಡಿಕೆಗಳು ಹಾಗೇ ಉಳಿದಿವೆ. ಸರ್ಕಾರ ನ್ಯಾಯವಾದ ಬೆಲೆ ಕೊಡುವತ್ತ ಕ್ರಮ ಕೈಗೊಳ್ಳಬೇಕು.

ಇವರ ಅಂಕಿ ಅಂಶಗಳ ಪುಟ ೬ರಲ್ಲಿ ೧೩,೪೪,೬೬,೦೦೦ ಖರ್ಚಿನ ಯೋಜನೆ ಇದೆಯೆಂದು ಹೇಳಿ-ದ್ದಾರೆ. ಆದರೆ ಇದರಲ್ಲಿ ಸಿಂಹಪಾಲು ಸಿಬ್ಬಂದಿಗೇ ಖರ್ಚಾಗಿ ಬಿಡುತ್ತದೆ. ಕೃಷಿ ನಿರ್ದೇಶನಾಲಯದಲ್ಲಿ ೧,೦೨,೦೦೦೦೦ ರೂ. ಸಿಬ್ಬಂದಿಗೇ ವೆಚ್ಚವಾಗುತ್ತಿದೆ. ರಾಜ್ಯದ ಅರ್ಥ ಬೊಕ್ಕಸ ಈ ಸಿಬ್ಬಂದಿಗೇ ಖರ್ಚಾಗುತ್ತಿದೆ. ವಿಶ್ವಬ್ಯಾಂಕಿನಿಂದ ಪಡೆದ ಸಾಲದಲ್ಲೂ ಕೇವಲ ೨ ಕೋಟಿ ೧೨ ಲಕ್ಷ ರೂ. ಮಾತ್ರ ಖರ್ಚಾಗಿದೆ. ಇಷ್ಟೆಲ್ಲ ಆದರೂ ಸಿಬ್ಬಂದಿ ನಿಷ್ಠೆಯಿಂದ ಕಳಕಳಿಯಿಂದ ಕೆಲಸ ಮಾಡುತ್ತಿಲ್ಲ. ಅಭಿವೃದ್ಧಿ ಕೆಲಸಗಳು ಸಮರ್ಪಕವಾಗಿ ತ್ವರಿತವಾಗಿ ನಡೆಯುತ್ತಿಲ್ಲ ಎಂಬುದನ್ನು ಮಾನ್ಯ ಪ್ರಕಾಶರಿಗೆ ಹೇಳ ಬೇಕಾಗುತ್ತದೆ. ಜಿಲ್ಲಾಮಟ್ಟದ ಯೋಜನಾ ಸಿಬ್ಬಂದಿಗೆ ೫೫ ಲಕ್ಷ ಹೋಗುತ್ತಿದೆ. ೫೯೯ ಜನ ಅಧಿಕಾರಿಗಳೇ ಇದ್ದಾರೆ. ಮತ್ತು ಒಟ್ಟು ೩೦೨೮ ಸಿಬ್ಬಂದಿಯಿದ್ದಾರೆ. ಆದರೂ ರೈತರಿಗೆ ಇದರಿಂದ ಏನೂ ಪ್ರಯೋಜನವಾಗುತ್ತಿಲ್ಲ.

ಇನ್ನು ಬೀಜ ಉತ್ಪಾದನಾ ನಿಗಮ ಒಂದು ಕರ್ಮಕಾಂಡ. ಅದರ ಬಗ್ಗೆ ಶ್ರೀ ಕೆ. ಹೆಚ್. ಪಾಟೀಲರು ಸ್ಪಷ್ಟವಾಗಿ ಹೇಳಿದ್ದಾರೆ. ೨,೩೪,೪೪,೦೦೦ ರೂ. ಗಳ ಒಂದು ಯೋಜನೆ ಇದೆ. ಮಾನ್ಯ ಪ್ರಕಾಶರವರು ಬಂದ ಮೇಲೆ ಸ್ವಲ್ಪ ಸರಿಮಾಡಲು ಯತ್ನಿಸಿದ್ದಾರೆ. ಅವರು ಹಿಂದೆ ಸೋಷಲಿಸ್ಟ್ ಆಗಿದ್ದರು. ಬೀಜ ಉತ್ಪಾದನಾ ಕೇಂದ್ರದಲ್ಲಿ ಬಹಳ ಅನ್ಯಾಯವಾಗುತ್ತಿದೆ. ೪೫೦ ರೂ. ಗೆ ಶೇಂಗಾವನ್ನು ರೈತರಿಂದ ಖರೀದಿ ಮಾಡಿ ಅದನ್ನೇ ಅನಂತರ ೮೫೦ ರೂ. ಗೆ ಮಾರುತ್ತಾರೆ. ಹಾಗೆಯೇ ಜೋಳವನ್ನು ೩೨೦ಕ್ಕೆ ಕೊಂಡು ೫೮೦ಕ್ಕೆ ಮಾರುತ್ತಾರೆ. ಇಷ್ಟೇ ಅಲ್ಲದೆ, ಈಗ ರೈತರ ಹತ್ತಿರ ಕೊಂಡು ಕೊಳ್ಳುವು-ದನ್ನು ಬಿಟ್ಟು ಆಂಧ್ರ, ತಮಿಳುನಾಡುಗಳಿಗೆ ಹೋಗಲು ಶುರುಮಾಡಿದ್ದಾರೆ. ಜಯಲಕ್ಷ್ಮಿ ಬೀಜಗಳನ್ನು ನಿಗಮ ಖರೀದಿಸುವ ಅವಶ್ಯಕತೆ ಇಲ್ಲ.

ರಾಸಾಯನಿಕ ಗೊಬ್ಬರಕ್ಕಾಗಿ ೫,೮೦,೦೦,೦೦೦ ರೂ. ಕಾದಿರಿಸಲಾಗಿದೆ ಎಂದು ಪೇಜ್ ೧೬ರಲ್ಲಿ ಹೇಳಿದೆ. ಆಗ್ರೋ ಇಂಡಸ್ಟ್ರೀಸ್ ನ್ಯಾಯವಾಗಿ ನೋಡಿದರೆ ಲಾಭದಲ್ಲಿ ನಡೆಯಬೇಕು. ರಿಗ್ಸ್ ಕೊಡು ತ್ತೇವೆ ಪಂಪ್ಸ್ ಕೊಡುತ್ತೇವೆ ಎಂದು ಹೇಳುತ್ತಾರೆ. ಆದರೆ ವ್ಯವಸಾಯ ಮಾಡುವವನಿಗೆ ಗೊತ್ತು ಅದು ಹೇಗೆ ಕೆಲಸ ಮಾಡುತ್ತಿವೆ ಎಂದು. ನಮ್ಮ ಕೆಎಸ್ಆರ್‌ಟಿಸಿ ತರಹ ಈ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್. ರೈತರಿಗೆ ಏನು ಅನುಕೂಲ ಮಾಡಿಕೊಡಬೇಕಾಗಿತ್ತೋ ಅದನ್ನು ಅದು ಮಾಡಿ ಕೊಡುತ್ತಿಲ್ಲ. ಅಧಿಕಾರಿಗಳು ಇದರಲ್ಲಿ ಸೇರಿಕೊಂಡು ಲಾಭ ಮಾಡಿಕೊಳ್ಳುತ್ತಿದ್ದಾರೆ ಅಷ್ಟೇ.

ಇನ್ನು ಕೃಷಿ ನಿರ್ದೇಶಕರ ಕಚೇರಿಯಲ್ಲಿ ೧೯೮೦ರಲ್ಲಿ ಒಬ್ಬರೇ ಡೈರೆಕ್ಟರ್ ಇದ್ದರು. ಆಗ ಸಿಓಡಿ ಎನ್‌ಕ್ವಯರಿ ಆಗಿತ್ತು. ಇನ್ನೊಬ್ಬ ಅಧಿಕಾರಿ ಮೇಲೂ ಸಿಓಡಿ ಎನ್‌ಕ್ವಯರಿ ಆಗಿದ್ದು ಪ್ರಕಾಶರಿಗೆ ಗೊತ್ತಿರುತ್ತದೆ. ಶ್ರೀ ರೇವಣ್ಣಸಿದ್ದಯ್ಯನವರು ಹೇಳಿದ ಹಾಗೆ ಅಷ್ಟೂ ಅಧಿಕಾರಿಗಳು ಬೆಂಗಳೂರು ಕಚೇರಿಯಲ್ಲೇ ಇದ್ದಾರೆ. ಎಲ್ಲ ಕೆಲಸ ಕಾರ್ಯಗಳನ್ನು ಇಲ್ಲಿಂದಲೇ ನಡೆಸುತ್ತಿದ್ದಾರೆ. ೧೧ ಜನ ಜಯಿಂಟ್ ಡೈರೆಕ್ಟರ್ಸ್ ಇದ್ದಾರೆ. ಇಷ್ಟೊಂದು ಜನರನ್ನು ಏಕೆ ಒಂದೇ ಕಡೆ ಕಾನ್‌ಸೆಂಟ್ರೇಟ್ ಮಾಡಿದ್ದೀರಿ ? ಟಿ.ವಿ. ಸಂಪತ್ ಅನ್ನುವವರನ್ನು ಡೈರೆಕ್ಟರ್ ಮಾಡಿದ್ದಾರೆ. ಇಷ್ಟೊಂದು ಜನ ಡೈರೆಕ್ಟರ್ಸ್ ಎಲ್ಲ ಇದ್ದೂ ಏನೂ ಕೆಲಸ ಮಾಡುತ್ತಿಲ್ಲ. ಇವರೆಲ್ಲ ಜಿಲ್ಲೆಗಳಿಗೆ ಹೋಗಿ ಕೆಲಸ ಕಾರ್ಯಗಳ ಉಸ್ತುವಾರಿ ನೋಡುವ ವ್ಯವಸ್ಥೆ ಇಲ್ಲವೇ ? ಎಲ್ಲ ಅಧಿಕಾರಿಗಳೂ ಬೆಂಗಳೂರಿನಲ್ಲಿ ಲ್ಯಾಬರೇಟರಿಯಲ್ಲಿ ಇದ್ದುಕೊಂಡು ಗಾಗಿ ಕಾಳನ್ನು ಎಕ್ಸ್‌ಪೆರಿಮೆಂಟ್ ಮಾಡಿಕೊಂಡು ಹಾಯಾಗಿದ್ದಾರೆ. ಕೃಷಿ ಇಲಾಖೆಯೇ ಯಾವ ಕಾರ್ಯ ಕ್ರಮವನ್ನೂ ತೆಗೆದುಕೊಳ್ಳದೇ ಇರುವುದರಿಂದ ಬೆಳೆಗೆ ರೋಗ ತಗಲುವುದು ಜಾಸ್ತಿಯಾಗಿ ಬೆಳೆಗಳೆಲ್ಲ ಹಾಳಾಗುತ್ತಿವೆ.

ತುಮಕೂರು ಜಿಲ್ಲೆಯಲ್ಲಿ ತೆಂಗು ಶೇಂಗಾ ಎಲ್ಲ ಪೂರ್ತಿ ನಷ್ಟವಾಗಿದೆ. ಎಲ್ಲ ಹೋಬಳಿಯಲ್ಲೂ ೩೦ ಪರ್ಸೆಂಟ್, ೫೦ ಪರ್ಸೆಂಟ್ ಸಬ್ಸಿಡಿ ಕೊಡುವುದಾಗಿ ಹೇಳುತ್ತಿದ್ದೀರಿ. ಆದರಿಂದ ಏನೂ ಪ್ರಯೋಜನವಿಲ್ಲ.

ತಾಲ್ಲೂಕು ಮಟ್ಟದಲ್ಲಿರಬೇಕಾದ ಬೀಜ ನಿಗಮ ಮಂಡಲಿ ಬೆಂಗಳೂರಿನಲ್ಲಿದೆ ಅದು ತಾಲ್ಲೂಕು ಮಟ್ಟಕ್ಕೆ ಹೋಗಬೇಕಾಗಿದೆ. ಬೀಜಗಳು ರೈತರಿಗೆ ಸಿಗುವ ಅವಕಾಶ ಮಾಡಿಕೊಡಬೇಕು. ಕೃಷಿ ನಿರ್ದೇಶನಾಲಯದಲ್ಲಿ ಕೇಂದ್ರೀಕೃತವಾಗಿರುವ ಅಧಿಕಾರ ಹಳ್ಳಿಗಳಿಗೆ ಹೋಗಬೇಕು. ಜಿಲ್ಲಾ ಮಟ್ಟದಲ್ಲಿ ವ್ಯಾಪಕವಾಗಿ ಇದೆಲ್ಲ ಆಗಬೇಕು.

ಕರ್ನಾಟಕ ಅಗ್ರೋ ಪ್ರೋಟಿನ್ಸ್ ಬಗ್ಗೆ ಬೇಕಾದಷ್ಟು ಎನ್‌ಕ್ವಯರಿ ಆಗಿದೆ. ಅಲ್ಲಿ ಮೋಸ ನಡೆಯುತ್ತಿದೆ. ಕ್ರಿಮಿನಾಶಕಗಳು ಸರಿಯಾಗಿ ಒದಗುತ್ತಿಲ್ಲ. ಶೇಕಡ ೧೦ ರಷ್ಟು ಕ್ರಿಮಿನಾಶಕ ಕೊಟ್ಟರೆ ರೋಗವನ್ನು ಹೇಗೆ ಕಂಟ್ರೋಲ್ ಮಾಡುವುದು ಹೇಳಿ ?

ಇನ್ನು ಅಗ್ರಿಕಲ್ಚರ್ ಅಸಿಸ್ಟೆಂಟ್ಸ್‌ಗಳನ್ನು ಹೆಚ್ಚಿಗೆ ಅಪಾಯಿಂಟ್ ಮಾಡುವ ಬಗ್ಗೆ ಗಮನಕೊಡಬೇಕು.

೬–೩೦ ಪಿ. ಎಂ.

ಸಾಧಾರಣವಾಗಿ ಎಲ್ಲ ಮಾನ್ಯ ಸದಸ್ಯರಿಗೂ ಗೊತ್ತಿದೆ. ಅಗ್ರಿಕಲ್ಚರಲ್ ಅಸಿಸ್ಟೆಂಟ್ಸ್‌ನ್ನು ಸುಮಾರು ೧೫೦–೨೦೦ ಜನರನ್ನು ನೇಮಕ ಮಾಡಬೇಕೆಂದಿದೆ. ಆದರೆ ಅವರನ್ನು ಇನ್ನೂ ನೇಮಕ ಮಾಡಿಲ್ಲ. ಮೊನ್ನೆ ಲಂಕೇಶ್ ಪತ್ರಿಕೆಯಲ್ಲಿ (೫–೨–೮೫) ಇದರ ಬಗ್ಗೆ ಒಂದು ದೊಡ್ಡ ಶೀರ್ಷಿಕೆಯೇ ಬಂತು. ಅದನ್ನು ಇವರು ಗಮನಿಸಿದಂತೆ ಕಾಣುವುದಿಲ್ಲ. ಇದರ ಆಗು ಹೋಗುಗಳನ್ನು ನೋಡಬೇಕು ಹೊರ ರಾಜ್ಯದವರು ಹೈಬ್ರೀಡ್ ಜೋಳವನ್ನು ಜಾಸ್ತಿ ಕೊಂಡು ಕೊಂಡು ಹೋಗುತ್ತಾರೆಂದು ಹೇಳಿದರು. ಇನ್ನೂ ಸುಮಾರು ೫–೧೦ ಪರ್ಸೆಂಟ್ ಸುಧಾರಿತ ಬೀಜಗಳನ್ನು ರೈತರಿಗೆ ಕೊಟ್ಟು ಸಹಾಯ ಮಾಡಬೇಕೆಂದು ಹೇಳಬಯಸುತ್ತೇನೆ.

ಇನ್ನು ಪಶುಸಂಗೋಪನಾ ಇಲಾಖೆಯ ಬಗ್ಗೆ ಹೇಳುವುದಾದರೆ ಇದು ಅರಣ್ಯದಲ್ಲಿರತಕ್ಕ ಒಂದು ವ್ಯವಸ್ಥೆ ಇದೆ. ಕಾಡಿನಲ್ಲಿ ಸಿಂಹವನ್ನು ರಾಜನನ್ನಾಗಿ ಮಾಡಿ ಅದಕ್ಕೆ ಮಂತ್ರಿ ಎಂದರೆ ನರಿ ಮತ್ತಿತರ ಪ್ರಾಣಿಗಳು ಇರುವಂತೆ ಇಲ್ಲಿಯೂ ಕೂಡ ಮಾಡಿದ್ದಾರೆ. ನಮಗೆ ಸ್ವಾತಂತ್ರ್ಯ ಬಂದು ೩೭ ವರ್ಷಗಳಾದುವು. ಅವತ್ತಿನಿಂದ ಇವತ್ತಿನವರೆಗೂ ಈ ಇಲಾಖೆಯಲ್ಲಿ ಬಡ್ತಿ ಎಂಬುದೇ ಇಲ್ಲ. ಅವರು ನೇಮಕವಾದ ದಿನದಿಂದ ಇವತ್ತಿನವರೆಗೂ ಅದೇ ಹುದ್ದೆಯಲ್ಲೇ ಇದ್ದಾರೆ ಇನ್ನು ಕೆಲವರನ್ನು on your own pay and on your own scale ಎಂದು ಆರ್ಡರನ್ನು ಕೊಟ್ಟು ನೇಮಕ ಮಾಡಿಕೊಂಡಿದ್ದಾರೆ. ಅಸಿಸ್ಟೆಂಟ್ ಡೈರೆಕ್ಟರ್‌ರವರನ್ನು ಮಾತ್ರ ಅಸಿಸ್ಟೆಂಟ್ ಸರ್ಜನ್ ಎಂದು ಬದಲಾವಣೆ ಮಾಡಿದ್ದಾರೆ ಅಷ್ಟೆ. ನಾನು ಈ ವಿಚಾರದಲ್ಲಿ ಇಲಾಖೆಯ ನಿರ್ದೇಶಕರ ಹತ್ತಿರ ಮಾತನಾಡಿದ್ದೇನೆ. ಆದರೂ ಅದು ಯಾವುದೇ ಪ್ರಯೋಜನವೂ ಆಗಲಿಲ್ಲ. ಆದರೂ ಬದಲಾವಣೆ ಮಾಡುತ್ತೇವೆಂದು ಹೇಳಿದ್ದಾರೆ. ಬಿ. ವಿ. ಎಸ್. ಸಿ. ಮಾಡಿಕೊಂಡು ಬಂದ ಒಬ್ಬ ವ್ಯಕ್ತಿ ಅಸಿಸ್ಟೆಂಟ್ ಡೈರೆಕ್ಟರ್ ಆಗಿ ನೇಮಕ ಆದರೆ ಮತ್ತೆ ಆತ ಅಲ್ಲಿಂದ ಮುಂದಕ್ಕೆ ಹೋಗುವುದಕ್ಕೆ ಅವಕಾಶವೇ ಇಲ್ಲದೆ ಅಲ್ಲೇ ಇರಬೇಕಾಗಿದೆ. ಇಂಥ ಒಂದು ವ್ಯವಸ್ಥೆ ಹಿಂದೆ ಬ್ರಿಟಿಷರ ಕಾಲದಲ್ಲಿ ಇತ್ತೋ ಏನೋ ನನಗೆ ಗೊತ್ತಿಲ್ಲ. ಡೈರೆಕ್ಟರ್‌ರವರಲ್ಲಿ ಏನಾದರೂ ಅನರ್ಹತೆ ಇದ್ದರೆ ಅವರನ್ನು ಡೆಪ್ಯುಟಿ ಡೈರೆಕ್ಟರೋ ಅಥವಾ ಅಸಿಸ್ಟೆಂಟ್ ಡೈರೆಕ್ಟರೋ ಆಗಿ ನೇಮಕ ಮಾಡುತ್ತಿದ್ದರಂತೆ. ಒಂದು ವೇಳೆ ಇವರಲ್ಲಿಯೂ ಕೂಡ ಈ ರೀತಿಯ ಒಂದು ಡಿಸ್‌ಕ್ವಾಲಿಫಿಕೇಷನ್ ಇದ್ದರೆ ಇವರನ್ನೂ ಅದೇ ರೀತಿ ಮಾಡಲಿ ಅದಕ್ಕೆ ನಾನು ಒಪ್ಪಿಕೊಳ್ಳುತ್ತೇನೆ. ಈ ಇಲಾಖೆಯಲ್ಲಿ ಬಡ್ತಿಯ ಅವಕಾಶ ಇಲ್ಲದಿರುವುದನ್ನು ನೋಡಿ ನನಗೆ ಆಶ್ಚರ್ಯವಾಗುತ್ತಿದೆ. ನಾನು ಆಗಲೇ ಹೇಳಿದಂತೆ ಇದು ಪ್ರಾಣಿಗಳನ್ನು ಕಂಟ್ರೋಲ್ ಮಾಡತಕ್ಕ ಇಲಾಖೆ ಅರಣ್ಯದಲ್ಲಿ ಸಿಂಹವೇ ರಾಜ, ನರಿ ಮತ್ತಿತರ ಪ್ರಾಣಿಗಳೇ ಮಂತ್ರಿಗಳು. ಇದೇ ರೀತಿ ಈ ಇಲಾಖೆಯಲ್ಲಿಯೂ ಕೂಡ ನೌಕರ ವರ್ಗದವರು ಇದ್ದಾರೆಂದು ಕಾಣುತ್ತದೆ. ಬೇರೆ ಇಲಾಖೆಗಳಿಗೆ ಹೋಲಿಕೆ ಮಾಡಿದರೆ ಇದು ನಿಜಕ್ಕೂ ಅಪಮಾನವಾಗುತ್ತದೆ. ನಾನು ಮಾನ್ಯ ಸಚಿವರಾದ ಸಿದ್ದರಾಮಪ್ಪನವರ ಬಗ್ಗೆ ಹೇಳುತ್ತಿಲ್ಲ...

ಶ್ರೀ ಬಿ. ಎಂ. ಇದಿನಬ್ಬ.—ಇಲ್ಲಿ ಸಿಂಹ ಯಾರು ? ನರಿ ಯಾರು ?

ಶ್ರೀ ಆರ್. ವೆಂಕಟರಾಮಯ್ಯ.—ಡೈರೆಕ್ಟರ್‌ರವರೇ ಸಿಂಹ ರಿಂಗ್ ಮಾಸ್ಟರ್ ಮಂತ್ರಿಗಳಾಗಿದ್ದಾರೆ. ಇವತ್ತಿನವರೆಗೂ ಡೆಪ್ಯುಟಿ ಡೈರೆಕ್ಟರ್‌ರವರನ್ನು ನೇಮಕ ಮಾಡಿಲ್ಲ. ಇವರನ್ನು ಯಾರು ಕಂಟ್ರೋಲ್ ಮಾಡಬೇಕೋ ಗೊತ್ತಿಲ್ಲ. ಅದೇ ರೀತಿ ಜಾಯಿಂಟ್ ಡೈರೆಕ್ಟರ್‌ಗಳನ್ನೂ ಕೂಡ ನೇಮಕ

ಮಾಡಿಲ್ಲ. ಡಿವಿಜನಲ್ ಡೈರೆಕ್ಟರ್, ಅಸಿಸ್ಟೆಂಟ್ ಡೈರೆಕ್ಟರ್‌ಗಳನ್ನೂ ನೇಮಕ ಮಾಡಿಲ್ಲ. ಬಿ. ವಿ. ಎಸ್‌ಸಿ ಮಾಡಿಕೊಂಡವರು ಮೊದಲಿನಿಂದಲೂ ಕೂಡ ತಮ್ಮನ್ನು ಎಂ. ಬಿ. ಬಿ. ಎಸ್. ಮಾಡಿಕೊಂಡವರಿಗೆ ಸಮಾನವೆಂದು ಪರಿಗಣಿಸಬೇಕೆಂದು ಕೇಳುತ್ತಲೇ ಬರುತ್ತಿದ್ದಾರೆ. ಬಿ. ವಿ. ಎಸ್. ಸಿ. ಮಾಡಿಕೊಂಡವರನ್ನು ಯಾರೋ ಒಬ್ಬ ಬಿ. ಡಿ. ಒ. ರವರ ಕೈಕೆಳಗೆ ಕೆಲಸ ಮಾಡುವಂತೆ ನೇಮಕ ಮಾಡಿದ್ದಾರೆ. ಇದು ಒಂದು ಬಾಧೆಯಾಗಿದೆ. ಈ ಬಿ. ಡಿ. ಒ. ಆದ ವ್ಯಕ್ತಿ ಹಿಂದೆ ಯಾವಾಗಲೋ ಎಸ್. ಎಸ್. ಎಲ್‌ಸಿ ಪಾಸ್ ಮಾಡಿಕೊಂಡು ಕೆಲಸಕ್ಕೆ ಸೇರಿ ಸಾಕಷ್ಟು ಸರ್ವೀಸ್ ಆದ ಮೇಲೆ ಬಿ. ಡಿ. ಒ. ಆಗಿರುತ್ತಾನೆ. ಇಲ್ಲವೇ ಯಾವುದೋ ಒಂದು ಡಿಗ್ರಿ ಮಾಡಿಕೊಂಡಿರುತ್ತಾನೆ. ಇವನ ಕೈ ಕೆಳಗೆ ಬಿ. ವಿ. ಎಸ್. ಸಿ. ಮಾಡಿಕೊಂಡವರು ಬಂದು ಕೆಲಸ ಮಾಡಬೇಕಾಗಿದೆ. ಸಂಬಳದಲ್ಲಿ ತೆಗೆದುಕೊಂಡರೆ ಬಿ. ಡಿ. ಒ. ಗೆ ೧೫೦೦ ರೂಪಾಯಿ ತಿಂಗಳಿಗೆ ಬರುತ್ತಿದ್ದರೆ, ಬಿ. ವಿ. ಎಸ್. ಸಿ. ಮಾಡಿಕೊಂಡವರಿಗೆ ೨೦೦೦ ರೂಪಾಯಿ ತಿಂಗಳಿಗೆ ಸಂಬಳ ಬರುತ್ತಿರುತ್ತದೆ. ಇವರನ್ನು ಎಕ್ಸ್‌ಟೆನ್‌ಷನ್ ಆಫೀಸರ್ ಎಂದು ಮಾಡಿ ಐ. ಆರ್. ಡಿ. ಪಿ. ಯಲ್ಲಿ ಫಲಾನುಭವಿಗಳನ್ನು ಗುರ್ತಿಸುವುದು ಅಥವಾ ಬೇರೆ ಯಾವುದಾದರೂ ಒಂದು ಕೆಲಸವನ್ನು ಮಾಡುವುದು ಎಂದು ಗೊತ್ತುಪಡಿಸಿರುತ್ತಾರೆ. ಇದು ಸರಿಯಲ್ಲ. ಬಿ. ಡಿ. ಒ. ಕೈಕೆಳಗೆ ಅವರು ಕೆಲಸ ಮಾಡುವುದು ಸರಿಯಲ್ಲ. ಇದನ್ನು ತಪ್ಪಿಸಬೇಕು. ಈ ಪಶುವೈದ್ಯರಿಗೆ ಟೈಂ ಬಾಂಡ್ ಬಡ್ತಿ ಕೂಡ ಇಲ್ಲ. ಇದನ್ನು ಕೊಡುವ ವ್ಯವಸ್ಥೆ ಮಾಡಬೇಕು ಇದರ ಜೊತೆಗೆ ಹೆಚ್ಚಿನ ಶಿಫಾರಸ್ಸು ಇರುವವರನ್ನು ಯಾರನ್ನಾದರೂ ತಂದು ಪ್ರೊಬೇಷನರ್ ಆಗಿ ನೇಮಕ ಮಾಡಿಕೊಂಡು ಇವರಿಗಿಂತ ಮೇಲೆ ಹಾಕುತ್ತಾರೆ. ಇದು ಯಾರಿಗೂ ಸಮಾಧಾನ ತರತಕ್ಕದ್ದಲ್ಲ. ಆದ್ದರಿಂದ ಮಾನ್ಯ ಸಚಿವರು ಇದರ ಕಡೆ ಗಮನ ಕೊಡಬೇಕು.

ಇನ್ನು ಫ್ಲಡ್ ಒನ್ ಅಂಡ್ ಟೂ ಬಂದಿದೆ. ಇದು ಸಂತೋಷದ ವಿಷಯ. ಆದರೆ ಹಸು ಎಮ್ಮೆಗಳಿಗೆ ರೋಗ ಬಂದರೆ ಅದಕ್ಕೆ ಸರಿಯಾದ ಔಷಧಿಗಳನ್ನು ಕೊಡುವವರು ಯಾರೂ ಇಲ್ಲ. ಒಂದು ಸಾರಿ ನಮ್ಮ ಕೋಲಾರ ಜಿಲ್ಲೆಯಲ್ಲಿ ಕಾಲು ಮತ್ತು ಬಾಯಿ ರೋಗ ಬಂದು ಸುಮಾರು ೨೧ ಸಾವಿರ ಧನಗಳು ಸತ್ತು ಹೋದವು. ೧೦ ರೂಪಾಯಿನ ಸುಮಾರು ೨೦೦ ಔಷಧಿಗಳನ್ನು ಸರ್ಕಾರದವರು ಕೊಟ್ಟರು. ಇದನ್ನು ಸರ್ಕಾರದವರು ಸರಬರಾಜು ಮಾಡಿದ್ದಾರೆಂದು ಜನರಿಗೆ ಗೊತ್ತಾಗುವುದು ಹೇಗೆ ? ಪಶು ಸಂಶೋಧನಾ ಇಲಾಖೆಯವರು ಇದನ್ನು ಪ್ರಚಾರ ಮಾಡಬೇಕು. ಅವರಿಗೆ ಪ್ರಚಾರಕ್ಕೋಸ್ಕರ ವ್ಯಾನ್ ಕೊಟ್ಟಿದ್ದೀರಿ. ಆದರೆ ಅದಕ್ಕೆ ಬೇಕಾದ ಡೀಸಲ್ ಇಲ್ಲ. ಕೇಳಿದರೆ ನಮಗೆ ಡೀಸಲ್ ಕೊಟ್ಟಿಲ್ಲ, ನಾವು ಹೇಗೆ ಪ್ರಚಾರ ಮಾಡಬೇಕೆಂದು ಹೇಳುತ್ತಿದ್ದಾರೆ. ಈಗ ಈ ಫ್ಲಡ್ ಒನ್ ಅಂಡ್ ಟೂ ನಮ್ಮ ಸಚಿವರಾದ ಸಿದ್ಧರಾಮಯ್ಯನವರ ಕೈಯಲ್ಲಿದೆ. ಈಗ ಹಾಲಿನ ರೇಟು ಬಹಳ ಕಡಿಮೆ ಇದೆ. ಇದಕ್ಕೆ ಸಬಿಡಿ ಕೊಡಬೇಕು. ನಾವು ೧ ಲೀಟರ್‌ಗೆ ೧ ರೂಪಾಯಿ ಕೇಳಿದರೆ ಅವರು ೫೦ ಪೈಸೆ ಕೊಡುತ್ತೇವೆಂದು ಹೇಳುತ್ತಾರೆ. ನಾನಾದರೂ ಹೇಳುತ್ತೇನೆ ಹಾಲಿಗೆ ನ್ಯಾಯವಾದ ಬೆಲೆ ಸಿಕ್ಕಬೇಕು. ಇವತ್ತು ನಮಗೆ ಸಿಕ್ಕಬೇಕಾದ ಹಣ ಮಧ್ಯವರ್ತಿಗಳಿಗೆ ಹೋಗುತ್ತಿದೆ. ಇದು ತಪ್ಪಬೇಕು. ಈಗ ನಮ್ಮ ಕಡೆ ಕ್ಷಾಮ ಬಂದಿದೆ. ಈ ಬರಗಾಲ ಪ್ರದೇಶದಲ್ಲಿ ಮಿಲ್ಕ್ ಡಿಪೋಗಳನ್ನು ಮಾಡಬೇಕು. ಚಿಲ್ಲಿಂಗ್ ಸೆಂಟರ್‌ಗಳನ್ನು ಮಾಡಬೇಕೆಂದು ಕಳೆದ ಸಾರಿಯೇ ಹೇಳಿದ್ದೇನೆ. ಆದರೆ ಇದುವರೆಗೂ ಅದನ್ನು ಮಾಡಲಿಲ್ಲ. ಇದಕ್ಕೆ ಕಾರಣ ಏನೆಂದು ನಮಗೆ ಗೊತ್ತಿಲ್ಲ. ಕೋಲಾರ ಅಥವಾ ಮುಳುಬಾಗಿಲಿನಲ್ಲಿ ಇದನ್ನು ಮಾಡಿದರೆ ಸಂತೋಷ. ಡಿ. ಆರ್, ಡಿ. ಎಸ್. ನವರಿಗೆ ೧೫ ಲಕ್ಷ ರೂಪಾಯಿ ಕೊಟ್ಟರೂ ಇದುವರೆಗೂ ಈ ಕೆಲಸ ಆಗಿಲ್ಲ. ಅವರು ಇದನ್ನು ಉಪಯೋಗಿಸಿಕೊಳ್ಳುವುದಕ್ಕೆ ಶಕ್ತಿಯಿಲ್ಲ ಎಂದರೆ ನಮಗೆ ನಾಚಿಕೆಯಾಗುತ್ತದೆ. ನಮ್ಮ ಹಳ್ಳಿಗಳಲ್ಲಿ ಸೊಸೈಟಿಗಳನ್ನು ಓಪನ್ ಮಾಡಬೇಕು. ಚಿಲ್ಲಿಂಗ್ ಸೆಂಟರ್‌ಗಳನ್ನು ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ಪ್ರಮುಖ ಇಲಾಖೆ ಎಂದರೆ ತೋಟಗಾರಿಕೆ ಇಲಾಖೆ. ಇದರ ಬಗ್ಗೆ ಎಷ್ಟು ಹೇಳಿದರೂ ಸಾಲದು. ನಮ್ಮ ಜಿಲ್ಲೆಯಲ್ಲಿ ತೋಟಗಾರಿಕೆ ಬಹಳ ಇದೆ. ಶೇಕಡ ೩೦ರಷ್ಟು ಭೂಮಿಯನ್ನು ಈ ತೋಟಗಾರಿಕೆಗಾಗಿ ಉಪಯೋಗಿಸಿಕೊಳ್ಳಲಾಗಿದೆ. ಸುಮಾರು ೧೦ ಲಕ್ಷ ಎಕರೆಯಲ್ಲಿ ತೋಟಗಾರಿಕೆ ನಡೆಯುತ್ತಿದೆ. ೮೫೦ ಕೋಟಿ ರೂಪಾಯಿ ಮೌಲ್ಯದ ಬೆಳೆಯನ್ನು ಬೆಳೆಯುತ್ತಿದೆಯೆಂದು ಹೇಳಿರುವುದು ಬಹಳ ಸಂತೋಷ. ಕೋಲಾರ ಜಿಲ್ಲೆಯ ಜನರು ಇದರಿಂದಲೇ ಬದುಕುತ್ತಿದ್ದಾರೆ. ಆಂಧ್ರ ತಮಿಳುನಾಡಿಗೂ ಕೂಡ ನೂರಾರು ಲಾರಿ ಲೋಡ್‌ನ್ನು ಕಳುಹಿಸಿಕೊಡುತ್ತಿದ್ದೆ ಅಲ್ಲಿಯೂ ಕೂಡ ನಮಗೆ ಒಳ್ಳೆಯ ಮಾರುಕಟ್ಟೆ ಇದೆ. ಒಂದೊಂದು ಸಾರಿ ಟೊಮ್ಯಾಟೊ ಒಂದು ಕೆ. ಜಿ. ಗೆ ೫ ರೂಪಾಯಿ

ಆಗುತ್ತದೆ. ಮತ್ತೆ ಕೆಲವು ಸಾರಿ ಒಂದು ಕೆ. ಜಿ. ಗೆ ೫೦ ಪೈಸೆ ಆಗುತ್ತದೆ. ಆದ್ದರಿಂದ ನಾನು ಒಂದು ಮಾತನ್ನು ಹೇಳುವುದಾದರೆ ಇದಕ್ಕೆ ಸಪೋರ್ಟ್ ಪ್ರೈಸ್‌ನ್ನು ಸರ್ಕಾರದವರು ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ. ನಮಗೆ ಕೋಲ್ಡ್ ಸ್ಟೋರೇಜ್‌ನ್ನು ಕಟ್ಟಿಸಿಕೊಡಬೇಕೆಂದು ನಾವು ಮೊದಲಿನಿಂದಲೂ ಕೇಳುತ್ತಲೇ ಇದ್ದೇವೆ. ಇತ್ತೀಚೆಗೆ ನಮ್ಮ ಕೋಲಾರ ಜಿಲ್ಲೆಯಲ್ಲಿ ೨ ಕೋಲ್ಡ್ ಸ್ಟೋರೇಜ್ ಪ್ಲಾಂಟನ್ನು ಕಟ್ಟಿಸಿದ್ದೀರಿ.

ಏನು ದುರಾದೃಷ್ಟವೋ ಏನೋ, ೨೦ ಲಕ್ಷ ರೂಪಾಯಿ ವೆಚ್ಚದ ಕೋಲ್ಡ್ ಸ್ಟೋರೇಜ್ ಪ್ಲಾಂಟನ್ನು ಚಿಕ್ಕಬಳ್ಳಾಪುರದಲ್ಲಿ ಮತ್ತು ಕೋಲಾರದಲ್ಲಿ ಇನ್ನೂ ಕಟ್ಟಿಸುತ್ತಲೇ ಇದ್ದಾರೆ. ಸೋಮ ಶೇಖರ್‌ರವರು ವಯಸ್ಸಿನಲ್ಲಿ ಬಹಳ ಚಿಕ್ಕವರು. ಅವರು ಹುಟ್ಟಿದಾಗಿನಿಂದ ಅದನ್ನು ಕಟ್ಟುತ್ತಿದ್ದಾರೆ, ಆದರೂ ಇನ್ನೂ ಕಂಪ್ಲೀಟ್ ಆಗಿಲ್ಲ. ಖಾಸಗಿಯವರಾಗಿದ್ದರೆ ಕಂಟ್ರಾಕ್ಟರನ್ನು ಹ್ಯಾಂಗ್ ಮಾಡುತ್ತಿದ್ದರೂ. ಇವರಿಗೆ ಇದು ಏಕೆ ಅರ್ಥವಾಗುತ್ತಿಲ್ಲವೆಂದು ಗೊತ್ತಿಲ್ಲ. ನಾನು ಪರ್ಸನಲ್ ಆಗಿ ಕೂಡ ಹೋಗಿ ಹೇಳಿದ್ದೇನೆ. ಒಂದೊಂದಕ್ಕೆ ೨೦ ಲಕ್ಷ ರೂಪಾಯಿ ಖರ್ಚು ಮಾಡಿ ಹತ್ತು ವರ್ಷ ಹಾಗೇ ಇಟ್ಟರೆ ಎಷ್ಟು ನಷ್ಟವಾಗುತ್ತದೆಂಬುದನ್ನು ಯೋಚಿಸಬೇಕು. ತೋಟಗಾರಿಕೆಗೆ ನಮ್ಮ ಜಿಲ್ಲೆ ಪ್ರಸಿದ್ಧ ವಾಗಿದೆ. ನಮ್ಮಲ್ಲಿ ಎಲ್ಲಾ ತರಹದ ಬೆಳೆಗಳೂ ಇವೆ. ಚಿತ್ರದುರ್ಗ ಜಿಲ್ಲೆಗೆ ಹೋಗಿ ನೋಡಿದರೆ ಅಲ್ಲಿ ೨೦ ಪ್ರೊಸೆಸಿಂಗ್ ಪ್ಲಾಂಟ್‌ಗಳು ಇವೆ ಮಾವಿನ ಹಣ್ಣಿನ ರಸ ತೆಗೆದು ರಷ್ಯ ಮುಂತಾದ ದೇಶಗಳಿಗೆ ಕಳುಹಿಸುತ್ತಾರೆ. ನಮ್ಮ ಜಿಲ್ಲೆಯಲ್ಲಿ ಹುಣಸೆ ಹಣ್ಣು, ಮಾವಿನ ಹಣ್ಣು ಮುಂತಾದ ಹಣ್ಣುಗಳನ್ನು ಬೇಕಾದಷ್ಟು ಬೆಳೆಯುತ್ತೇವೆ. ಆದರೂ ಇದರ ಬಗ್ಗೆ ಕ್ರಮ ಕೈಗೊಳ್ಳಿ ಎಂದರೆ ಸರ್ಕಾರದವರು ಯೋಚಿಸುವುದಿಲ್ಲ ಅದೇ ರೀತಿ ನಮ್ಮಲ್ಲಿ ಆಲೂಗೆಡ್ಡೆಯನ್ನು ಜಾಸ್ತಿ ಬೆಳೆಯುತ್ತೇವೆ. ಅದಕ್ಕೆ ಕೋಲ್ಡ್ ಸ್ಟೋರೇಜ್ ಪ್ಲಾಂಟ್ ಇದ್ದರೆ ಉಪಯೋಗಿಸಿಕೊಳ್ಳಬಹುದು. ಆದರೆ ಇವರಿಗೆ ಆದರ ವಿಚಾರ ಅರ್ಥ ವಾಗುತ್ತಿಲ್ಲ. ಚಿಕ್ಕಬಳ್ಳಾಪುರದಲ್ಲಿ ಶುರುವಾಗಿ ಹತ್ತು ವರ್ಷವಾಯಿತು. ಆದರೆ ಅದರಲ್ಲಿ ಇಟ್ಟರೆ ಹಣ್ಣುಗಳು ವಾಪಸ್ಸು ಬರುವುದಿಲ್ಲ. ಬೆಂಗಳೂರಿನಲ್ಲಿರುವುದರಲ್ಲಿ ಇಟ್ಟರೆ ಹಣ್ಣುಗಳು ಕರಗಿ ಹೋಗು ತ್ತವೆ. ಜಯನಗರದಲ್ಲಿ ಒಂದು ಕೋಲ್ಡ್ ಸ್ಟೋರೇಜ್ ಪ್ಲಾಂಟ್ ಇದೆ. ಅವರು ಲಕ್ಷಾಂತರ ರೂಪಾಯಿ ಸಂಪಾದಿಸುತ್ತಿದ್ದಾರೆ. ಆದರೆ ಸರ್ಕಾರದವರಿಗೆ ಏನು ತೊಂದರೆಯಾಗಿದೆ? ಇವರು ಇಷ್ಟು ಉದಾಸೀನ ಮನೋಭಾವದಿಂದ ಈ ರೀತಿ ಕೋಲ್ಡ್ ಸ್ಟೋರೇಜ್ ಕಟ್ಟದೆ ಇರುವುದು ನಿಜವಾಗಿ ಶೋಚ ನೀಯ. ಈ ಬಗ್ಗೆ ಯೋಚಿಸಬೇಕು. ನಿಜವಾಗಿ ನಾವು ತೋಟಗಾರಿಕೆ ಇಲಾಖೆಯನ್ನು ಉಪಯೋಗಿಸಿ ಕೊಂಡರೆ ಅದರಲ್ಲಿ ಬಹಳ ಲಾಭ ಇದೆ. ವ್ಯವಸಾಯ ಮಾಡಿ ಸರಿಯಾಗಿ ಬದುಕುವುದಕ್ಕೆ ಸಾಧ್ಯವಿಲ್ಲ. ತೋಟಗಾರಿಕೆ ಮಾಡಿದರೆ ಸ್ವಲ್ಪ ಲಾಭ ಇದೆ. ಆದರೆ ದುರಾದೃಷ್ಟವಶಾತ್ ಆಗುತ್ತಿಲ್ಲ. ಒಂದೊಂದು ಸಾರಿ ೫ ರೂಪಾಯಿಗೆ ಹೋಗುವ ಟೊಮಾಟೊ ೫೦ ಪೈಸೆಗೆ ಹೋಗುವುದಿಲ್ಲ. ಅದನ್ನು ಸುಮ್ಮನೆ ಕಿತ್ತು ಬಿಸಾಕಬೇಕಾಗುತ್ತದೆ. ಇಂಥ ಸಂದರ್ಭದಲ್ಲಿ ಕೋಲ್ಡ್ ಸ್ಟೋರೇಜ್ ಇದ್ದರೆ ಲಾಭ ಬರುತ್ತಿತ್ತು ನಮ್ಮಲ್ಲಿ ಮಾರ್ಕೆಟ್ ಫೆಸಿಲಿಟೀಸ್ ಕೂಡ ಇಲ್ಲ. ಕೋಲಾರ, ಬೆಂಗಳೂರು, ಮದ್ರಾಸಿನಲ್ಲಿ ಮಾರ್ಕೆಟ್ ಇಲ್ಲದಿದ್ದರೆ ವಿಜಯವಾಡಕ್ಕೆ ಹೋಗಬೇಕು. ಇಲ್ಲೇ ಮಾರ್ಕೆಟ್ ಇದ್ದರೆ ಉಪಯೋಗಿಸಿಕೊಳ್ಳುವುದಕ್ಕೆ ಅನುಕೂಲ ತೋಟಗಾರಿಕೆ ಇಲಾಖೆ ಬಹಳ ಮುಖ್ಯವಾದ ಅಂಗ. ಅದು ಬೆಳೆಯಬೇಕಾಗಿದೆ. ತೋಟ ಗಾರಿಕೆ, ವ್ಯವಸಾಯ ಇಲಾಖೆಗಳು ಏನಿವೆ ಇವು ರೈತನಿಗೆ ಬೆನ್ನೆಲುಬು. ಆದರೆ ದುರಾದೃಷ್ಟವಶಾತ್ ರೈತನಿಗೆ ಅವುಗಳಿಂದ ಸರಿಯಾದ ಸಹಾಯ ದೊರಕುತ್ತಿಲ್ಲ. ರೈತನಿಗೆ ಏನೋ ಮಾಡುತ್ತೇವೆಂದು ಹೇಳುತ್ತಾರೆ, ಮಾಡಿದ್ದಂತೂ ಏನೂ ಇಲ್ಲ. ರೈತನ ಬಗ್ಗೆ ನಾವು ಸ್ವಲ್ಪ ಯೋಚಿಸಬೇಕಾಗಿದೆ. ಅವನು ಮನುಷ್ಯನಾಗಿ ಬದುಕುತ್ತಿಲ್ಲ, ಎತ್ತಿನ ಹಾಗೆ ಬದುಕುತ್ತಿದ್ದಾರೆ. ಅವನಿಗೆ ರಜ ಇಲ್ಲ. ದಿನಕ್ಕೆ ೧೬ ಗಂಟೆ ಕಾಲ ಕೆಲಸ ಮಾಡುತ್ತಾನೆ. ಬೆಳಿಗ್ಗೆ ೬ ರಿಂದ ರಾತ್ರಿ ೧೧ರ ವರೆಗೆ ದುಡಿಯುತ್ತಾನೆ. ಆದರೂ ಅವನಿಗೆ ಸಂತೋಷ ಇಲ್ಲ. ಇಂಥ ರೈತನ ಬಗ್ಗೆ ಕಳಕಳಿ ಇಲ್ಲ. ಚುನಾವಣೆ ಬಂದಾಗ ಒಳ್ಳೆಯ ಮಾತು ಹೇಳಿ ಮೋಸ ಮಾಡುತ್ತಿದ್ದಾರೆ. ಅವನು ಈ ದೇಶದ ಅಂಗ. ಅವನಿಗೆ ಸಹಾಯ ಮಾಡಬೇಕೆಂಬುದು ಇಲ್ಲ. ಅವನು ಅಮೇರಿಕಾದ ನೀಗ್ರೋ ಹಾಗೆ ಆಗಿದ್ದಾರೆ, ಅಂಥ ಪರಿಸ್ಥಿತಿಯಲ್ಲಿ ಅವನಿದ್ದಾನೆ. ಅವನ ಬಗ್ಗೆ ಇಲಾಖೆಗೆ ಕಳಕಳಿ ಇಲ್ಲ. ಆದ್ದರಿಂದ ಅವನ ಬಗ್ಗೆ ಹೆಚ್ಚು ಗಮನ ಕೊಡಬೇಕೆಂದು ಹೇಳುತ್ತೇನೆ. ವ್ಯವಸಾಯ ಅಭಿವೃದ್ಧಿ ಆಗದೆ ದೇಶ ಅಭಿವೃದ್ಧಿ ಆಗುವುದಿಲ್ಲ. ಹಳ್ಳಿಗಳ ಬಗ್ಗೆ ಕಾಳಜಿ ವಹಿಸಿ ವ್ಯವಸಾ ಯವನ್ನು ಅಭಿವೃದ್ಧಿ ಮಾಡುವುದಕ್ಕೆ ಮಾನ್ಯ ಪ್ರಕಾಶ್‌ರವರು, ಸೋಮಶೇಖರ್‌ರವರು ಮತ್ತು ಸಿದ್ಧ ರಾಮಯ್ಯನವರು ಸರ್ವ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಇವರು ಇನ್ನೂ ಚಿಕ್ಕ ವಯಸ್ಸಿನ

ಪರು ಆಗಿದ್ದಾರೆ. ಇವರು ನಮಗೆ ಅಧಿಕಾರ ಬಂದಿದೆ, ಕೆಲವು ದಿವಸ ಮಜಾ ಮಾಡೋಣ ಎಂದು ಅಭಿಪ್ರಾಯ ಇಟ್ಟುಕೊಳ್ಳದೆ ರೈತರ ಬಗ್ಗೆ ಕಾಳಜಿ ವಹಿಸಬೇಕೆಂದು ಹೇಳುತ್ತೇನೆ. ಇಲ್ಲದಿದ್ದರೆ ರೈತರು ತೊಂದರೆಗೆ ಒಳಗಾಗುತ್ತಾರೆ. ಈಗಾಗಲೇ ಅನೇಕ ಕಡೆ ಬರಗಾಲ ಪರಿಸ್ಥಿತಿ ಉಂಟಾಗಿದೆ, ಈ ಸಂದರ್ಭದಲ್ಲಿ ವ್ಯವಸಾಯ ಪದ್ಧತಿಯನ್ನು ಬದಲಾಯಿಸುವುದು ಒಳ್ಳೆಯದಿದೆ. ಈಗ ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಎಂದು ಕಮೀಷನ್ಸ್ ಮಾಡಿದ್ದಾರೆ. ಅದರಲ್ಲಿ ನೀರು ಶೇಖರಣೆ ಮಾಡಿ ಜಾಸ್ತಿ ನೀರು ಖರ್ಚಾಗದಿರುವ ಕಡೆ ಗಮನ ಕೊಡಬೇಕು. ಇನ್‌ಪುಟ್ಸ್ ಎಂದು ಏನು ಕೊಡುತ್ತಾರೆ ಅದನ್ನು ಬಡವರಿಗೆ ಜಾಸ್ತಿ ಕೊಟ್ಟು ರೈತರಿಗೆ ಸಲೀಸಾಗಿ ಕ್ರಿಮಿನಾಶಕ ಮತ್ತು ಗೊಬ್ಬರ ಬೀಜಗಳನ್ನು ಕೊಟ್ಟು ಸಹಾಯ ಮಾಡಿ ಎಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಬಿ. ಶಾಣಪ್ಪ (ಶಹಬಾದ್).—ಸನ್ಮಾನ್ಯ ಅಧ್ಯಕ್ಷರೆ, ಇಂದಿನ ೫ ಲಕ್ಷದ ೬೧ ಸಾವಿರ ರೂಪಾಯಿಗಳ ಮೊತ್ತದ ಬೇಡಿಕೆಗಳನ್ನು ಟೀಕೆ ಟಿಪ್ಪಣಿಗಳೊಂದಿಗೆ ಬೆಂಬಲಿಸುತ್ತೇನೆ. ಪ್ರಜಾತಂತ್ರ ನೀತಿಯಲ್ಲಿ ಚನ್ನಾಗಿ ಕಾಣಿಸದೆ ಇದ್ದುದನ್ನು ಟೀಕಿಸಬೇಕು, ಚನ್ನಾಗಿದ್ದುದನ್ನು ಬೆಂಬಲಿಸಬೇಕು. ವ್ಯವಸಾಯ, ಪಶು ಸಂಗೋಪನೆ ಮತ್ತು ತೋಟಗಾರಿಕೆ ಇವು ಮೂರು ಬಹಳ ಮುಖ್ಯವಾದ ಇಲಾಖೆಗಳು. ಇವತ್ತಿನ ದಿವಸ ಕರ್ನಾಟಕ ರಾಜ್ಯದಲ್ಲಿ ಸುಮಾರು ೧೧೪ ತಾಲ್ಲೂಕುಗಳು ಬರಗಾಲಕ್ಕೆ ತುತ್ತಾಗಿದೆ. ಈ ಸಂದರ್ಭದಲ್ಲಿ ಈ ಮೂರು ಪ್ರಮುಖ ಇಲಾಖೆಗಳ ಬೇಡಿಕೆಗಳು ನಮ್ಮ ಮುಂದಿವೆ. ಸಾಮಾಜಿಕ ಬೇಡಿಕೆಗಳು ಏನಿವೆ ಅವನ್ನು ನಾವು ಮೊದಲು ಪೂರೈಸಬೇಕಾಗಿದೆ. ಮಳೆ ಬಾರದೆ ರೈತ ಒಣಗಿ ಹೋಗಿದ್ದಾನೆ. ತನ್ನ ಎತ್ತುಗಳ ಬಗ್ಗೆ ಅವನು ಚಿಂತನೆಯಲ್ಲಿದ್ದಾನೆ. ನಮ್ಮ ರಾಜ್ಯ ಪ್ರಗತಿ ಪಥದಲ್ಲಿ ನಡೆಯಬೇಕಾದರೆ ಈ ಮೂರು ಇಲಾಖೆಗಳನ್ನು ಅವಲಂಭಿಸಬೇಕಾಗಿದೆ. ಆದರೂ ಕರ್ನಾಟಕದ ಶೇಕಡ ೮೦ ಭಾಗಗಳಲ್ಲಿ ಇರಿಗೇಷನ್ ಇಲ್ಲ. ಇವರ ಅಂಕಿ ಸಂಖ್ಯೆಗಳ ಪ್ರಕಾರ ಒಟ್ಟು ಒಂದು ಕೋಟಿ ೯೦ ಲಕ್ಷ ಹೆಕ್ಟೇರ್ ಜಮೀನಿನಲ್ಲಿ ಇರಿಗೇಷನ್ ಇರತಕ್ಕದ್ದು ೧೪ ಲಕ್ಷ ೮೧ ಸಾವಿರ ಹೆಕ್ಟೇರ್ ಜಮೀನಿನಲ್ಲಿ ಮಾತ್ರ. ಉಳಿದದ್ದು ಫಾರೆಸ್ಟ್ ಲ್ಯಾಂಡ್ ಮತ್ತು ಇನ್ನು ಕೆಲವು ಉಳಲಿಕ್ಕೆ ಬಾರದ ಜಮೀನು. ಇದರ ಮೇಲೆ ನಾವು ಇವತ್ತು ಈ ಕೃಷಿ ವಿಭಾಗವನ್ನು ಬೆಳಸಬೇಕಾಗಿದೆ. ಹಣ್ಣು ಬೆಳಸಬೇಕು, ದ್ವಿದಳ ಧಾನ್ಯಗಳನ್ನು ಬೆಳಸಬೇಕು. ಜಾನುವಾರುಗಳಿಗೆ ಮೇವು ಬೇಕು ಮತ್ತು ಪಟ್ಟಣಗಳಿಗೆ ಬೇಕಾದ ಪ್ರತಿಯೊಂದು ಪೌಷ್ಟಿಕ ಆಹಾರ ಧಾನ್ಯಗಳನ್ನು ಬೆಳಸಿ ಕಳುಹಿಸಬೇಕು. ಜೊತೆಗೆ ರೈತನ ಸಮಸ್ಯೆಯನ್ನು ನೋಡಬೇಕು. ಹೀಗಿರುವಾಗ ಈ ಇಲಾಖೆಯ ಮೇಲೆ ಬಹಳ ಜವಾಬ್ದಾರಿ ಇದೆ. ರೇವಣಸಿದ್ದಯ್ಯನವರು ರೈತನ ಸಮಸ್ಯೆ ಬಗ್ಗೆ ಬಹಳ ಕಳಕಳಿ ತೋರಿದರು. ರೈತನ ಬಗ್ಗೆ ಇರತಕ್ಕ ಚಿಂತನೆ, ಆತನ ಸಾಮಾಜಿಕ ಜೀವನ, ಆತ ತಾನು ಇರತಕ್ಕ ಪರಿಸರದಲ್ಲಿ ಎಷ್ಟರಮಟ್ಟಿಗೆ ಕೆಳಕ್ಕೆ ಹೋಗಿದ್ದಾನೆಂಬ ಬಗ್ಗೆ ಬಹಳ ಮಾರ್ಮಿಕವಾಗಿ ಹೇಳಿದರು. ಅವನಿಗಾಗಿ ಹಾಕಿಕೊಂಡ ಯೋಜನೆಗಳು ಕಾರ್ಯಗತವಾಗಬೇಕು, ಅವನ ಸಮಸ್ಯೆ ಬಗೆಹರಿಯಬೇಕು, ಅವನು ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗಬೇಕು, ಅವನಿಗೆ ಪೌಷ್ಟಿಕ ಆಹಾರ ಸಿಗಬೇಕು.

ಅಂತಹ ಭಾವನೆಗಳನ್ನು ಇಟ್ಟುಕೊಂಡಿರಬೇಕಾದರೆ ಅವರು ನಮ್ಮ ಪಕ್ಕದಲ್ಲಿ ಬಂದು ಮಾತನಾಡಿದರೆ ಅದು ಉಪಯೋಗವಾಗುತ್ತದೆ. ಆ ಪ್ರಕಾರ ಒಂದು Socialistic views of thinking ನಿಮ್ಮ ಸರ್ಕಾರ ವಿಶಲೈಸ್ ಮಾಡಿ ಇವುಗಳನ್ನು ಪ್ರಾಕ್ಟಿಕಲ್ ಆಗಿ ಮಾಡುವುದಕ್ಕೆ ನಾವು ಪ್ರಯತ್ನ ಮಾಡಬೇಕು. ಈ ದಿಸೆಯಲ್ಲಿ ನಿಮ್ಮ ಚಿಂತನೆಗೆ ನಾನು ತಲೆಬಾಗುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಸದಸ್ಯರು ಕಮ್ಯುನಿಸ್ಟ್ ಪಾರ್ಟಿಯ ಪಕ್ಕದಲ್ಲಿ ಬನ್ನಿ ಎಂದು ಹೇಳುತ್ತಿದ್ದಾರೆ.

ಶ್ರೀ ಕೆ. ಬಿ. ಶಾಣಪ್ಪ.—ಅವರ ವಿಚಾರ ಧಾರೆ ಆ ರೀತಿ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕಮ್ಯುನಿಸ್ಟ್ ಪಾರ್ಟಿಯ ಪಕ್ಕದಲ್ಲಿ ಬಾ ಎಂದರೆ ಕಾಂಗ್ರೆಸ್ ಪಕ್ಷಕ್ಕೆ ಬನ್ನಿ ಎಂದು ಹೇಳುತ್ತಿದ್ದಾರೆ.

ಶ್ರೀ ಕೆ. ಬಿ. ಶಾಣಪ್ಪ.—ನಾನು ಹೇಳುವುದು ನಮ್ಮ ಭಾಗಕ್ಕೆ ಬನ್ನಿ ಎಂದು ಹೇಳುತ್ತಿದ್ದೇನೆ. ಬಲ್ಗೇರಿಯಾ, ಜಿಡಿಆರ್, ಸೋವಿಯಟ್ ರಷ್ಯಾ ಮುಂತಾದ ಕಡೆಗಳಲ್ಲಿ we have seen it. Our co-operative farming ರೈತ ಯಾವ ಪ್ರಕಾರ ಬೆಳೆಯುತ್ತಾನೆ. ಅವನು ಬೆಳೆದಂತಹ

ಬೆಳೆಗೆ ಸರಿಯಾದ ಬೆಲೆ ಸಿಗಬೇಕು The guarantee is given by the state government for the Farmers for theirr produce in the western countries it is not the middleman who decidee the prioe for the farmers produce, He does not Purchase. The entire purchasing capacity is under the monopoly of the State. Ther is no middleman to decieve the farmer. ರೈತ ಎಷ್ಟು ಖರ್ಚು ಮಾಡಿದ್ದಾನೆ ? ಬೆಳೆ ತೆಗೆಯಲಿಕ್ಕೆ ಪಟ್ಟಂತಹ ಶ್ರಮ ಎಷ್ಟು ? ಎಷ್ಟು ಕ್ಯಾಪಿಟಲ್ ಹಾಕಿದ್ದಾನೆ? ಅದಕ್ಕೆ ಅವನಿಗೆ ಎಷ್ಟು ಬೆಲೆ ಕೊಡಬೇಕೆಂಬುದರ ಬಗ್ಗೆ ಯೋಚನೆ ಮಾಡಬೇಕು. ಒಂದು ವೇಳೆ ಮಳೆ ಬಾರದಿದ್ದರೆ ನ್ಯಾಚುರಲ್ ಕ್ಯಾಲಮಿಟಿ ಬಂದಾಗ, ಸ್ಟೇಟ್ ಗೌರ್ನ್‌ಮೆಂಟ್ ಇನ್ಸೂರೆನ್ಸ್ ಗ್ಯಾರಂಟಿ ಕೊಟ್ಟಿದೆ. ಕೆಲವು ಜಿಲ್ಲೆಗಳಲ್ಲಿ ಕ್ರಾಪ್ ಇನ್ಸೂರೆನ್ಸ್ ಜಾರಿಗೆ ತಂದಿದ್ದೇವೆಂದು ಹೇಳಿದ್ದಾರೆ. ಅದನ್ನು ಎಲ್ಲಾ ಜಿಲ್ಲೆಗಳಿಗೂ ಅಳವಡಿಸುತ್ತೇವೆಂದೂ ಕೂಡ ಹೇಳಿದ್ದಾರೆ. ಹೊರದೇಶಗಳಲ್ಲಿ ಕ್ರಾಪ್ ಇನ್ಸೂರೆನ್ಸ್ ಅಂದರೆ ರೈತ ಬೆಳೆಯನ್ನು ಬೆಳೆಯಲಿಕ್ಕೆ ಎಷ್ಟು ಹಣವನ್ನು ಖರ್ಚು ಮಾಡಿರುತ್ತಾನೆ, ಅದನ್ನು ಲೆಕ್ಕ ಹಾಕುತ್ತಾರೆ, ಜೊತೆಗೆ ಎಲ್ಲಾ ಎಕ್ವಿಪ್‌ಮೆಂಟ್ಸ್‌ಗಳನ್ನು ಕೊಡುತ್ತಾರೆ. ಕೋ-ಆಪರೇಟೀವ್ ಫಾರ್ಮಿಂಗ್ ಮತ್ತು ಬ್ಯಾಂಕುಗಳು ಏನಿವೆ ಅವುಗಳ ಮುಖಾಂತರ ಬೆಳೆ ಉತ್ಪಾದನೆಯನ್ನು ಮಾಡುವವರಿಗೆ ಸಾಲ ಕೊಟ್ಟು, ಬೆಳೆ ಬಂದಾಗ ಹಾರ್ವೆಸ್ಟ್ ಮೆಷಿನ್ ಕೊಡುತ್ತಾರೆ, ಸೀಡ್ಸ್‌ನಿಂದ ಹಿಡಿದು ಬೆಳೆಯನ್ನು ಬೆಳೆಯಲಿಕ್ಕೆ ಬೇಕಾದಂತಹ ರಾಸಾಯನಿಕ ಗೊಬ್ಬರ ಎಲ್ಲವನ್ನು ಮುರಿದುಕೊಂಡು ಉಳಿದ ಹಣವನ್ನು ಚೆಕ್ ರೂಪದಲ್ಲಿ ರೈತರಿಗೆ ಕೊಡುತ್ತಾರೆ. ನಮ್ಮಲ್ಲಿ ಹಾಗೆ ಇಲ್ಲ. ನಮ್ಮಲ್ಲಿಯ ಅರ್ಥ ವ್ಯವಸ್ಥೆಯೇ ಬೇರೆ ಇದೆ. Economic system itself is different from that country ನಮ್ಮಲ್ಲಿ ಏನಾಗುತ್ತಿದೆ ಅಂದರೆ ರೈತ ಬೆಳೆದಂತಹ ಬೆಳೆಯನ್ನು ಹಾರ್ವೆಸ್ಟ್ ಮಾಡಿಕೊಂಡು ಬರುವಾಗ ಪಟ್ಟಣಗಳಲ್ಲಿ ಕುಳಿತಿರತಕ್ಕ ದಳ್ಳಾಳಿಗಳು, ಬೆಲೆಯನ್ನು ಇಳಿಸುತ್ತಾರೆ. That is the political economy. The farmers do not know this ರೈತನಿಗೆ ಏನೋ ಒಂದು ಟ್ರ್ಯಾಕ್ಟೀಸ್ ಮಾಡಿ, ಆತನಿಂದ ಮಾಲನ್ನು ತೆಗೆದುಕೊಂಡು ರೈತನಿಗೆ ಕಡಿಮೆ ಬೆಲೆಯನ್ನು ಕೊಡುತ್ತಾರೆ. ರೈತ ಗತ್ಯಂತರವಿಲ್ಲದೆ ಅವರು ಕೇಳಿದ ಬೆಲೆಗೆ ಬೆಳೆದಂತಹ ಮಾಲನ್ನು ಕೊಟ್ಟು ಹೋಗುತ್ತಾರೆ. ಎರಡರಿಂದ ೧೦ ಎಕರೆವರೆಗೆ ಭೂಮಿಯನ್ನು ಇಟ್ಟುಕೊಂಡಿರುವವನು ಮಾಲನ್ನು ಮನೆಯಲ್ಲಿ ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅವನು ಮನೆಯಲ್ಲಿ ಇಟ್ಟುಕೊಳ್ಳುವಂತಹ ಪರಿಸ್ಥಿತಿಯಲ್ಲಿ ಇರುವುದಿಲ್ಲ. ನಮ್ಮ ಆರ್ಥಿಕ ಪರಿಸ್ಥಿತಿ ಆ ರೀತಿ ಇದೆ. ಅವನು ಬೆಳೆದಂತಹ ಮಾಲನ್ನು ಮಾರಾಟ ಮಾಡಿ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಬೇಕಾಗಿರುತ್ತದೆ. ಮಗಳ ಲಗ್ನ ಮಾಡಬೇಕಾಗಿರುತ್ತದೆ. ಬೆಳೆದಂತಹ ಮಾಲನ್ನು ನಾಲ್ಕೈದು ತಿಂಗಳು ಇಟ್ಟುಕೊಳ್ಳುವಂತಹ ಸ್ಥಿತಿಯಲ್ಲಿರುವುದಿಲ್ಲ. ದಳ್ಳಾಳಿಗಳು ಒಂದು ಕ್ವಿಂಟಾಲ್ ಧಾನ್ಯ ೨೦೦ ರೂಪಾಯಿ ಇದ್ದರೆ ಅದನ್ನು ೧೫೦ ರೂಪಾಯಿಗಳಿಗೆ ಕೊಂಡುಕೊಂಡು ಧಾರಣೆ ಇಲ್ಲ ಏನು ಮಾಡುವುದು ಎಂದು ಹೇಳಿ ರೈತನಿಗೆ ೧೫೦ ರೂಪಾಯಿ ಕೊಟ್ಟು ಕಳುಹಿಸುತ್ತಾರೆ, ಖರೀದಿ ಮಾಡುವಂತಹವರು ಕೂಡ ದೊಡ್ಡ ರೈತರೇ ಆಗಿರುತ್ತಾರೆ. ಮಾರ್ಕೆಟಿಂಗ್ ಸೊಸೈಟಿಗಳಲ್ಲಿ ಇರತಕ್ಕವರು ದೊಡ್ಡ ರೈತರು. ಅವರು ಮಾಲನ್ನು ತೆಗೆದುಕೊಂಡು ಇಟ್ಟುಕೊಂಡು ಧಾರಣೆಬಂದಾಗ ಮಾರಾಟ ಮಾಡುತ್ತಾರೆ. ರೈತ ಬೆಳೆದಂತಹ ಬೆಳೆಗೆ ಬೆಲೆಯನ್ನು ನಿಗದಿ ಮಾಡುವವರು ಯಾರು ? ಅವನು ಬೆಳೆದಂತಹ ಬೆಳೆಗೆ ಅವನೇ ಬೆಲೆಯನ್ನು ನಿಗದಿ ಮಾಡಬೇಕು. ಸಿಮೆಂಟ್ ಮ್ಯಾನೇಜ್‌ಮೆಂಟ್ ಇರುತ್ತದೆ. ಬಾಯ್ಲರ್ ಪ್ಲಾಂಟ್ ಇರುತ್ತದೆ ಅವರು ಉತ್ಪಾದನೆ ಮಾಡಲಿಕ್ಕೆ ಎಷ್ಟು ಖರ್ಚು ಬರುತ್ತದೆ, ಎಷ್ಟು ಲಾಭವನ್ನು ಇಟ್ಟುಕೊಳ್ಳಬೇಕು, ಮಿಷಿನರಿ ಖರ್ಚು ಎಷ್ಟು ಲಾಭವನ್ನು ಶೇಕಡ ೨೫ರಷ್ಟು ಅಥವಾ ೩೦ರಷ್ಟು ಇಟ್ಟುಕೊಳ್ಳುವಂತಹ ಅಧಿಕಾರ ಅವರಿಗೆ ಇರುತ್ತದೆ. ಆದರೆ ರೈತ ತಾನು ಬೆಳೆದ ಬೆಳೆಗೆ ಧಾರಣೆಯನ್ನು ಫಿಕ್ಸ್ ಮಾಡುವ ಅಧಿಕಾರವಿರುವುದಿಲ್ಲ. ರೈತ ತನ್ನ ಮಾಲನ್ನು ಮಾರ್ಕೆಟಿಗೆ ತಂದು ಮಾರಾಟ ಮಾಡಬೇಕಾಗಿರುತ್ತದೆ. ಅವನಿಗೆ ಕಮಿಟ್‌ಮೆಂಟ್ಸ್‌ಗಳು ಇರುತ್ತವೆ. ಈ ಪ್ರಕಾರ ರೈತ ತೆಗೆದುಕೊಂಡು ಬಂದಂತಹ ಮಾಲನ್ನು ವಾಪಸ್ಸು ತೆಗೆದುಕೊಂಡು ಹೋಗುವಂತಹ ಪರಿಸ್ಥಿತಿ ನಿರ್ಮಾಣ ಮಾಡುತ್ತಾರೆ. ೧೫೦ ರೂಪಾಯಿ ಬೆಲೆ ಇದ್ದರೆ ಅದನ್ನು ೧೪೦ ರೂಪಾಯಿಗಳಿಗೆ ಮಾರಿ ಬರುತ್ತಾರೆ. ಸಣ್ಣ ಸಣ್ಣ ರೈತರು ತಾವು ಬೆಳೆದಂತಹ ಬೆಳೆಯನ್ನು ಯಾರೂ ಇಟ್ಟುಕೊಳ್ಳುವುದಿಲ್ಲ

ಅದೇ ದೊಡ್ಡ ರೈತರು ಬೆಲೆ ಇಳಿದಾಗ ಮಾರಾಟ ಮಾಡುವುದಿಲ್ಲ. ಎಲ್ಲಾ ಧಾನ್ಯಗಳನ್ನು ಗೋಡೋನ್ ಗಳಲ್ಲಿ ಇಟ್ಟುಕೊಳ್ಳುತ್ತಾರೆ. ಸಣ್ಣ ರೈತರಿಂದ ಒಂದು ಕ್ವಿಂಟಾಲ್ ಧಾನ್ಯವನ್ನು ೧೫೦ ರೂಪಾಯಿಗಳಿಗೆ ಕೊಂಡು, ಅದನ್ನು ೨೫೦ ರೂಪಾಯಿಗಳಿಗೆ ಮಾರಾಟ ಮಾಡುತ್ತಾರೆ. ಬೆಲೆಯನ್ನು ಏರಿಸುವವರು ಅವರೇ ಬೆಲೆಯನ್ನು ಇಳಿಸುವವರು ಅವರೇ. this is the system we are having here ಈಗಿರತಕ್ಕ ಆರ್ಥಿಕ ಪರಿಸ್ಥಿತಿಯಲ್ಲಿ ರೈತನ ಕಿಸೆಯನ್ನು ಕತ್ತರಿಸುವ ಆರ್ಥಿಕ ಪರಿಸ್ಥಿತಿ ಇರುವುದರಿಂದ ಏನೂ ಮಾಡುವುದಕ್ಕೆ ಆಗುವುದಿಲ್ಲ. ರೈತನ ಸಮಸ್ಯೆಯನ್ನು ಅರಿತು ನಡೆಯಬೇಕು ರಾಜ್ಯದ ಅಥವಾ ರಾಷ್ಟ್ರದ ಯಾವುದೇ ಭಾಗದಲ್ಲಿ ಎಕ್ಸ್‌ಪ್ಲಾಯಿಟೇಶನ್ ಆದರೆ ಆಗ ಕ್ರಾಂತಿ ಮಾಡುವ ಪರಿಸ್ಥಿತಿ ಬರುತ್ತದೆ. Today or tomorrow, we have to lead there only. ಸಾಯುವವನು ಏನು ಮಾಡುತ್ತಾನೆಂದು ಯಾರಿಗೂ ಗೊತ್ತಾಗುವುದಿಲ್ಲ. ಅವನು ಏನು ಮಾಡಬೇಕೋ ಅದನ್ನು ಮಾಡೇ ಮಾಡುತ್ತಾನೆ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಶುರು ಮಾಡುವ ದಾಟಿಯನ್ನು ನೋಡಿದರೆ ತಮ್ಮ ಭಾಷಣ ಈಗಲೇ ಮುಗಿಯುವ ಹಾಗೆ ಕಾಣುವುದಿಲ್ಲ. ತಮಗೆ ಇನ್ನು ಎಷ್ಟು ಸಮಯ ಬೇಕು ?

ಶ್ರೀ ಕೆ. ಬಿ. ಶಾನಪ್ಪ.—ನನಗೆ ಇನ್ನೂ ಅರ್ಧ ಗಂಟೆ ಸಮಯ ಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಸದಸ್ಯರು ಇನ್ನೂ ರಷ್ಯಾದಿಂದ ಬರುತ್ತಿದ್ದಾರೆ. ಅವರು ಇಂಡಿಯಾಕ್ಕೆ ಬರಬೇಕಾದರೆ ಇನ್ನೂ ಸಮಯ ಬೇಕಾಗುತ್ತದೆ.

ಉಪಾಧ್ಯಕ್ಷರು.—ಇವತ್ತು ಚರ್ಚೆಯನ್ನು ಮುಗಿಸಿ, ಇವತ್ತೇ ಉತ್ತರ ಮುಗಿಯಬೇಕಾಗಿದೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರು ಕಾರ್ಮಿಕರ ಬಗ್ಗೆ ಅಥಾರಿಟಿ ಇದ್ದಾರೆ. ಎಲ್ಲಾ ವಿಷಯಗಳನ್ನು ಮಾನ್ಯ ಪಾಟೀಲರು ಮತ್ತು ಇತರ ಸದಸ್ಯರು ಹೇಳಿದ್ದಾರೆ. ತಾವು ಕಾರ್ಮಿಕರಿಗೆ ಸಂಬಂಧಪಟ್ಟ ಹಾಗೆ ಹೇಳಿದರೆ ಒಳ್ಳೆಯದು.

ಶ್ರೀ ಯು. ಭೂಪತಿ.—ಕಮ್ಯುನಿಸ್ಟರು ಅಂದರೆ ಕಾರ್ಮಿಕರಿಗೆ ಸೀಮಿತವಾಗಿದ್ದಾರೆಂದು ಮಾನ್ಯ ಮಂತ್ರಿಗಳು ತಿಳಿದುಕೊಂಡಿದ್ದಾರಾ ?

(ಶ್ರೀ ಎಂ. ಎಸ್. ನಾರಾಯಣ ರಾವ್ ಪೀಠದಲ್ಲಿದ್ದರು)

ಶ್ರೀ ಕೆ. ಬಿ. ಶಾನಪ್ಪ.—ಜೇವಿಸಿದ ಹತ್ತಿರ ಸೆಂಟ್ರಲ್ ಸ್ಕೀಮ್‌ನಿಂದ ಸುಮಾರು ೧೨ ಸಾವಿರ ಎಕರೆ ಭೂಮಿಯಲ್ಲಿ ಕೃಷಿ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ. ಅಲ್ಲಿ ಐದಾರು ಸಾವಿರ ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. meohanised equipments, harvestiag machines technical know-how ಎಲ್ಲಾ ಮಿಷಿನರಿಗಳನ್ನು ಅಲ್ಲಿ ಕೊಟ್ಟಿದ್ದಾರೆ.

೭-೦೦

ನನಗೆ ತಿಳಿದಮಟ್ಟಿಗೆ ೧೯೮೪ ರ ಮಾರ್ಚ್ ಏಪ್ರಿಲ್‌ನಲ್ಲಿ ಅವರು ೩೦ ದಿವಸ ಸ್ಟ್ರೈಕ್ ಮಾಡಿದರು. ಅಲ್ಲಿ ಇರತಕ್ಕಂಥಾ ಲೇಬರರ್ಸ್ ಮತ್ತು ನಾವು ಶ್ರೀ ವೀರೇಂದ್ರ ಪಾಟೀಲರು ಲೇಬರ್ ಮಿನಿಸ್ಟರ್ ಆಗಿದ್ದಾಗ ನಾವು ಡೆಲಿಗೇಷನ್ ಹೋಗಿದ್ದೆವು. ಆ ಲೇಬರರ್ಸ್ ಹೇಳಿದ್ದು ಏನೆಂದರೆ ನಮಗೆ ಒಂದು ದಿವಸಕ್ಕೆ ೧೫ ರೂ. ಕೊಡಬೇಕು ಎಂದು. ಅವರು ಏನು ಹೇಳಿದರು ಎಂದರೆ ಇದು ಲಾಸ್‌ನಲ್ಲಿ ನಡೆಯುತ್ತಾ ಇದೆ ಆದುದರಿಂದ ನಾವು ಕೊಡುವುದಕ್ಕೆ ಬರುವುದಿಲ್ಲ ಎಂದರು. ಇಷ್ಟು ನಷ್ಟವಾಗಿದೆ ಎಂದು ಹೇಳಿದರಲ್ಲಾ ಅಲ್ಲಿ ಟೆಕ್ನಿಕಲ್ ಮತ್ತು ಸೈಂಟಿಫಿಕ್ ನಾಲೆಡ್ಜ್ ಇರತಕ್ಕಂಥಾ ಜನ ಏನು ಇದ್ದಾರೆ ಅವರಿಂದ ವರದಿ ತರಿಸಿ ನೋಡಿ, ಇದರಲ್ಲಿ ಯಾರದ್ದು ತಪ್ಪು ಇದೆ ಅನ್ನುವುದು ಗೊತ್ತಾಗುತ್ತದೆ. ಅದಕ್ಕೆ ಇನ್‌ವೆಸ್ಟ್ ಮಾಡಿದ ಉದ್ದೇಶ ಅದರಲ್ಲಿ ಉತ್ಪಾದನೆ ಮಾಡಲಿಕ್ಕೆ, ಅಲ್ಲಿ ಏನಾದರೂ ತೊಂದರೆ ಇದ್ದರೆ ಅದನ್ನು ಅವರು ಸರಿ ಮಾಡಬೇಕು. ಅದು ಸ್ಟೇಟ್‌ಗೆ ಸಂಬಂಧವಿಲ್ಲದಿದ್ದರೂ ಸಹ, ಅದು ನಮ್ಮ ಕರ್ನಾಟಕದಲ್ಲಿ ಇದ್ದುದರಿಂದ ಅದರ ಬಗ್ಗೆ ಕಾಳಜಿ ವಹಿಸಿ ಕೆಲಸ ಮಾಡಬೇಕಾಗಿತ್ತು. ಆ ರೀತಿ ಏತಕ್ಕೆ ಮಾಡಲಿಲ್ಲ ?

ಇನ್ನು ಕೃಷಿ ಇಲಾಖೆ ಬಗ್ಗೆ ಹೇಳುವುದಾದರೆ ಇದರಲ್ಲಿ ಅನೇಕ ಪ್ರೋಗ್ರಾಂಗಳನ್ನು ಹಾಕಿಕೊಂಡಿದ್ದಾರೆ. ಬರ್ಡ್ಸ್ ಪ್ಲಾನ್, ಮಿನಿಮಮ್ ನೀಡ್ಸ್ ಪ್ರೋಗ್ರಾಂ, ರೈತರಿಗೆ ಅನುಕೂಲವಾಗುವಂಥಾ ಎಸ್‌ಸಿ ಮತ್ತು ಎಸ್‌ಟಿಯವರಿಗೆ ಅನುಕೂಲವಾಗತಕ್ಕಂಥಾ ಮತ್ತು ಯಾವರೀತಿಯಾಗಿ ರೈತನಿಗೆ

ಬೆಂಬಲದ ಬೆಲೆ ಕೊಡಬೇಕು, ೫೦ ಪರ್ಸೆಂಟ್ ಸಬ್ಸಿಡಿ ಕೊಡತಕ್ಕಂಥಾದ್ದು ೧೯೮೪-೮೫ರಲ್ಲಿ ಈ ಬಗ್ಗೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಆದರೆ ದುರ್ದೈವದಿಂದ ನಾನು ಈ ಒಂದು ವಿಷಯವನ್ನು ಹೇಳುತ್ತೇನೆ. ಒಂದೊಂದು ಹಳ್ಳಿಯಲ್ಲಿ ೨-೨ ಬೋರ್‌ವೆಲ್ಸನ್ನು ಏನು ಹಾಕಿದ್ದಾರೆ ಅದಕ್ಕೆ ಎಲೆಕ್ಟ್ರಿಸಿಟಿಯನ್ನು ಕೆಇಬಿ ಅವರು ಕೊಟ್ಟಿಲ್ಲ. ಈವೊತ್ತು ಗುಲ್ಬರ್ಗ ಜಿಲ್ಲೆಯಲ್ಲಿ ಏನಾಗಿದೆ ಎಂದರೆ ಈ ಮಿನಿಮಮ್ ನೀಡ್ಸ್ ಪ್ರೋಗ್ರಾಂನಲ್ಲಿ ಕೊಟ್ಟಿರತಕ್ಕಂಥ ಬೋರ್‌ವೆಲ್ಸ್ ನೋಡಿದರೆ ನೀವು ಹಾಕಿಕೊಂಡಿರತಕ್ಕಂಥ ಯೋಜನೆಗಳಿಗನುಗುಣವಾಗಿ ಅಷ್ಟು ಸಕ್ಸಸ್‌ಫುಲ್ ಆಗಿಲ್ಲ. ನಿಷ್ಫಲವಾಗಿದೆ. ನೀವು ಹಾಕಿಕೊಂಡಿರತಕ್ಕಂಥಾ ಯೋಜನೆಗಳಿಗನುಗುಣವಾಗಿ ಔಟ್‌ಪುಟ್ ಬಾರದೇಹೋದರೆ ಅಷ್ಟು ಹಣ ಏತಕ್ಕೆ ಖರ್ಚು ಮಾಡಬೇಕು ? ತಮಗೆ ಒಂದು ಉದಾಹರಣೆ ಹೇಳಬೇಕಾದರೆ ಈ ಐ.ಆರ್.ಡಿ.ಪಿ. ಪ್ರೋಗ್ರಾಂನಲ್ಲಿ ನಮ್ಮ ಕಡೆ ಎಮ್ಮೆ ಕೊಟ್ಟಿದ್ದಾರೆ. ನಮ್ಮಲ್ಲಿ ದುಬ್ಬಲ್‌ಗುಂಡಿ ಎಮ್ಮೆ ಎಂದರೆ ಬಹಳ ಫೇಮಸ್. ಆ ಎಮ್ಮೆಯನ್ನು ಕೊಂಡುಕೊಳ್ಳುವುದಕ್ಕೆ ವೆಟರ್ನರಿ ಡಾಕ್ಟರ್, ಬ್ಯಾಂಕ್‌ನ ಅಧಿಕಾರಿಗಳು ಹೋಗಿ ಖರೀದಿ ಮಾಡುತ್ತಾರೆ. ಈ ಐಆರ್‌ಡಿಪಿನಲ್ಲಿ ಇದಕ್ಕಾಗಿ ಏನು ಸಾಲ ಕೊಡುತ್ತಾರೋ ಅದನ್ನು ನಾನು ಹೇಟ್ ಮಾಡುತ್ತೇನೆ. ನಮ್ಮ ಕಡೆಯಲ್ಲಿ ೫೦೦ ಎಮ್ಮೆಯನ್ನು ತಂದು ಹಂಚಿದ್ದಾರೆ. ನಾನು ಇದನ್ನು ಏತಕ್ಕೆ ಹೇಟ್ ಮಾಡುತ್ತೇನೆಂದರೆ ಇವರು ಎಮ್ಮೆಗಾಗಿ ಕೊಡತಕ್ಕಂಥಾ ಸಾಲ ಏನು ಇದೆ ಇದನ್ನು ಸದುಪಯೋಗಪಡಿಸಿಕೊಳ್ಳಬೇಡವೇ ? ಹಾಲು ಉತ್ಪಾದನೆಗೋಸ್ಕರ ಈ ಸಾಲವನ್ನು ಕೊಟ್ಟಮೇಲೆ ಅದರಂತೆ ಸದುಪಯೋಗಮಾಡಿಕೊಳ್ಳಬೇಕು. ಆಮೇಲೆ ಏನು ಮಾಡುತ್ತಾರೆಂದರೆ ಎಮ್ಮೆ ಕಿವಿಯನ್ನು ಕತ್ತರಿಸಿಬಿಟ್ಟು ಎಮ್ಮೆ ಸತ್ತುಹೋಯಿತು ಎಂದು ಬಂದು ಹೇಳುತ್ತಾರೆ. ಅಲ್ಲಿಗೆ ಇವರು ಸಬ್ಸಿಡಿ ಕೊಟ್ಟದ್ದು ಏನು ಪ್ರಯೋಜನವಾಯಿತು. ಇವರು ಹಾಲಿನ ಉತ್ಪಾದನೆಗಾಗಿ ಎಮ್ಮೆ ತಂದು ಕೊಡುತ್ತಾರಲ್ಲಾ ಅದರಿಂದ ಹಾಲಿನ ಉತ್ಪಾದನೆ ಆಗಿದೆಯೋ ? ಇದನ್ನು ನೋಡಿದರೆ ಇವರ ಉತ್ಪಾದನೆ ಜೀರೋ. ಕೆಲವು ಕಡೆ ಈ ರೀತಿ ಮೋಸ ಮಾಡುತ್ತಾರೆ. ಎಮ್ಮೆ ತರುವುದಕ್ಕೆ, ದನಗಳನ್ನು ತರುವುದಕ್ಕೆ ಯಾವ ಉದ್ದೇಶದಿಂದ ಅವರಿಗೆ ಸಾಲ ಕೊಡುತ್ತಾರೋ ಆದರ ಉಪಯೋಗವನ್ನು ಅವರು ಸರಿಯಾಗಿ ಪಡೆದುಕೊಳ್ಳುತ್ತಿದ್ದಾರೆಯೋ ಇಲ್ಲವೇ ಎನ್ನುವುದಕ್ಕೆ ಒಂದು ಪ್ರಾಪರ್ ಚೆಕ್ ಏನೂ ಇಲ್ಲ. ಇದನ್ನು ಸರಿಯಾಗಿ ಉಪಯೋಗ ಮಾಡದೇ ಹೋದರೆ, ಇದನ್ನು ತಮ್ಮ ಅಧಿಕಾರಿಗಳು ಸರಿಯಾಗಿ ಚೆಕ್ ಮಾಡದೇ ಹೋದರೆ ಯಾವ ಹಣವನ್ನು ಕೊಟ್ಟರೂ ಸಹ ಪ್ರಯೋಜನವಾಗುವುದಿಲ್ಲ. ಆದುದರಿಂದ ನಾನು ಹೇಳುವುದು ನೀವು ಹಾಲು ಉತ್ಪಾದನೆಗೆ ಈ ಪ್ರೋಗ್ರಾಂನಲ್ಲಿ ಏನು ಸಹಾಯ ಮಾಡುತ್ತೀರೋ ಅದಕ್ಕೆ ತಕ್ಕಂತೆ ಉತ್ಪಾದನೆ ಬರದೇ ಹೋದರೆ ಏತಕ್ಕೆ ಕೊಡಬೇಕು. ಹಾಗೆಯೇ ೧೦ ಲಕ್ಷ ಟೊಮೊಟೋ ಹಣ್ಣು ಉತ್ಪಾದನೆ ಮಾಡಬೇಕು ಎಂದು ಹಾರ್ಟಿಕಲ್‌ಚರ್‌ನವರು ಪ್ರೋಗ್ರಾಂ ಹಾಕಿ ಸಹಾಯ ಮಾಡಿದರೆ ಅದರಿಂದ ಸರಿಯಾದ ಉತ್ಪಾದನೆ ಬರದೇ ಹೋದರೆ ಇಂಥಾ ಯೋಜನೆಗಳಿಂದ ಏನು ಪ್ರಯೋಜನ ? ಶ್ರೀ ಸೋಮಶೇಖರ್‌ರವರು ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ ಏನೆಂದರೆ ಒಂದೊಂದು ಹಾರ್ಟಿಕಲ್‌ಚರ್ ಫಾರಂ ಅನ್ನು ಪಂಚಾಯತ್ ಮಟ್ಟದಲ್ಲಿ ಮಾಡುತ್ತೇವೆಂದು ಹೇಳಿದ್ದಾರೆ. ಅದು ಇನ್ನೂ ರಾಜ್ಯ ಮಟ್ಟದಲ್ಲೇ ಆಗಿಲ್ಲ. ಹಾರ್ಟಿಕಲ್‌ಚರ್ ಫಾರಂ ಅನ್ನು ಪಂಚಾಯತ್ ಮಟ್ಟದಲ್ಲಿ ಬೆಳೆಸುವುದಕ್ಕೆ ತಾವು ಏನು ಯೋಜನೆ ಹಾಕಿಕೊಂಡಿದ್ದೀರಿ ಅನ್ನುವುದನ್ನು ಹೇಳುತ್ತೀರಾ ? ಇದಕ್ಕಾಗಿ ಶಹಾಬಾದ್‌ನ ಗೋಳಕ್ಕಿಯಲ್ಲಿ ೪೦-೫೦ ಎಕರೆ ಜಮೀನನ್ನು ತೆಗೆದುಕೊಂಡು ಅದಕ್ಕೆ ಸಾವಿರಾರು ರೂಪಾಯಿ ಖರ್ಚು ಮಾಡಿದ್ದೀರಿ? ಅದರಲ್ಲಿ ಔಟ್‌ಪುಟ್ ಎಷ್ಟು ಬಂದಿದೆ ಎನ್ನುವುದನ್ನು ಹೇಳುತ್ತೀರಾ ? ಅಲ್ಲಿ ಬಾವಿ ತೆಗೆದಿದ್ದೀರಿ, ತೆಂಗು ಹಾಕಿದ್ದೀರಿ. ನಿಂಬೆ ಹಾಕಿದ್ದೀರಿ. ಇಷ್ಟೆಲ್ಲಾ ಹಾಕಿದ್ದರೂ ಸಹ ಅಲ್ಲಿ ಏನೂ ಉತ್ಪಾದನೆ ಬಾರದೇ ಹೋದರೆ ಏತಕ್ಕೆ ಸಾವಿರಾರು ರೂಪಾಯಿ ಖರ್ಚು ಮಾಡುತ್ತೀರಾ ? ಅದನ್ನು ಬಂದ್ ಮಾಡಿ. ಅದರಿಂದ ಏನೂ ಉಪಯೋಗವಾಗುವುದಿಲ್ಲ. ಈ ಬಗ್ಗೆ ಯಾವುದೇ ಒಂದು ಪ್ರೋಗ್ರಾಂ ಹಾಕಿಕೊಂಡರೂ ಅದನ್ನು ಸರಿಯಾಗಿ ಇಂಪ್ಲಿಮೆಂಟ್ ಮಾಡಿ ಸಮಾಜಕ್ಕೆ ಉಪಯೋಗವಾಗುವ ಹಾಗೆ ಅದರಿಂದ ಔಟ್‌ಪುಟ್ ಬರುವ ಹಾಗೆ ಮಾಡಬೇಕು, ಇಲ್ಲದೇ ಹೋದರೆ ಅದು ಇದ್ದರೂ ಏನೂ ಪ್ರಯೋಜನವಾಗುವುದಿಲ್ಲ. ರಾಜ್ಯಮಟ್ಟದಲ್ಲೇ ಇದು ಸಕ್ಸಸ್‌ಫುಲ್ ಆಗದೇ ಹೋದರೆ ಇನ್ನು ಪಂಚಾಯತ್ ಮಟ್ಟದಲ್ಲಿ ಹೇಗೆ ಸಕ್ಸಸ್‌ಫುಲ್ ಆಗುತ್ತದೆ ? ಇನ್ನು ಅನಿಮಲ್ ಹಸ್ಬೆಂಡರಿ ವಿಷಯದಲ್ಲಿ ನಾನು ಒಂದೆರಡು ಮಾತನ್ನು ಹೇಳುತ್ತೇನೆ. ಈಗ್ಗೆ ೨-೩ ತಿಂಗಳ ಹಿಂದೆ ಈ ಒಂದು ವಿಚಾರದಲ್ಲಿ ಪೇಪರ್‌ನಲ್ಲಿ ಒಂದು ರಿಪೋರ್ಟ್ ಬಂದಿತ್ತು. ಅದೇನೆಂದರೆ ಎಫ್.ಆರ್.ಜಿ.ನಲ್ಲಿ ಸಿಕ್ಕಾಪಟ್ಟೆ ಆಕಳುಗಳು ಜಾಸ್ತಿ ಇರುವುದರಿಂದ ಅದನ್ನು ಕಟುಕರ ಕೈಗೆ ಕೊಟ್ಟು ಕತ್ತರಿಸಿ ಬಿಡಬೇಕು ಎಂದು.

ಛೇರ್ಮನ್.—ಇನ್ನೂ ಇದರ ಬಗ್ಗೆ ಮಾತನಾಡುವವರು ೨೦ ಜನರು ಇದ್ದಾರೆ, ತಾವು ಬೇಗನೆ ಮುಗಿಸಿ.

ಶ್ರೀ ಕೆ. ಬಿ. ಶಾನಪ್ಪ.—ಆದಷ್ಟು ಬೇಗನೆ ಮುಗಿಸುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಸ್ವಾಮಿ, ಮಂತ್ರಿಗಳು ಬೇಕಾದ ಹಾಗೆ ಬರಬಹುದು, ಬೇಕಾದ ಹಾಗೆ ಹೋಗಬಹುದು, ಅವರು ಹೋಗಿ ಊಟ ಮಾಡಿಕೊಂಡು ಬರುತ್ತಾರೆ. ನಾವು ಈಪೊತ್ತಿನ ದಿವಸ ಬೆಳಿಗ್ಗೆಯಿಂದಲೂ ಕೂತುಕೊಂಡಿದ್ದೇವೆ. ನಾಳೆ ಬೇಕಾದರೆ ಸ್ವಲ್ಪ ಬೇಗನೆ ಇಡಿ. ಸಾಮಾನ್ಯವಾಗಿ ಸಭೆ ೧೧ ಗಂಟೆಯಿಂದ ೫ ಗಂಟೆಯವರೆಗೆ ಇರಬೇಕು. ದಿನಾಲೂ ೬,೦೦ ಗಂಟೆಯಾಗುತ್ತಿದೆ. ಈ ಚರ್ಚೆಯನ್ನು ನಾಳೆಗೆ ಮುಂದುವರೆಸಿ. ಈವಾಗ ನಾವು ಇನ್ನು ಹೆಚ್ಚು ಹೊತ್ತು ಕೂತುಕೊಳ್ಳುವುದಕ್ಕಾಗುವುದಿಲ್ಲ.

ಛೇರ್ಮನ್.—ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಈಪೊತ್ತೇ ಈ ಡಿಮ್ಯಾಂಡ್ ಮುಗಿಯಬೇಕು ಎಂದು ತೀರ್ಮಾನವಾಗಿರುವುದು ತಮಗೂ ಗೊತ್ತಿದೆ.

ಶ್ರೀ ಕೆ. ಹೆಚ್. ಪಾಟೀಲ್.—ನಾಳೆ ಬೇಗ ಹಾಕಿಕೊಳ್ಳಿ, ನಾಳೆಯೂ ಇದನ್ನು ಚಾಲು ಮಾಡೋಣ. ಈಪೊತ್ತಿಗೆ ಇಲ್ಲಿಗೆ ಮುಗಿಸೋಣ. ಪ್ರೆಸ್‌ನವರೂ ಸಹ ಇದರ ಬಗ್ಗೆ ರಿಪೋರ್ಟ್ ಮಾಡಬೇಕಾದರೆ ೧೨ ಗಂಟೆಯಾಗುತ್ತದೆ.

ಛೇರ್ಮನ್.—ಈ ವಿಚಾರವನ್ನು ಬೇರೆ ಕಡೆ ತೆಗೆದುಕೊಳ್ಳಿ. ಈ ಸದನದಲ್ಲಿ ಅದನ್ನು ಹೇಳಿದರೆ ಪ್ರಯೋಜನ ಇಲ್ಲ. ಶ್ರೀ ಕೆ. ಬಿ. ಶಾನಪ್ಪನವರೇ ತಾವು ಬೇಗನೆ ಮುಗಿಸಿ.

ಶ್ರೀ ಕೆ. ಬಿ. ಶಾನಪ್ಪ.—ನಾನು ಏನು ಹೇಳುತ್ತಾ ಇದ್ದೆ ಎಂದರೆ ಎಫ್ ಆರ್ ಜಿ ಯಲ್ಲಿ ಸಿಕಾಪಟ್ಟೆ ಆಕಳುಗಳು ಇರುವುದರಿಂದ ಅದನ್ನು ಕಟುಕರ ಮನೆಗೆ ಏನು ಕಳುಹಿಸುತ್ತಿದ್ದಾರೆ. ಅದರ ಬದಲಾಗಿ ಇಥಿಯೋಪಿಯಾದಲ್ಲಿ ಸಾವಿರಾರು ಜನ ಏನು ಸಾಯುತ್ತಿದ್ದಾರೆ ಅವರಿಗಾದರೂ ಕಳುಹಿಸಿಕೊಟ್ಟರೆ ಪ್ರಯೋಜನವಾಗುತ್ತದೆ. ಗೌರ್ನಮೆಂಟ್ ಆಫ್ ಇಂಡಿಯಾದವರು ಆ ಆಕಳುಗಳನ್ನು ನಮಗೆ ಕಳುಹಿಸಿ ಕೊಡಿ ನಾವು ಟ್ರಾನ್ಸ್‌ಪೋರ್ಟೇಷನ್ ಛಾರ್ಜಸ್ ಕೊಡುತ್ತೇವೆಂದು ಬರೆದಿದ್ದಾರೆ ಎಂದು ಕೇಳಿದೆ. ಅದರಲ್ಲಿ ಕರ್ನಾಟಕಕ್ಕೆ ೬೦೦ ಆಕಳುಗಳು. ಈ ವಿಷಯದಲ್ಲಿ ನಾನು ಹೇಳುವುದೇನೆಂದರೆ ಇಲ್ಲಿನ ಹವಾಮಾನಕ್ಕೆ ಅದು ಅನುಗುಣವಾಗಿದ್ದರೆ ಆ ಆಕಳುಗಳನ್ನು ಪರ್ಚೇಸ್ ಮಾಡಿ. ಆದರೆ ಅದರಿಂದ ಉತ್ಪಾದನೆ ಮಾಡುವ ಹಾಗೆ ಇರಬೇಕು.

ಎರಡನೆಯದಾಗಿ ಈ ಬ್ಯಾಂಕನ್ನು ರಾಷ್ಟ್ರೀಕರಣ ಮಾಡಿದ ಉದ್ದೇಶ ಕೃಷಿ ಕಾರ್ಮಿಕರಿಗೆ ಮತ್ತು ವ್ಯವಸಾಯ ಮಾಡುವ ರೈತರಿಗೆ ಸಹಾಯವಾಗಬೇಕೆಂದು. ಈಪೊತ್ತಿನ ದಿವಸ ಅವರು ಫಾರ್ಮರ್ಸ್‌ಗೆ ಯಾವುದೇ ಪ್ರಕಾರವಾಗಿ ಸಹಾಯ ಮಾಡುತ್ತಿಲ್ಲ. ದೇಆರ್ ಅಡಮೆಂಟ್. ಡಿ ಸಿ ಹೇಳಲಿ, ಎಂಎಲ್ಎ ಹೇಳಲಿ, ಯಾರು ಹೇಳಿದರೂ ಸಹ ಬಿತ್ತುವುದಕ್ಕೇ ಆಗಲಿ, ಯಾವ ಕ್ರಾಪ್ ಲೋನ್‌ಗೇ ಆಗಲಿ ಅವರು ಕೊಡುತ್ತಾ ಇಲ್ಲ.

ಮಾನ್ಯ ಮಂತ್ರಿಗಳು ಇದರ ಬಗ್ಗೆ ಸರ್ಕ್ಯುಲರ್ ಕಳಿಸಬೇಕು. ಕ್ರಾಪ್‌ಲೋನ್ ಮುಂತಾದ ಪ್ರತಿಯೊಂದು ಸವಲತ್ತುಗಳನ್ನೂ ಬ್ಯಾಂಕ್‌ನವರು ಕೊಡುವ ಹಾಗೆ ವ್ಯವಸ್ಥೆ ಮಾಡಬೇಕು. ಎರಡನೆಯದಾಗಿ ನಮ್ಮ ರಾಜ್ಯದಲ್ಲಿದ್ದಂಥ ಜಾನುವಾರುಗಳ ಸಂಖ್ಯೆ ಸುಮಾರು ೨ ಕೋಟಿ ೩೫ ಲಕ್ಷ, ನಮ್ಮಲ್ಲಿದ್ದಂಥ ಆಸ್ಪತ್ರೆಗಳ ಸಂಖ್ಯೆ ೧೨೨೬. ಇದನ್ನು ಲೆಕ್ಕ ಮಾಡಿದರೆ ಜಾನುವಾರುಗಳಿಗೆ ಸರಿಯಾದ ಪ್ರೊಟೆಕ್ಷನ್ ಸಿಗುತ್ತಾ ಇಲ್ಲ. ಜಾನುವಾರುಗಳಿಗೆ ಪ್ರೊಟೆಕ್ಷನ್ ಕೊಡಬೇಕು ಎಂದು ಹೇಳುತ್ತೇವೆ. ಆದರೆ ಈ ಪ್ರಕಾರ ಸಣ್ಣ ವ್ಯವಸ್ಥೆಯಿಂದ ಕೊಡಲಿಕ್ಕೆ ಆಗುವುದಿಲ್ಲ ಆದ್ದರಿಂದ ದಯವಿಟ್ಟು ಹೊಸ ಹೊಸ ಆಸ್ಪತ್ರೆಗಳನ್ನು ಇನ್‌ಕ್ರೀಸ್ ಮಾಡಬೇಕು. ಡಾಕ್ಟರ್ಸ್, ಕಾಂಪೌಂಡರ್ಸ್ ಸಿಗುತ್ತಿಲ್ಲ. ಇದಕ್ಕೆ ಕಾರಣ ಬೀದರ್, ಗುಲ್ಬರ್ಗ ಮುಂತಾದ ಕಡೆಗಳಲ್ಲಿ ಕಾಲೇಜುಗಳನು ತೆಗೆದಿಲ್ಲ. ೨-೩ ಪಟ್ಟು ಡಾಕ್ಟರುಗಳನ್ನು ಕೊಡಬೇಕು, ಪದವಿ ಕಾಲೇಜುಗಳನ್ನು ತೆಗೆಯಬೇಕು. ೩೦೦; ೫೦೦; ೧೦,೦೦೦ ದನಗಳಿಗೆ ಒಬ್ಬ ಡಾಕ್ಟರ್ ಸಿಗುವಂತೆ ಮಾಡಬೇಕು. ದನಕರುಗಳ ಸಂರಕ್ಷಣೆ ಮಾಡಬೇಕು ಎಂದು ಹೇಳಿ, ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಛೇರ್ಮನ್.—ಮಾನ್ಯ ಯಡಿಯೂರಪ್ಪನವರೇ ನೀವು ಪ್ರಾರಂಭ ಮಾಡಿ.

ಶ್ರೀ ಎಂ. ಎಸ್. ಪಾಟೀಲ್.—ಈಗ ಇನ್ನು ಎಷ್ಟು ಹೊತ್ತು ಕುಳಿತುಕೊಳ್ಳುವುದು ?

ಶ್ರೀ ಕೆ. ಹೆಚ್. ಪಾಟೀಲ್.—ಈಗ ಮಾನ್ಯ ಯಡಿಯೂರಪ್ಪನವರು ಶುರುಮಾಡಿ ನಾಳೆಗೆ ಮುಂದುವರಿಸಲಿ.

ಛೇರ್ಮನ್.—ಇವತ್ತು ಡಿಸ್ಕಷನ್ ಮುಗಿಯಬೇಕಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ತಾವು ಹೇಳುವುದು ನಮಗೆ ಅರ್ಥವಾಗುತ್ತದೆ. ಆದರೆ ಗತ್ಯಂತರವಿಲ್ಲ.

ಛೇರ್ಮನ್.—ಇವತ್ತು ಅಟಲೀಸ್ಟ್ ಡಿಸ್ಕಷನ್‌ನ್ನಾದರೂ ಆದಷ್ಟು ಬೇಗ ಮುಗಿಸೋಣ.

ಶ್ರೀ ಕೆ. ಹೆಚ್. ಪಾಟೀಲ್.—ಅವರು ಮಾತನಾಡುವುದನ್ನು ಕೇಳುವುದಕ್ಕೆ ನಮಗೂ ಅಭಿಲಾಶೆ ಇದೆ. ಆದರೆ ಗತ್ಯಂತರವಿಲ್ಲ.

ಛೇರ್ಮನ್.—ಯಡಿಯೂರಪ್ಪನವರೇ, ನೀವು ಶುರುಮಾಡಿ.

† ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಸನ್ಮಾನ್ಯ ಅಧ್ಯಕ್ಷರೆ, ಈ ಕೃಷಿ, ತೋಟಗಾರಿಕೆ, ಮತ್ತು ಪಶುಸಂಗೋಪನಾ ಇಲಾಖೆಗಳ ಬಗ್ಗೆ.........

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮುಂಜಾನೆ ೧೦ ಗಂಟೆಯಿಂದ ರಾತ್ರಿ ೧೦ ಗಂಟೆವರೆಗೆ ಕೂರುತ್ತೇವೆ, ಬೆಳಿಗ್ಗೆಯಿಂದ ಕುಳಿತು ಈಗಲೂ ನೀವು ಹೇಳಿದಹಾಗೆ ಕೇಳಬೇಕು ಅಂದರೆ ಅದಕ್ಕೆ There is some limit.

ಛೇರ್ಮನ್.—ಬೇರೆ ಕಡೆ ಹೇಳಿ ಇತ್ಯರ್ಥಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮಗೆ ಹೇಳಬೇಕಲ್ಲ,

ಛೇರ್ಮನ್.—ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಬಿಸಿನೆಸ್ ಅಡ್ವೈಸರಿ ಕಮಿಟಿಗೆ ತಮ್ಮ ಮುಖಾಂತರವೇ ಹೋಗಬೇಕು,

ಛೇರ್ಮನ್.—ನಿಮ್ಮ ಪಾರ್ಟಿಯವರೇ ಹೇಳುತ್ತಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ,—ನಾಳೆ ೧೦ ಗಂಟೆಗೆ ಪ್ರಾರಂಭಮಾಡಿ. ಈಗ ಯಾರಿಗೂ ಮೂಡ್ ಇಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಇವತ್ತು ಇಂಪಾರ್ಟೆಂಟ್ ಪೋರ್ಟ್‌ಫೋಲಿಯೋಸ್ ಇದೆ. ಏಕೆ ಇಷ್ಟು ಅವಸರ ಮಾಡುತ್ತೀರಿ ?

ಛೇರ್ಮನ್.—ಯಡಿಯೂರಪ್ಪನವರು ಶುರುಮಾಡಲಿ.

ಶ್ರೀ ಎಂ. ಎಸ್. ಪಾಟೀಲ್.—ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್‌ನಲ್ಲಿ ರಾತ್ರಿ ೧೦ ಗಂಟೆವರೆಗೆ ಕೂರಬೇಕು ಎಂದು ತೀರ್ಮಾನವಾಗಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾಳೆ ೧೦ ಗಂಟೆಗೆ ಪ್ರಾರಂಭ ಮಾಡೋಣ.

ಛೇರ್ಮನ್.—ಇವತ್ತು ಡಿಸ್ಕಷನ್ ಮುಗಿಯಬೇಕು ಎಂದು ತೀರ್ಮಾನವಾಗಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಬೇಕಾದರೆ ನಾಳೆ ೯–೧೦ ಗಂಟೆಗೆ ಕೂರೋಣ.

ಛೇರ್ಮನ್.—ಈಗ ಆದಷ್ಟು ಮುಗಿಸೋಣ.

ಶ್ರೀ ಕೆ. ಹೆಚ್. ಪಾಟೀಲ್.—ಈಗ ಬೇಡಿ. ಮಾನ್ಯ ಯಡಿಯೂರಪ್ಪನವರು ಮಾನ್ಯ ಸಭಾಧ್ಯಕ್ಷರೆ ಎಂದು ಹೇಳುತ್ತಾರೆ, ಅಷ್ಟಕ್ಕೆ ಬಿಟ್ಟು ಬಿಡಿ. ನಾಳೆ ಮುಂದುವರಿಸಿ.

ಛೇರ್ಮನ್.—ಯಡಿಯೂರಪ್ಪನವರೆ, ನೀವು ಶುರುಮಾಡಿ.

ಶ್ರೀ ಬಿ. ಎಂ. ಇದಿನಬ್ಬ.—ಬೆಳಿಗ್ಗೆ ೧೦ ಗಂಟೆಯಿಂದ ಕುಳಿತ್ತಿದ್ದೇವೆ. ಹುರುಪು ಇರಬೇಕಾಗುತ್ತದೆ.

ಶ್ರೀ ಎಂ. ಎಸ್. ಪಾಟೀಲ್.—ಮಾನ್ಯ ಯಡಿಯೂರಪ್ಪನವರು ಬಿಸಿನೆಸ್ ಅಡ್ವೈಸರಿ ಕಮಿಟಿ ಮೆಂಬರ್ ಇದ್ದಾರೆ, ನಾನೂ ಕೂಡ ಇದ್ದೇನೆ, ನಾವೆಲ್ಲಾ ನಿನ್ನೆ ರಾತ್ರಿಯೆಲ್ಲಾ ಪ್ರವಾಸಮಾಡಿ ಬಂದಿದ್ದೇವೆ. ಇವತ್ತು ಮುಂಜಾನೆ ೧೦ ಗಂಟೆಯಿಂದ ಕುಳಿತ್ತಿದ್ದೇವೆ. ಟ್ರೆಜರಿ ಬೆಂಚ್‌ನಲ್ಲಿ ಯಾರೂ ಇಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—೧೨ ತಾಸು ಕೂರಬೇಕು ಎಂದು ಇದ್ದೀರಾ ?

ಶ್ರೀ ಬಿ. ರಾಚಯ್ಯ.—ನಾಳೆ ಕೊಶ್ಚನ್ ಅವರ್, ನಿಯಮ ೩೩೪ ಯಾವುದನ್ನೂ ತೆಗೆದುಕೊಳ್ಳದೇ ಹೋದರೆ ಬಹುಶಃ ಇದನ್ನು ಮುಗಿಸುವುದಕ್ಕೆ ಸಾಧ್ಯವಾಗುತ್ತದೆ. ಇದಕ್ಕೆ ಅವರು ಒಪ್ಪಿದರೆ ಮಾಡಬಹುದು.

ಶ್ರೀ ಎಂ. ಎಸ್. ಪಾಟೀಲ್,—ಕೊಶ್ಚನ್ ಅವರ್ ಏಕೆ ಬಿಡಬೇಕು?

ಶ್ರೀ ಕೆ. ಹೆಚ್. ಪಾಟೀಲ್.—ಕಂಡೀಷನ್ ಬೇಡ.

ಶ್ರೀ ಬಿ. ಎಸ್. ಯಡಿಯೂರಪ್ಪ —ನಾಳೆ ೯ ಗಂಟೆಗೆ ಪ್ರಾರಂಭ ಮಾಡೋಣ.

ಶ್ರೀ ಕೆ. ಹೆಚ್. ಪಾಟೀಲ್.—ನಾಳೆ ಯಾವುದಾದರೂ ಅಡ್ಜರ್ನ್‌ಮೆಂಟ್ ಮೋಷನ್ ಬಂದರೆ ಹೇಗೆ ?

ಛೇರ್ಮನ್.—ಪ್ರತಿಯೊಂದು ಪಕ್ಷಕ್ಕೂ ಇಷ್ಟು ಟೈಂ ಎಂದು ಅಲಾಟ್ ಮಾಡಿತ್ತು.

ಶ್ರೀ ಕೆ, ಹೆಚ್. ಪಾಟೀಲ್.—ರೂಲ್ ಪ್ರಕಾರ ಮಾಡಲಿಕ್ಕೆ ಬರುವುದಿಲ್ಲ. ಮಾತನಾಡುವಾಗ ಹೆಚ್ಚು ಕಡಿಮೆ ಬರುತ್ತದೆ. ಸಭಾಧ್ಯಕ್ಷರ ರೂಲಿಂಗನ್ನು ಮನ್ನಣೆ ಮಾಡಬೇಕು. ನೀವು ಹೇಳುವುದನ್ನು ಕೇಳುತ್ತೇವೆ. ಆದರೆ......

ಛೇರ್ಮನ್.—ಯಡಿಯೂರಪ್ಪನವರನ್ನು ಕರೆದಿದ್ದೇನೆ, ಅವರು ಮುಗಿಸಲಿ.

ಶ್ರೀ ಎಂ. ಎಸ್. ಪಾಟೀಲ್.—ನಾವು ನೇರವಾಗಿ ವಿರೋಧ ಮಾಡಬೇಕಾಗುತ್ತದೆ.

ಛೇರ್ಮನ್.—ಅವರು ಮುಗಿಸಲಿ.

ಶ್ರೀ ಕೆ. ಹೆಚ್. ಪಾಟೀಲ್.—ಯಡಿಯೂರಪ್ಪನವರು ಮಾನ್ಯ ಸಭಾಧ್ಯಕ್ಷರೆ. ಬೇಡಿಕೆಗಳನ್ನು ನಾನು ವಿರೋಧಿಸುತ್ತೇನೆ ಎಂದು ಹೇಳುತ್ತಾರೆ. ನಂತರ ನಾಳೆ ಮಾತನಾಡಲಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಪ್ರಾರಂಭ ಮಾಡಿದ್ದೇನೆ, ನಾಳೆ ಮುಂದುವರಿಸೋಣ. ಇಂತಹಪರಿಸ್ಥಿತಿಯಲ್ಲಿ ಮಾತನಾಡುವುದು ಎಷ್ಟರಮಟ್ಟಿಗೆ ಸೂಕ್ತವೊ ? ನಾನು ಈಗಾಗಲೇ ಪ್ರಾರಂಭ ಮಾಡಿದ್ದೇನೆ. ನಾಳೆ ೯ ಗಂಟೆಗೆ ಕುಳಿತುಕೊಳ್ಳೋಣ. ನಿಯಮ ೩೩೪ ಬೇಡ.

ಶ್ರೀ ಕೆ. ಹೆಚ್. ಪಾಟೀಲ್,—ಅವರು ಹೇಳುವುದನ್ನು ಕೇಳಬೇಕೋ ಬೇಡವೋ ? ನಾವು ಎದ್ದು ಹೋಗುತ್ತೇವೆ, ಎಲ್ಲಾ ವಿಷಯವನ್ನೂ ಮುಗಿಸಿಕೊಂಡು ಬಿಡಿ. ಅಗ್ರಿಕಲ್ಚರ್ ಅಂತಹ ಇಂಪಾರ್ಟೆಂಟ್ ಸಬ್ಜೆಕ್ಟ್ ಇದೆ, ಜನ ಇಲ್ಲದೆ ಮಾಡಿಕೊಳ್ಳುತ್ತಾರೆ ಅಂದರೆ ಏನು ? ತಾವು ಕೂಡ ಕೆಳಗೆ ಬಂದು ಸಜ್ಜೆಷನ್ ಮಾಡಬಹುದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ನಾಳೆ ಮುಂದುವರಿಸುತ್ತೇನೆ.

ಛೇರ್ಮನ್.—ಯಡಿಯೂರಪ್ಪನವರೆ ನಿಮ್ಮನ್ನು ಕರೆದಿದ್ದೇನೆ, ದಯವಿಟ್ಟು ಮಾತನಾಡಿ. ಮಾತನಾಡದೇಹೋದರೆ ನಿಮ್ಮ ಛಾನ್ಸ್ ಹೋಗುತ್ತದೆ.

ಶ್ರೀ ಬಸವರಾಜ ಎಚ್. ಪಾಟೀಲ್.—ನಮ್ಮ ಪ್ರಾಬ್ಲಮ್ಸ್‌ನ್ನು ಹೇಳುವುದಕ್ಕೆ ಅವಕಾಶಕೊಡಿ.

ಛೇರ್ಮನ್.—ನೀವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಸವರಾಜ ಎಚ್. ಪಾಟೀಲ್.—ನಾವು ಹೊಸ ಶಾಸಕರಿದ್ದೇವೆ. ನಮ್ಮ ಪಕ್ಷದವರಿಗೆ ಕೇವಲ ಇಬ್ಬರಿಗೆ ಅವಕಾಶ ಕೊಟ್ಟಿದ್ದೀರಿ. ನಾಳೆ ಬೆಳಿಗ್ಗೆ ಬರುವುದಕ್ಕೆ ತಯಾರಿದ್ದೇವೆ. ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇವೆ. ನಮಗೆಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕು. ಇದು ದೊಡ್ಡ ಡಿಮ್ಯಾಂಡ್ ಇದೆ.

ಛೇರ್ಮನ್.—ಯಡಿಯೂರಪ್ಪನವರೆ, ದಯವಿಟ್ಟು ನೀವು ಶುರುಮಾಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—೧೦ ನಿಮಿಷದಲ್ಲಿ ಮುಗಿಸುತ್ತೇನೆ.

ಶ್ರೀ ಎಂ. ಎಸ್. ಪಾಟೀಲ್.—ಎಷ್ಟು ಗಂಟೆವರೆಗೆ ಕೂರಬೇಕು ಎಂದು ಹೇಳಿಬಿಡಿ. ಕಂಪಲ್ಸರಿಯಾಗಿ ಕೂರಬೇಕು ಎಂದು ರೂಲ್ಸ್ ಮಾಡಿಬಿಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ. — ಮಾನ್ಯ ಅಧ್ಯಕ್ಷರೇ, ನಾವು ಕೋ-ಆಪರೇಷನ್ ಕೊಡುತ್ತಿದ್ದೇವೆ. ಈಗ ಸಮಯ ಆಗಿದೆ. ದಯವಿಟ್ಟು ನಾಳೆ ಮುಂದೂಡಿಸಿ. ನಾಳೆ ನಿಯಮ ೩೩೪ ಬೇಡ.

ಛೇರ್ಮನ್.—ಯಡಿಯೂರಪ್ಪನವರೇ ತಮ್ಮನ್ನು ಕೂಗಿದ್ದೇನೆ. ದಯವಿಟ್ಟು ಶುರುಮಾಡಿ.

ಶ್ರೀ ಕೆ. ಹೆಚ್. ಪಾಟೀಲ್.—ಅಧ್ಯಕ್ಷರೇ, ನಾವುಗಳು ಒಂದೇ ಸಮನೆ ೧೨ ತಾಸು. ೧೪ ತಾಸು ಕುಳಿತುಕೊಂಡಿರುವುದಕ್ಕಾಗುತ್ತದೆಯೇ ? ೧೪ ತಾಸು ಕೆಲಸ ಮಾಡಲು ಹೇಗೆ ಆಗುತ್ತದೆ. ಮಾತನಾಡುವುದಕ್ಕೆ ಮನಸ್ಸು ಬೇಡವೇ ? ಚೈತನ್ಯ ಬೇಡವೇ ? ವೇಳೆ ಆದ ಮೇಲೆ ತಿನ್ನಲಿಕ್ಕೆ ತಿಂಡಿ ಸಹಾ ಕ್ಯಾಂಟೀನ್‌ನಲ್ಲಿ ಇಟ್ಟಿರುವುದಿಲ್ಲ.

ಛೇರ್ಮನ್.—ಸುಮಾರು ಹತ್ತು ದಿವಸದಿಂದ ಇದೇ ರೀತಿ ಮಾಡುತ್ತಿದ್ದೇವೆ,

ಶ್ರೀ ಕೆ. ಹೆಚ್. ಪಾಟೀಲ್.—ಇದರ ಬಗ್ಗೆ ಅನೇಕ ಜನ ಮಾತನಾಡುವವರು ಇದ್ದಾರೆ. ಇದರ ಬಗ್ಗೆ ಅನೇಕ ಜನ ಮಾನ್ಯ ಸದಸ್ಯರು ಮಾತನಾಡುವವರು ಇದ್ದಾರೆ. ಬಹಳ ಮಹತ್ವದ ಸಲಹೆಯನ್ನು ಮಾಡುವವರಿದ್ದಾರೆ. ಬೆಳಿಗ್ಗೆ ಕುಳಿತುಕೊಳ್ಳೋಣ. ಈಗ ಮುಗಿಸುವುದು ಬೇಡ. ಇವರಿಗೆ ಮಾತನಾಡುವುದಕ್ಕೆ ಶಕ್ತಿ ಬೇಡವೇ ?

ಶ್ರೀ ಬಿ. ರಾಚಯ್ಯ.—ನಾಳೆ ಇಟ್ಟಿರತಕ್ಕಂಥ ಡಿಮ್ಯಾಂಡ್ಸ್ ನಾಳೆಗೆ ಮುಗಿಯಬೇಕು. ಪ್ರತಿ ದಿವಸವೂ ಬೇಗ ಕುಳಿತುಕೊಳ್ಳುತ್ತಿದ್ದೇವೆ. ಇವತ್ತು ಚರ್ಚೆಯಾದರೂ ಮುಗಿಯಲಿ.

ಶ್ರೀ ಕೆ. ಹೆಚ್. ಪಾಟೀಲ್.—ಬೆಳಿಗ್ಗೆ ೯ ಗಂಟೆಗೆ ಇಟ್ಟುಕೊಳ್ಳೋಣ.

ಛೇರ್ಮನ್.—ಯಡಿಯೂರಪ್ಪನವರು ಪ್ರಾರಂಭ ಮಾಡಲಿ. ನೋಡೋಣ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ ನಾನು ಒಂದೇ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಕೃಷಿ ಪಶುಸಂಗೋಪನೆ, ಮತ್ತು ತೋಟಗಾರಿಕೆಯ ಬಗ್ಗೆ ಮಾನ್ಯ ಹಿರಿಯ ಸದಸ್ಯರುಗಳು ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ಸನ್ಮಾನ್ಯ ರೇವಣಸಿದ್ದಯ್ಯನವರು ಸಹಾ ಸಾಕಷ್ಟು ವಿಷಯಗಳನ್ನು ಹೇಳಿದ್ದಾರೆ, ನಾನು ಮೊದಲು ಕೃಷಿ ಸಚಿವರಲ್ಲಿ ಒಂದೇ ಒಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಒಂದು ಕಾಲದಲ್ಲಿ ಹಳ್ಳಿಯಲ್ಲಿ ವಾಸ ಮಾಡುವಂಥ ರೈತ ತನ್ನ ಮಗ ವಿದ್ಯಾಭ್ಯಾಸಕ್ಕೆ ಹೋಗುತ್ತೇನೆ ಎಂದು ಹೇಳಿದರೆ ಮಿಡ್ಲ್ ಸ್ಕೂಲ್, ಹೈಸ್ಕೂಲಿಗೆ ಹೋಗಿ ಓದಿ ನೌಕರಿಗೆ ಹೋಗಬೇಕಾಗಿಲ್ಲ ಎಂದು ಹೇಳುವಂಥ ಒಂದು ಕಾಲ ಇತ್ತು. ಆದರೆ ರೇವಣಸಿದ್ದಯ್ಯನವರಂಥ ಹಿರಿಯ ಸದಸ್ಯರು ರೈತರ ಪರಿಸ್ಥಿತಿಯನ್ನು ಕಂಡಿದ್ದಾರೆ. ಸುಮಾರು ೬೦-೭೦ ರಷ್ಟು ರೈತರು ಇವತ್ತು ಜೀತ ಮಾಡುತ್ತಿದ್ದಾರೆ. ರೈತ ತನ್ನ ಮಗನಿಗೆ ಏನು ಹೇಳುತ್ತಾನೆ ಎಂದರೆ ಜಮೀನು ಮಾರಿದರೂ ಸರಿಯೇ, ಲಂಚ ಕೊಟ್ಟರೂ ಸರಿಯೇ ಒಂದು ಕೆಲಸ ಗಿಟ್ಟಿಸಿಕೋ, ಈ ಜಮೀನು ಬೇಡ ಎನ್ನುವಂತಹ ಸ್ಥಿತಿಗೆ ರೈತ ಇವತ್ತು ಬಂದಿದ್ದಾನೆ. ಹಳ್ಳಿಯಲ್ಲಿ ವಾಸ ಮಾಡುವಂತಹ ರೈತನ ಭಾವನೆಗಳು ಯಾವ ರೀತಿ ಇರುತ್ತವೆ ಎಂಬುದನ್ನು ನಿಮ್ಮ ಮೂಲಕ ಮಾನ್ಯ ಕೃಷಿ ಸಚಿವರಿಗೆ ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ. ಯಾವುದೇ ಸೌಲಭ್ಯ ಇವತ್ತು ರೈತನಿಗೆ ಸಿಗುತ್ತಿಲ್ಲ. ಅವನು ಉಪಯೋಗಿಸುವಂತಹ ವಸ್ತುಗಳ ಬೆಲೆ ಗಗನಕ್ಕೆ ಏರಿದೆ. ರೈತಾಪಿ ಕೆಲಸಕ್ಕೆ ಉಪಯೋಗಿಸುವಂತಹ ಉಪಕರಣಗಳ ಬೆಲೆಯೂ ಸಹಾ ಜಾಸ್ತಿಯಾಗಿವೆ. ಬೆಳೆಗಳಿಗೆ ರೋಗರುಜಿನಗಳು ಬಂದರೆ ಔಷಧಿಗಳನ್ನು ಸಂಪಾದಿಸಬೇಕು. ಔಷಧಿಗಳು ಬೇಕು

ಹಿಂದರೂ ಆ ಔಷಧಿಗಳ ಬೆಲೆಯೂ ಸಹಾ ಗಗನಕ್ಕೆ ಏರಿದೆ. ಯಾವುದೇ ಒಂದು ವಸ್ತುಗಳು ಕೆಲವು ಬೇಕು ಎಂದರೂ ರೈತ ಕೊಳ್ಳುವ ಸ್ಥಿತಿಯಲ್ಲಿಲ್ಲ. ರೈತ ಬೆಳೆಯುವ ಬೆಳೆಗಳಿಗೆ ಬೆಲೆಯನ್ನು ಜಾಸ್ತಿ ಮಾಡಿ. ಆದರೆ ಅವನು ಉಪಯೋಗಿಸತಕ್ಕಂಥ ಉಪಕರಣಗಳ ಮೇಲೆ ಬೆಲೆಯನ್ನು ಜಾಸ್ತಿ ಮಾಡ ಬೇಡಿ ಎಂದು ಕೇಳಿಕೊಳ್ಳುತ್ತೇನೆ. ರೈತನ ಬಗ್ಗೆ ಚಿಂತನೆಯನ್ನು ಮಾಡಿ ಈ ರೈತನ ಪರಿಸ್ಥಿತಿಯನ್ನು ಅಧ್ಯಯನ ಮಾಡುವಂತಹ ಒಂದು ತಜ್ಞರ ಸಮಿತಿಯನ್ನು ಮಾಡಿ ರೈತನ ಪರಿಸ್ಥಿತಿ ಉತ್ತಮಗೊಳ್ಳುವ ಹಾಗೆ ಒಂದು ಸಮಿತಿಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ರಾಗಿ, ಜೋಳ, ಬತ್ತದ ಬೆಲೆ ಯಲ್ಲಿ ಅವನಿಗೆ ಏನು ಖರ್ಚು ಬೀಳುತ್ತದೆ, ಅವನು ಪ್ರಾಮಾಣಿಕವಾಗಿ ಎಷ್ಟು ಲಾಭ ಪಡೆಯುತ್ತಾರೆ. ಒಂದು ಎಕರೆಗೆ ಎಷ್ಟು ಲಾಭ ಪಡೆಯಬೇಕು ಎನ್ನುವುದರ ಬಗ್ಗೆ ಅಧ್ಯಯನ ಮಾಡಿ ಒಂದು ಸಮಿತಿ ಯನ್ನು ನೇಮಕ ಮಾಡಿ ಎಂದು ಹೇಳುತ್ತೇನೆ. ಈ ರೀತಿಯ ಪರಿಸ್ಥಿತಿಯಲ್ಲಿ ರೈತ ಬದುಕುವುದಕ್ಕೆ ಸಾಧ್ಯ ಇದೆಯೇ ! ಇವತ್ತಿನ ದಿವಸ ಎತ್ತಿನ ಬೆಲೆ ಗಗನಕ್ಕೆ ಏರುತ್ತಿದೆ. ರೋಗರುಜಿನಗಳು ಬಂದರೆ ವೆಟರ್‌ನರಿ ಆಸ್ಪತ್ರೆಗಳಿಲ್ಲ. ಸ್ವಾತಂತ್ರ್ಯ ಬಂದು ೩೨ ವರ್ಷ ಆದರೂ ಆಸ್ಪತ್ರೆಗಳು ಎಲ್ಲ ಕಡೆ ತೆಗೆಯುವುದಕ್ಕೆ ಆಗಿಲ್ಲ. ೧೫–೨೦ ಮೈಲಿಯ ಆಸುಪಾಸಿನಲ್ಲಿ ಆಸ್ಪತ್ರೆಗಳನ್ನು ತೆಗೆಯುವುದಕ್ಕೆ ಆಗಿಲ್ಲ. ಸಮಯಕ್ಕೆ ಸರಿಯಾಗಿ ದನಕರುಗಳಿಗೆ ಔಷಧಿಯನ್ನು ಕೊಡಿಸುವ ಪರಿಸ್ಥಿತಿಯಲ್ಲಿಲ್ಲ. ಆದ್ದರಿಂದ ಇಂತಹ ವಿಚಿತ್ರವಾದ ಪರಿಸ್ಥಿತಿಯಲ್ಲಿ ಬದುಕುವುದಕ್ಕೆ ಹೇಗೆ ಸಾಧ್ಯ ? ದಯಮಾಡಿ ಒಂದು ಸಮಿತಿ ಯನ್ನು ಮಾಡಿ. ತಾವು ಅಧಿಕಾರಕ್ಕೆ ಬಂದ ಮೇಲೆ ಯೋಜನೇತರ ಬಾಬುಗಳಲ್ಲಿ ಹಣವನ್ನು ಖರ್ಚು ಮಾಡುತ್ತಿದ್ದೀರಿ. ಸಾರ್ವಜನಿಕ ಸಭೆಗಳಲ್ಲಿ ಘೋಷಣೆ ಮಾಡಿ ಯೋಜನೇತರ ಬಾಬುಗಳಲ್ಲಿ ಹಣವನ್ನು ಖರ್ಚು ಮಾಡುತ್ತಿದ್ದೀರಿ. ಅದನ್ನು ನಾನು ಟೀಕೆ ಮಾಡುತ್ತಿಲ್ಲ. ತಮ್ಮ ಘೋಷಣೆಯನ್ನು ಕಾರ್ಯ ರೂಪಕ್ಕೆ ತರಲು ಹಣವನ್ನು ಖರ್ಚು ಮಾಡುತ್ತಿದ್ದೀರಿ. ಪುಸ್ತಕ, ಬಟ್ಟೆ, ಮುಂತಾದವನ್ನು ಕೊಡಬಾರದೆಂದು ನಾನು ಹೇಳುತ್ತಿಲ್ಲ, ಪುಸ್ತಕ, ಬಟ್ಟೆ ಮುಂತಾದವುಗಳನ್ನು ಕೊಡಬೇಕಾದರೆ ಕೊಡಿ. ಬೇಡ ಎಂದು ಹೇಳುವುದಿಲ್ಲ. ಮೊದಲು ರೈತನಿಗೆ ಏನಾಗಬೇಕು ಎನ್ನುವುದನ್ನು ಯೋಚನೆ ಮಾಡಿ, ರೈತ ಪುಸ್ತಕ ಕೇಳುತ್ತಿಲ್ಲ, ಬಟ್ಟೆ ಕೇಳುತ್ತಿಲ್ಲ. ರೈತನಿಗೆ ಗೊಬ್ಬರ, ಕ್ರಿಮಿನಾಶಕ, ಕಡಿಮೆ ಬೆಲೆಯಲ್ಲಿ ಸಬ್ಸಿಡಿ ರೂಪದಲ್ಲಿ ಕೊಡಿಸುವಂತಾಗಬೇಕು. ಕರ್ನಾಟಕ ಆಗ್ರೋ ಇಂಡಸ್ಟ್ರೀಸ್‌ನಲ್ಲಿ ೪–೫ ಟ್ರಾಕ್ಟರ್ ಇದೆ. ೪–೫ ಎಕರೆಗೂ ಅವನೊಬ್ಬನೇ ಹೋಗಿ ಒಂದು ಗಂಟೆನೋ, ಎರಡು ಗಂಟೆನೋ ಉಳುಮೆ ಮಾಡತಕ್ಕಂಥ ಪ್ರಯತ್ನ ಮಾಡುತ್ತಾನೆ. ತಾಲ್ಲೂಕು ಹೆಡ್ ಕ್ವಾರ್ಟರ್ಸ್‌ನಲ್ಲಿ ೪–೫ ಟ್ರಾಕ್ಟರ್‌ಗಳನ್ನು ಇಡಿ. ಈಗ ಇಲ್ಲದೇ ಇರುವುದರಿಂದ ಅನುಕೂಲ ಆಗಿಲ್ಲ. ಅಲ್ಲಿ ಟ್ರಾಕ್ಟರ್ ಇದ್ದಿದ್ದರೆ ರೈತ ಒಂದು ಗಂಟೆಯಲ್ಲಿ ಉಳುಮೆ ಮಾಡುತ್ತಿದ್ದ.

೨–೩೦ ಪಿ.ಎಂ.

ಈ ರೀತಿ ರೈತನಿಗೆ ಬೇಕಾದಂಥದ್ದು ಏನು ಮಾಡುತ್ತಿದ್ದೀರಿ? ಪಿ.ವಿ.ಸಿ. ಪೈಪ್‌ಗೆ ಪಕ್ಕದ ಮಹಾರಾಷ್ಟ್ರದಲ್ಲಿ ಟ್ಯಾಕ್ಸ್ ಎಕ್ಸ್‌ಟೆಂಷನ್ ಕೊಟ್ಟಿದ್ದಾರೆ. ರೈತರು ಈ ಪೈಪುಗಳನ್ನು ಪಂಪುಸೆಟ್ಟುಗಳಿಗೆ ಮತ್ತು ಕುಡಿಯುವ ನೀರಿಗೋಸ್ಕರ ಉಪಯೋಗಿಸುತ್ತಾರೆ. ಇದರ ಮೇಲೆ ಪಕ್ಕದ ಮಹಾರಾಷ್ಟ್ರದಲ್ಲಿ ಟ್ಯಾಕ್ಸ್ ಇಲ್ಲ. ಈಗ ಇದರ ಮೇಲೆ ನಮ್ಮ ರಾಜ್ಯದಲ್ಲಿ ೧೩ ಪರ್ಸೆಂಟ್ ಟ್ಯಾಕ್ಸ್ ಇದೆ. ಈ ಇಲಾಖೆಗೆ ಇದು ಸಂಬಂಧಪಡದೇ ಇದ್ದರೂ ಇದರ ಬಗ್ಗೆ ಕೃಷಿ ಸಚಿವರು ಯೋಚನೆ ಮಾಡಬೇಕು. ಇದರಿಂದ ಪರಿಣಾಮ ಏನಾಗುತ್ತದೆ ಎಂದರೆ ಪೈಪುಗಳನ್ನು ಮಹಾರಾಷ್ಟ್ರದಿಂದ ಈ ರಾಜ್ಯದ ಜನ ತರುತ್ತಿದ್ದಾರೆ, ಇದರಿಂದ ನಮಗೆ ಕೋಟ್ಯಾಂತರ ರೂಪಾಯಿ ಬರತಕ್ಕಂಥದ್ದು ಹೊರಟು ಹೋಗುತ್ತದೆ. ಇದರಿಂದ ಸಣ್ಣಪುಟ್ಟ ಇಂಡಸ್ಟ್ರಿಗಳು ಕೂಡ ನೆಲ ಹಿಡಿದಿವೆ. ರೈತ ಉಪಯೋಗಿಸತಕ್ಕಂಥ ವಸ್ತುಗಳ ಮೇಲೆ ಭಾರ ಏರುವಂಥ ಪ್ರಯತ್ನ ಮಾಡುತ್ತಿದ್ದೀರಿಯೇ ಹೊರತು ರೈತನನ್ನು ಸುಧಾರಿಸತಕ್ಕಂಥ ಪರಿಸ್ಥಿತಿಯಲ್ಲಿ ಇಲ್ಲ. ಇವತ್ತು ಕೃಷಿ ಇಲಾಖೆಯಲ್ಲಿ ಕೃಷಿ ಸಹಾಯಕರು ಇದ್ದಾರೆ. ಅವರು ಏನಾದರೂ ಹೋಗಿ ರೈತರ ಜಮೀನನ್ನು ನೋಡುತ್ತಿದ್ದಾರೆಯೇ, ಸಲಹೆಗಳನ್ನು ಕೊಡುತ್ತಿದ್ದಾರೆಯೇ? ಪ್ರಾಮಾಣಿಕವಾಗಿ ಕೃಷಿ ಸಹಾಯಕರಾಗಿ ಅವರಿಗೆ ಜ್ಞಾನ ಇದೆಯೇ? ರೈತ ಏನು ಮಾಡಬೇಕು ಎನ್ನುವ ಬಗ್ಗೆ ಸೂಚನೆ ಕೊಡತಕ್ಕಂಥ ಶಕ್ತಿ ಅವರಿಗೆ ಇಲ್ಲ. ವಿಚಿತ್ರವಾದ ಬರಗಾಲ ಇರುವಂಥ ಪರಿಸ್ಥಿತಿಯಲ್ಲಿ ನಿಮ್ಮ ಇಲಾಖೆಗೆ ಏನು ಕೆಲಸ ಇದೆ? ಈ ಸಂದರ್ಭದಲ್ಲಾದರೂ ಕೂಡ ಈಗ ಅವರಿಗೆ ಒಂದು ವರ್ಷ ಟ್ರೈನಿಂಗ್ ಕೊಡು ವಂಥ ವ್ಯವಸ್ಥೆಯನ್ನಾದರೂ ಮಾಡಿ. ಇದಕ್ಕೆ ಬೇಕಾದಂಥ ಸ್ಥಳಾವಕಾಶಕ್ಕೆ ನಮ್ಮ ಕ್ಲಾಸ್ ರೂಮ್ ಗಳನ್ನು ಬಿಡಿಸಿಕೊಡುತ್ತೇವೆ. ಅವರಿಗೆ ಸರಿಯಾದಂಥ ತರಬೇತಿಯನ್ನು ಕೊಡುವಂಥಹ ವ್ಯವಸ್ಥೆ

ಯನ್ನು ಮಾಡಿ. ಅವರು ಯಾವ ರೀತಿ ಕೆಲಸ ಮಾಡಬೇಕು? ಯಾವ ರೀತಿ ಔಷಧಿಯನ್ನು ಸಿಂಪಡಿಸಬೇಕು? ಅದರ ಬಗ್ಗೆ ತಿಳುವಳಿಕೆ ಕೊಡತಕ್ಕಂಥ ಶಕ್ತಿ ಅವರಲ್ಲಿಲ್ಲ. ಏನೋ ಒಂದು ಮೋಜಿಗೋಸ್ಕರ ಹೋಗಿ ಬರತಕ್ಕಂಥ ಸಂಪ್ರದಾಯವನ್ನು ಇಟ್ಟುಕೊಂಡಿದ್ದಾರೆ. ಕೃಷಿ ಸಹಾಯಕರ ನೇಮಕ ಅನೇಕ ಕಡೆಗಳಲ್ಲಿ ಆಗಿಲ್ಲ. ಆದರೆ ಕೆಲವು ಕಡೆ ನೇಮಕ ಆಗಿದೆ. ಆ ನೇಮಕಾತಿ ಸಮಿತಿಯಲ್ಲಿ ಒಂದೆರಡು ಜಿಲ್ಲೆಯಲ್ಲಿ ಮಾತ್ರ ಕೃಷಿ ತಜ್ಞರು ಇದ್ದಾರೆ. ಕೃಷಿ ಸಹಾಯಕರು ಕೆಲವು ಜಿಲ್ಲೆಗಳಿಗೆ ಮತ್ತು ಕೆಲವು ತಾಲ್ಲೂಕುಗಳಿಗೆ ಹೋಗುವುದಕ್ಕೆ ಇಷ್ಟಪಡುವುದಿಲ್ಲ. ಆದ್ದರಿಂದ ನೇಮಕ ಮಾಡುವಾಗ ಪ್ರತಿಯೊಂದು ಜಿಲ್ಲೆಗೂ ಕೂಡ ನೇಮಕ ಮಾಡಬೇಕಾಗಿ ವಿನಂತಿ. ಭ್ರಷ್ಟಾಚಾರದ ಬಗ್ಗೆ ಎಲ್ಲರೂ ಮಾತನಾಡುತ್ತಾರೆ, ಆದರೆ ನಾನು ಇದರ ಬಗ್ಗೆ ಹೆಚ್ಚು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ರೈತರ ಮಗನಾಗಿರತಕ್ಕ ಮಾನ್ಯ ಪ್ರಕಾಶ್‌ರವರು ಪ್ರಾಮಾಣಿಕವಾಗಿ ಕೃಷಿ ಅಭಿವೃದ್ಧಿಯ ಬಗ್ಗೆ ಪರಿಸ್ಥಿತಿಯನ್ನು ಅಧ್ಯಯನ ಮಾಡಿ ರೈತರಿಗೆ ಬೇಕಾಗುವಂಥ ಸೌಲಭ್ಯವನ್ನು ಒದಗಿಸಿಕೊಡುವ ವ್ಯವಸ್ಥೆಯನ್ನು ಮಾಡಬೇಕು. ಇವತ್ತು ಬೆಲೆ ಏರಿಕೆ ಆಗುತ್ತಿದೆ ಎನ್ನುವ ವಿಚಾರವನ್ನು ಜನಸಾಮಾನ್ಯರು ಹೇಳುತ್ತಿದ್ದಾರೆ. ರೈತರು ಬೆಳೆಯುತಕ್ಕ ಬೆಳೆಗೆ ಬೆಲೆ ಕೊಡುವುದು ಹಾಗೆಯೇ ಇರಲಿ. ಆತ ಬೆಳೆಯುವುದಕ್ಕೆ ಬೇಕಾದಂಥ ಉಪಕರಣಗಳು ಏನಿದೆ. ಅದರ ಬೆಲೆಯನ್ನು ಕಡಿಮೆ ಮಾಡಲಿಕ್ಕೆ ಪ್ರಯತ್ನ ಮಾಡಬೇಕು. ಅದರ ಬಗ್ಗೆ ತಾವು ಅಭ್ಯಾಸ ಮಾಡಿ ಅವರಿಗೆ ಬೇಕಾದಂಥ ಸವಲತ್ತುಗಳನ್ನು ಒದಗಿಸಲಿಕ್ಕೆ ಒಂದು ಸಮಿತಿಯನ್ನು ಮಾಡಿ ಅವರಿಂದ ಸಲಹೆಗಳನ್ನು ಪಡೆಯಂತಕ್ಕಂಥ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ನಾನು ಮಾತನಾಡುತ್ತಿರುವುದನ್ನು ಬೇರೆ ಸದಸ್ಯರು ಕೆಂಪು ಕಣ್ಣಿನಿಂದ ನೋಡುತ್ತಿದ್ದಾರೆ. ಇವರು ಯಾವಾಗ ಮುಗಿಸುತ್ತಾರೆ ಎಂದು ಗಡಿಯಾರವನ್ನೇ ನೋಡುತ್ತಿದ್ದಾರೆ. ಈ ರೀತಿ ಈ ಸದನ ನಡೆಯುತ್ತಿದೆ.............

(ಗೊಂದಲ)

ಶ್ರೀ ಕೆ. ಎಚ್. ಪಾಟೀಲ್.—ಅಧ್ಯಕ್ಷರೇ ಪಾಯಿಂಟ್ ಆಫ್ ಆರ್ಡರ್ ಮಾನ್ಯ ಸದಸ್ಯರು ಇನ್ನು ಮಾತನಾಡುವುದು ಇದೆ ಎಂದು ಹೇಳುತ್ತಿದ್ದಾರೆ. ಈಗಲೇ ಅವರನ್ನು ಮುಗಿಸಿ ಎಂದು ಹೇಳುವುದಕ್ಕಾಗುವುದಿಲ್ಲ. ಈಗ ಅವರು ಪ್ರಾರಂಭ ಮಾಡಿದ್ದಾರೆ. ನಾಳೆ ಅವರು ಮುಗಿಸಲಿ.

(ಗೊಂದಲ)

ಛೇರ್ಮನ್.—ನೀವು ಎತ್ತಿರತಕ್ಕಂಥ ವಿಚಾರದಲ್ಲಿ ಪಾಯಿಂಟ್ ಆಫ್ ಆರ್ಡರ್ ಏನೂ ಬರುವುದಿಲ್ಲ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಇವತ್ತು ಬೆಳಿಗ್ಗೆ ೧೦ ಗಂಟೆಗೆ ಸಭೆ ಸೇರಿದ್ದು, ನಾವು ಇನ್ನು ಎಷ್ಟು ಹೊತ್ತಿನವರೆಗೆ ಕುಳಿತುಕೊಳ್ಳಬೇಕು? ಈ ತರಹ ಮಾಡಿದರೆ ಆಗುವುದಿಲ್ಲ. ಮಾನ್ಯ ಸದಸ್ಯರು ಮಾತನಾಡಲಿಕ್ಕೆ ಪ್ರಾರಂಭ ಮಾಡಿದ್ದಾರೆ. ನಾಳೆ ಅವರು ಕಂಟಿನ್ಯೂ ಮಾಡಲಿಕ್ಕೆ ಅವಕಾಶ ಕೊಡಿ. ಈಗ ಸಭೆಯನ್ನು ಮುಗಿಸುವುದು ಒಳ್ಳೆಯದು. ಮಾನ್ಯ ಸದಸ್ಯರಿಗೆ ಒತ್ತಾಯ ಮಾಡಿ ಮಾತನಾಡಿ ಎಂದರೆ ಅವರು ಯಾವರೀತಿ ಮಾತನಾಡಲಿಕ್ಕೆ ಸಾಧ್ಯ ಇದೆ? ಈ ಸದನದಲ್ಲಿ ನಾವೆಲ್ಲಾ ಬಾಂಡೆಡ್ ಲೇಬರರ್ರೇ?

ಛೇರ್ಮನ್.—ಬಿಸಿನೆಸ್ ಅಡ್ವೈಸರಿ ಕಮಿಟಿ ತೀರ್ಮಾನದ ಪ್ರಕಾರ ಇವತ್ತು ಸಭೆ ನಡೆಯುತ್ತಾ ಇದೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇನ್ನು ಒಂದು ದಿವಸ ಅಧಿವೇಶನ ಮುಂದಕ್ಕೆ ಹೋದರೆ ಏನು ತೊಂದರೆ ಇದೆ?

ಛೇರ್ಮನ್.—ನಾನು ತಮ್ಮನ್ನು ಸಹಕರಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ಬಿಸಿನೆಸ್ ಕಮಿಟಿ ತೀರ್ಮಾನದ ಪ್ರಕಾರ ಸಭೆ ನಡೆಸುತ್ತಿದ್ದೇವೆ ಎಂದು ಹೇಳುತ್ತಿದ್ದೀರಿ. ಹೌಸ್ ಒಪಿನಿಯನ್ ಇದ್ದಾಗ ಛೇಂಜ್ ಆಗಬಾರದು ಎಂದು ಏನೂ ಇಲ್ಲ.

ಛೇರ್ಮನ್.—ಸದನದ ಒಪಿನಿಯನ್ ತೆಗೆದುಕೊಳ್ಳುವುದು ಈಗ ಬೇಡ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಒಬ್ಬರಿಗೆ ಬೇಕು ಎಂದು ಈ ರೀತಿ ಎಕ್ಸ್‌ಟೆಂಡ್ ಮಾಡುವುದು ಸರಿಯಲ್ಲ.

(ಗೊಂದಲ)

ಛೇರ್ಮನ್.—ಈಗ ಯಡಿಯೂರಪ್ಪನವರು ಮಾತನಾಡಲಿಕ್ಕೆ ಅವಕಾಶ ಮಾಡಿ ಕೊಡಿ. ಅವರು ಬೇಗ ಮುಗಿಸಿ ಬಿಡುತ್ತಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಈ ಮೊಬೈಲ್ ವೆಟರ್ನರಿ ಯೂನಿಟ್ಸ್ ಏನು ಇದೆ. ಅಲ್ಲಿ ವ್ಯಾನುಗಳು ಇಲ್ಲ. ಮೊಬೈಲ್ ಯೂನಿಟ್ಸ್‌ನಲ್ಲಿ ವ್ಯಾನ್‌ಗಳು ಇರುವಂತಹ ಕಡೆ ಡೀಸಲ್ ಇಲ್ಲದೆ, ರಿಪೇರಿ ಇಲ್ಲದೆ ನಿಂತಿದೆ. ಇರುವ ಕಡೆ ಅದು ಸರಿಯಾಗಿ ಉಪಯೋಗ ಆಗುತ್ತಿಲ್ಲ. ಮತ್ತೊಂದು ಕಡೆ ಇವುಗಳು ಬೇಕು ಎಂದು ಬೇಡಿಕೆ ಇದೆ. ಈ ರೀತಿ ವಿಚಿತ್ರವಾದಂಥ ವ್ಯವಸ್ಥೆ ಕಂಡುಬರುತ್ತಿದೆ. ನಾನು ಮೂರು ವರ್ಷಗಳಲ್ಲಿ ಎರಡನೇ ಬಾರಿ ಆಯ್ಕೆಯಾಗಿ ಬಂದಿದ್ದೇನೆ. ೧೫-೨೦ ಗ್ರಾಮಗಳಿಗೆ ಒಂದೊಂದು ವೆಟರ್ನರಿ ಆಸ್ಪತ್ರೆಯನ್ನು ಕಳೆದ ಮೂರು ವರ್ಷದಿಂದಲೂ ಸರ್ಕಾರ ನಮ್ಮ ತಾಲ್ಲೂಕಿಗೆ ಮಂಜೂರು ಮಾಡಿಕೊಡಲಿಕ್ಕೆ ಸಾಧ್ಯವಾಗಲಿಲ್ಲ. ಅವಶ್ಯಕ ಇರುವಂಥ ಕಡೆಗಳಲ್ಲಿ ವೆಟರ್ನರಿ ಆಸ್ಪತ್ರೆಗಳು ಬೇಕಾಗುತ್ತದೆ. ಜನಗಳಿಂದ ಬೇಡಿಕೆ ಇರುವಂಥ ವಿಷಯಕ್ಕೆ ತಾವು ಮಾಡುತ್ತಿರುವುದು ಅವಶ್ಯಕ ಇಲ್ಲ ಎಂದು ನಾನು ಹೇಳುವುದಿಲ್ಲ. ಆದರೆ ಯಾವುದು ಅಷ್ಟೊಂದು ಪ್ರಾಮುಖ್ಯತೆ ಇಲ್ಲವೋ ಅಂಥದಕ್ಕೆ ಯೋಜನೇತರ ಬಾಬಿನಲ್ಲಿ ಖರ್ಚು ಮಾಡತಕ್ಕಂಥ ಪರಿಸ್ಥಿತಿಗೆ ಬಂದಿರುವುದರಿಂದ ಯಾವುದೇ ಮಂತ್ರಿಗಳ ಹತ್ತಿರ ಹೋಗಿ ಕೈ ಮುಗಿದರೂ ಸಹ ನಮ್ಮಲ್ಲಿ ದುಡ್ಡಿಲ್ಲ ಎಂದು ಹೇಳುವಂಥ ಪರಿಸ್ಥಿತಿ ಬಂದಿದೆ. ರೈತರಿಗೆ ಬೇಕಾಗತಕ್ಕ ಅನುಕೂಲಗಳನ್ನು ಕಲ್ಪಿಸಿಕೊಡುವ ಬಗ್ಗೆ ನಾನು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದು ಇಷ್ಟೆ. ದಯಮಾಡಿ ಒಂದು ತಜ್ಞರ ಸಮಿತಿಯನ್ನು ಮಾಡಿ ರೈತರಿಗೆ ಬೇಕಾದಂಥ ಸವಲತ್ತುಗಳನ್ನು ಒದಗಿಸಿಕೊಡಬೇಕೆಂದು ಕೇಳಿಕೊಂಡು ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಚೇರ್ಮನ್.—ಶ್ರೀ ರಾಜುಗೌಡ.—ಶ್ರೀ ರಾಜುಗೌಡ (ಸದಸ್ಯರು ಗೈರುಹಾಜರು)

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅಧ್ಯಕ್ಷರೇ, ಈಗಾಗಲೇ ಸಾಕಷ್ಟು ಸಮಯ ಆಗಿರುವುದರಿಂದ ಮಾನ್ಯ ಸದಸ್ಯರೆಲ್ಲರೂ ಎದ್ದು ಹೋಗುತ್ತಿದ್ದಾರೆ. ಆದ್ದರಿಂದ ನಾಳೆಗೆ ಸಭೆಯನ್ನು ಮುಂದುವರಿಸುವುದು ಒಳ್ಳೆಯದು. ಈಗಾಗಲೇ ಪ್ರೆಸ್‌ನವರು ಕೂಡ ಎಲ್ಲ ಹೊರಗಡೆ ಹೋಗಿದ್ದಾರೆ ಆದ್ದರಿಂದ ಸದನವನ್ನು ಮುಗಿಸುವುದು ಒಳ್ಳೆಯದು.

ಶ್ರೀ ರಾಜವರ್ಧನ್.—ನಿಯಮ ೩೩ನ್ನು ಬಿಟ್ಟು ನಾಳೆ ಉಳಿದ ಕಾರ್ಯ ಕಲಾಪಗಳನ್ನು ತೆಗೆದುಕೊಳ್ಳುವುದಾದರೆ ಇವತ್ತು ಸದನವನ್ನು ಮುಂದೂಡಬಹುದು.

ಶ್ರೀ ಎಂ. ಎಸ್. ಪಾಟೀಲ್.—೩೩ರ ನಿಯಮವನ್ನು ಬಿಡಲಿಕ್ಕೆ ಆಗುವುದಿಲ್ಲ. ಪ್ರಶ್ನೆಗಳನ್ನು ಸಹಾ ಬಿಡುವುದಕ್ಕೆ ಆಗುವುದಿಲ್ಲ. ರೆಗ್ಯುಲರ್ ಬಿಸಿನೆಸ್ ಇರಲಿ. ಈಗ ಇದರ ಬಗ್ಗೆ ಮೂರು ಜನ ಮಂತ್ರಿಗಳು ಉತ್ತರ ಕೊಡಬೇಕಾಗಿದೆ. ಅವರು ಯಾವ ರೀತಿ ಉತ್ತರ ಕೊಡಲಿಕ್ಕೆ ಸಾಧ್ಯ ಇದೆ,

ಶ್ರೀ ಪಿ. ಜಿ. ಆರ್. ಸಿಂಧ್ಯ.—ಜುಲೈ ೧೯ನೇ ತಾರೀಖಿನಿಂದ ಅಧಿವೇಶನವನ್ನು ಕರೆದಿದ್ದೇವೆ. ನಮ್ಮ ಕಡೆ ಸದಸ್ಯರಿಗೆ ಮಾತನಾಡಲಿಕ್ಕೆ ಅವಕಾಶ ಸಿಕ್ಕಿಲ್ಲ ಎಂದು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರು ಇದರ ಬಗ್ಗೆ ಗಮನಿಸಿದ್ದೀರಿ. ಆದರೆ ಸಮಸ್ಯೆ ಏನು ಇದೆ. ಯಾವುದೇ ಒಂದು ವಿಷಯದ ಬಗ್ಗೆ ಆ ಕಡೆ ಇರತಕ್ಕಂಥ ಸದಸ್ಯರು ವಾದವನ್ನು ಮಾಡಲಿ ವಿಷಯಗಳನ್ನು ಹೇಲಿಳ ಆದರೆ ಹೇಳಿದ್ದನ್ನೇ ಹೇಳುವುದರಿಂದ ಪ್ರಯೋಜನ ಆಗುವುದಿಲ್ಲ. ಸಮಯದ ಬಗ್ಗೆ ಎಷ್ಟೊಂದು ಗಮನವನ್ನು ಇಟ್ಟುಕೊಂಡಿದ್ದಾರೆ, ಅದು ತಮಗೇ ಗೊತ್ತಿರುವ ವಿಷಯ. ಈಗ ಜುಲೈ ೧೯ನೇ ತಾರೀಖಿನಿಂದ ಅಧಿವೇಶನ ಪ್ರಾರಂಭವಾಗಿದೆ. ಈ ತಿಂಗಳು ೧೯ನೇ ತಾರೀಖಿನವರೆಗೂ ಸದನವನ್ನು ನಡೆಸಲಿಕ್ಕೆ ಆಗುತ್ತದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ರೀತಿ ಆಗುತ್ತೆ ಎನ್ನುವುದು ಗೊತ್ತಿದ್ದರೆ ಇದಕ್ಕಿಂತಲೂ ಮುಂಚೆ ಅಧಿವೇಶನವನ್ನು ಕರೆಯಬೇಕಾಗಿತ್ತು. ಹಿಂದೆಲ್ಲಾ ಮೂರು ಮೂರು ತಿಂಗಳು ಅಧಿವೇಶನ ನಡೆದಿದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅಧ್ಯಕ್ಷರೇ ನಿಯಮ ೩೩೪ರ ಬಗ್ಗೆಯೂ ಕೂಡ ಚರ್ಚೆಯಾಗ ಬೇಕು ಎಂದು ಹೇಳುತ್ತಾರೆ, ಪ್ರತಿಯೊಂದು ಚರ್ಚೆಯ ಮೇಲೂ ಪಾರ್ಲಿಮೆಂಟರಿ ಕೇಳತಕ್ಕಂಥದ್ದು ಪಾಯಿಂಟ್ ಆಫ್ ಆರ್ಡರ್ ಹೇಳತಕ್ಕಂಥದ್ದು ಇದೆ, ಈ ರೀತಿ ಆದರೆ ಸಮಯಕ್ಕೆ ಸರಿಯಾಗಿ ಸದನ ವನ್ನು ಹೇಗೆ ನಡೆಸಲಿಕ್ಕೆ ಸಾಧ್ಯ

ಚೇರ್ಮನ್.—ಈಗ ಜಯಕುಮಾರ್‌ರವರು ಮಾತನಾಡಿ ಬೇಗ ಮುಗಿಸಬೇಕು.

ಶ್ರೀ ಡಿ. ಟಿ. ಜಯಕುಮಾರ್.—ಮಾನ್ಯ ಅಧ್ಯಕ್ಷರೇ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅಧ್ಯಕ್ಷರೇ, ಯಡಿಯೂರಪ್ಪನವರು ಮಾತನಾಡಿದ ಮೇಲೆ ಸದನವನ್ನು ಮುಂದೂಡುತ್ತೇವೆ ಎಂದು ಹೇಳಿದ್ದೀರಿ. ಈಗ ಮತ್ತೆ ಮುಂದುವರಿಸುತ್ತಿದ್ದೀರಾ ? ಇದು ಸರಿಯೇ ?

(ಗೊಂದಲ)

ಶ್ರೀ ಕೆ. ಹೆಚ್. ಪಾಟೀಲ್.—ಅಧ್ಯಕ್ಷರೇ, ಇನ್ನು ಎಷ್ಟು ಸಮಯ ಬೇಕಾಗುತ್ತದೆ ಎಂದು ತಿಳಿಸಿಬಿಟ್ಟರೆ ನಾವು ಅಲ್ಲಿಯವರೆಗೂ ಇಲ್ಲಿಯೇ ಇದ್ದುಬಿಡುತ್ತೇವೆ. ಈಗ ನಾವು ಮಾತನಾಡುವುದೆಲ್ಲಾ ಹುಡುಗರು ಮಾತನಾಡುವ ತರಹ ಎಂದು ತಿಳಿದುಕೊಳ್ಳುತ್ತಿದ್ದೀರಾ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅಧ್ಯಕ್ಷರು ಬಿಸಿನೆಸ್ ಅಡ್ವೈಸರಿ ಕಮಿಟಿ ತೀರ್ಮಾನದ ಪ್ರಕಾರ ಸದನವನ್ನು ನಡೆಸುತ್ತಿದ್ದಾರೆ.

(ಗೊಂದಲ)

ಶ್ರೀ ಕೆ. ಹೆಚ್. ಪಾಟೀಲ್.—ನಿಯಮದ ಪ್ರಕಾರ ೫ ಗಂಟೆಗೆ ಸಭೆ ಮುಗಿಯಬೇಕು. ಈಗ ಸಭೆಯನ್ನು ಎಕ್ಸ್‌ಟೆಂಡ್ ಮಾಡಿಕೊಂಡು ಹೋಗುತ್ತಿದ್ದೀರಾ ? ಇದರ ಬಗ್ಗೆ ನಮ್ಮದೇನೂ ತಕರಾರು ಇಲ್ಲ. ಈಗ ಓಟಿಗೆ ಹಾಕಿ ಎಕ್ಸ್‌ಟೆಂಡ್ ಮಾಡಿ.

ಶ್ರೀ ರಾಜವರ್ಧನ್.—ಬಿಸಿನೆಸ್ ಅಡ್ವೈಸರಿ ಕಮಿಟಿ ತೀರ್ಮಾನದ ಪ್ರಕಾರ ಸಭೆ ನಡೆಯುತ್ತಿದೆ. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಇರತಕ್ಕಂಥ ಸದಸ್ಯರು ಈಗ ಇಲ್ಲಿ ಯಾರೂ ಇಲ್ಲ. ಮಲ್ಲಾರಿಗೌಡರು ಒಬ್ಬರು ಮಾತ್ರ ಇಲ್ಲಿದ್ದಾರೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಅಲಾಟೆಡ್ ಟೈಮ್‌ನಲ್ಲಿ ಮುಗಿಸಬೇಕಾಗಿತ್ತು.

ಶ್ರೀ ಎಂ. ಎಸ್. ಪಾಟೀಲ್.—ಪ್ರೆಸ್‌ನವರು ಒಬ್ಬರೂ ಇಲ್ಲಿ ಇಲ್ಲ.

(ಗೊಂದಲ)

ಶ್ರೀ ರಾಜವರ್ಧನ್.—ನಾಳೆ ೩೩೪ನೇ ನಿಯಮ ಬಿಟ್ಟರೆ ಆಗಬಹುದು.

ಶ್ರೀ ಎಂ. ಎಸ್. ಪಾಟೀಲ್.—ಈಗ ಪತ್ರಿಕೆಯವರು ಇಲ್ಲಿಲ್ಲ. ಆದ್ದರಿಂದ ಮಾನ್ಯ ಸದಸ್ಯರು ಏನು ಮಾತನಾಡುತ್ತಾರೆ. ಅದು ಜನತೆಗೆ ಗೊತ್ತಾಗಬಾರದೇ ?

ಶ್ರೀ ಕೆ. ಹೆಚ್. ಪಾಟೀಲ್.—ಅಧ್ಯಕ್ಷರು, ಎರಡೂಕಡೆ ಸದಸ್ಯರ ಇಂಟೆನ್‌ಷನ್ ಏನಿದೆ ಎನ್ನು ವುದನ್ನು ಅರ್ಥಮಾಡಿಕೊಳ್ಳಬೇಕು.

ಚೇರ್ಮನ್.—ಆ ಕಡೆ ಇಂಟೆನ್‌ಷನ್ ಈ ಕಡೆ ಇಂಟೆನ್‌ಷನ್ ಏನು ಎನ್ನುವುದನ್ನು ತಿಳಿದು ಕೊಂಡಿದ್ದೇನೆ.

(ಗೊಂದಲ)

ಶ್ರೀ ಕೆ. ಹೆಚ್. ಪಾಟೀಲ್.—ಈಗ ಸಮಯ ಎಷ್ಟು ಬೇಕು ಎಂದು ನಿಗದಿ ಮಾಡಿ. ಅದು ರಾತ್ರಿ ಹತ್ತು ಗಂಟೆಯಾಗಲೀ ಅಥವಾ ಹನ್ನೆರಡು ಗಂಟೆಯಾಗಲೀ ಅದನ್ನು ಮುಗಿಸಿಯೇ ಹೋಗೋಣ

(ಗೊಂದಲ)

ಚೇರ್ಮನ್.—ಇವತ್ತಿನ ಬಿಸಿನೆಸ್ ಪ್ರಕಾರ ಚರ್ಚೆ ಇವತ್ತೇ ಮುಗಿಯಬೇಕು.

ಶ್ರೀ ಬಸವರಾಜ ಎಚ್. ಪಾಟೀಲ್.—ಈ ಕಡೆಯಿಂದ ಯಾರು ಮಾತನಾಡುವುದಿಲ್ಲ. ಅವರ ಕಡೆಯುವರೇ ಮಾತನಾಡಿಸಿಕೊಂಡು ಪಾಸ್ ಮಾಡಿಕೊಳ್ಳಲಿ. ನಾವು ಸಪೋರ್ಟ್ ಮಾಡಿಕೊಡ ಬೇಕಾದಂಥದ್ದು ಅಗತ್ಯ ಇದೆ. ಅದನ್ನು ಮಾಡಿಕೊಡುತ್ತೇವೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅಧ್ಯಕ್ಷರೇ, ಇದನ್ನು ಓಟಿಗೆ ಹಾಕಿ ಪಾಸ್ ಮಾಡಿಸಿ ಕೊಳ್ಳಿ. ನಮ್ಮದೇನೂ ಅಭ್ಯಂತರವಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಮಂತ್ರಿಗಳು ಇವತ್ತೇ ಬೇಕಾದರೆ ರಿಪ್ಲೈ ಮಾಡಿ ಮುಗಿಸಲಿ ನಾವು ಕುಳಿತುಕೊಂಡು ಮುಗಿಸಿ ಕೊಡುತ್ತೇವೆ.

ಚೇರ್ಮನ್.—ಇವತ್ತಿನ ಬಿಸಿನೆಸ್ ಪ್ರಕಾರ ಡಿಸ್‌ಕಷನ್ ಇವತ್ತೇ ಮುಗಿಯಬೇಕು.

ಶ್ರೀ ಎಂ. ಎಸ್. ಪಾಟೀಲ್.—ಈಗ ನಮ್ಮ ಕಡೇನೂ ಯಾರು ಮಾತನಾಡುವವರಿಲ್ಲ. ಅವರ ಕಡೇನೂ ಯಾರು ಮಾತನಾಡುವವರಿಲ್ಲ ಎಂದು ಹೇಳುತ್ತಿದ್ದಾರೆ. ಮಾನ್ಯ ಮಂತ್ರಿಗಳು ಬೇಕಾದರೆ ರಿಪ್ಲೈ ಪ್ರಾರಂಭ ಮಾಡಲಿ.

ಶ್ರೀ ಕೆ. ಹೆಚ್. ಪಾಟೀಲ್.—ಬಿಸಿನೆಸ್ ಅಡ್ವೈಸರಿ ಕಮಿಟಿ ರಿಪೋರ್ಟ್ ಪ್ರಕಾರ ಇವತ್ತೇ ಮಿನಿಸ್ಟರ್ ರಿಪ್ಲೈ ಬೆಳಿಗ್ಗೆ ೧೧ ಗಂಟೆಗೇ ಮುಗಿಯಬೇಕಾಗಿತ್ತು. ಮೂರೂವರೆ ಗಂಟೆ ತೆಗೆದುಕೊಂಡಿದ್ದಾರೆ. ಅದು ತಪ್ಪು ಎಂದು ಹೇಳುವುದಿಲ್ಲ. ಮೂರುವರೆ ಗಂಟೆ ಸಮಯ ಬೇಕಾಗುತ್ತದೆ. ಎಂದು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನವಾಗಿರಲಿಲ್ಲ. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಆದಂತಹ ತೀರ್ಮಾನವನ್ನು ಮೀರಿ ಚರ್ಚೆಯಾದಂಥ ಸಂದರ್ಭ ಇವೆ. ಈ ಸದನಕ್ಕೆ ಆ ಒಂದು ಹಕ್ಕು ಇರುತ್ತದೆ.

ಶ್ರೀ ಬಸವರಾಜ ಎಚ್. ಪಾಟೀಲ್.—ಆ ಕಡೆ ಮಾತನಾಡತಕ್ಕಂಥ ಸದಸ್ಯರು ಇದ್ದರೆ ಮಾತನಾಡಲಿ

೮-೦೨ ಪಿ.ಎಂ.

(ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಉಪಾಧ್ಯಕ್ಷರು.—ಯಾರು ಈಗ ಮಾತನಾಡಬೇಕೆಂದು ನೋಡೋಣ.

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೇ, ಸದಸ್ಯರು ಬೇಡ ಎಂದು ಹೇಳುವಾಗ ಇಷ್ಟೊಂದ ಬಲವಂತವಾಗಿ ಮಾತನಾಡುವುದರಲ್ಲಿ ಯಾವ ಸಾರ್ಥಕತೆ ಕಾಣುವುದಿಲ್ಲ.

SRI K. H. PATIL.—I have a right to hear the speech of othe members also, I want to know their mind. ನಾನು ಹೇಳುವುದಾದರೆ ಇವತ್ತಿನ ದಿವಸಕ್ಕೆ ಚರ್ಚೆಯನ್ನು ಮುಗಿಸಿಬಿಡಿ. ನಾಳೆ ಬೆಳಿಗ್ಗೆ ೯ ಘಂಟೆಗೆ ಮುಂದಕ್ಕೆ ಹಾಕಿ. ೯ ರಿಂದ ೧೧ ರೊಳಗೆ ಈ ಬೇಡಿಕೆಗೆ ಸಂಬಂಧಪಟ್ಟಂತೆ ಚರ್ಚೆಯನ್ನು ಮುಗಿಸೋಣ. ಆಮೇಲೆ ನಮ್ಮ ಕಾರ್ಯಕ್ರಮಕ್ಕೆ ಬರೋಣ.

ಉಪಾಧ್ಯಕ್ಷರು.—ನಾಳೆಯೂ ಇದೇ ಪರಿಸ್ಥಿತಿ ಬರುತ್ತದೆ. ಆದುದರಿಂದ ಈಗ ಚರ್ಚೆಯನ್ನು ಮುಂದುವರಿಸೋಣ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.— ಈ ಹಿಂದೆಯೂ ಎಷ್ಟೋ ಸಾರಿ ಚರ್ಚೆಯನ್ನು ಮುಂದುವರಿಸಿದ್ದಲ್ಲವೇ ? ಹಾಗೆಯೇ ಇವತ್ತು ಮಾಡಿ.

ಶ್ರೀ ಕೆ. ಎಚ್. ಪಾಟೀಲ್.—ನಮ್ಮೆಲ್ಲರ ಮನಸ್ಸು ಮುರಿದು ಮಾಡುವುದು ಬೇಡ ಎಂದು ನಾವು ಹೇಳುವುದು. ನೀವು ಮುಂದುವರಿಸುತ್ತೇವೆ ಎಂದರೆ ಅದು ಹೇಗಾಗುತ್ತದೆ,

MR. DEPUTY SPEAKER.—I only request your co-operation.

SRI K. H. PATIL.—There is some limit for everything. I request you kindly to see that the interest of the House and the interestof the public are safeguarded. ಈಗ ಪತ್ರಿಕೆಯವರೂ ಇಲ್ಲಿ ಇಲ್ಲ. ಸದಸ್ಯರೂ ಬಹಳ ಜನರು ಇಲ್ಲ.

ಎಲ್ಲರೂ ಇಲ್ಲದಿದ್ದಾಗ ಸದಸ್ಯರು ಮಾತನಾಡಿದರೆ ಅದು ಜನರಿಗೆ ತಿಳಿಯುತ್ತದೆಯೇ ? ಹಾಗಾದರೆ ಸದನದಲ್ಲಿ ಸದಸ್ಯರು ಮಾತನಾಡುವುದು ಏತಕ್ಕೆ ? ಬರೆದುಕೊಟ್ಟರೆ ಮುಗಿದು ಹೋಗುತ್ತದೆ. ದಯವಿಟ್ಟು ನಾನು ಹೇಳುವುದನ್ನು ಕೇಳಿ. ಚರ್ಚೆಯನ್ನು ಮುಂದುವರಿಸಲೇಬೇಕು ಎನ್ನುವುದು ತಮ್ಮ ಮತವಾದರೆ, ಅದಕ್ಕೆ ನೀವು ಒಂದು ಸಮಯವನ್ನು ನಿಗದಿ ಮಾಡಿ. ಎಷ್ಟು ಘಂಟೆಯ ತನಕ ಎಂದು ನಿಗದಿಪಡಿಸಿ ನಾವು ಕುಳಿತುಕೊಳ್ಳುತ್ತೇವೆ. ಮಂತ್ರಿಗಳೆಲ್ಲರೂ ಮನೆಗೆ ಹೋಗುವುದು, ನಾವು ಇಲ್ಲಿ ಕುಳಿತುಕೊಳ್ಳುವುದೇ. ಹಾಗಿದ್ದರೆ ನಾವು ಇಲ್ಲಿ ಕುಳಿತುಕೊಳ್ಳಬೇಕೇ ? ಎಂದು ವಿಚಾರ ಮಾಡಬೇಕಾಗುತ್ತದೆ. You summon all your Ministers. Let us sit upto 6 O'clock. Persons who are advising you will also sit here. ಮಾನ್ಯ ಉಪಾಧ್ಯಕ್ಷರು ಯಾಕಾಗಿ ಹೀಗೆ ಹಠ ಮಾಡುತ್ತಾರೋ ನನಗೆ ಅರ್ಥವಾಗುತ್ತಿಲ್ಲ. What are you thinking of us ?

ಶ್ರೀ ರಾಜವರ್ಧನ್.—ಅಧ್ಯಕ್ಷರೇ, ಈಗ ಸದನಕ್ಕೆ ಮುಖ್ಯ ಮಂತ್ರಿಯವರು ಬರುತ್ತಾರೆ ಎಂದು ಹೇಳಿದ್ದಾರೆ, ಶೀಘ್ರದಲ್ಲಿ ಬರಬಹುದು. ದಯವಿಟ್ಟು ಅಲ್ಲಿಯವರೆಗೆ ಚರ್ಚೆಯನ್ನು ಮುಂದುವರೆಸಿ.

(ಗೊಂದಲ)

ಉಪಾಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಸದಸ್ಯರು ಮಾತನಾಡಲು ಪ್ರಾರಂಭ ಮಾಡಿದ್ದಾರೆ. ಅವರಿಗೆ ಎಷ್ಟು ಸಮಯ ಆಗುತ್ತದೆ ಎಂದು ಕೇಳುತ್ತಾ ಇದ್ದೇನೆ. ಬೇಗನೇ ಮುಗಿಸುತ್ತಾರೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.— ಮುಖ್ಯ ಮಂತ್ರಿಗಳು ಬರುತ್ತಾರೆ, ಅಷ್ಟರವರೆಗೆ ಕುಳಿತುಕೊಳ್ಳಿ, ಇನ್ನೊಬ್ಬರು, ಮತ್ತೊಬ್ಬರು ಬರುತ್ತಾರೆ ಕುಳಿತುಕೊಳ್ಳಿ ಎಂದರೆ ಹೇಗೆ ಆಗುತ್ತದೆ. ನಮ್ಮ ವಿಚಾರದಲ್ಲಿ ಇಷ್ಟರತನಕ ಕುಳಿತದ್ದಕ್ಕೆ ಯಾಕೆ ತಾವೂ ತಿಳಿದುಕೊಳ್ಳುತ್ತಿಲ್ಲ ? You take your own decisions. If you want to curtail, you pass the entire demands today itself.

ಉಪಾಧ್ಯಕ್ಷರು.— ನಿಮ್ಮ ಅನಿಸಿಕೆಯನ್ನೂ ತಿಳಿದುಕೊಂಡಿದ್ದೇನೆ. ತಾವುಗಳು ಚರ್ಚೆ ಮುಂದುವರಿಯಲಿಕ್ಕೆ ಸಹಕರಿಸಬೇಕು.

ಶ್ರೀ ಕೆ. ಎಚ್. ಪಾಟೀಲ್.—ನಮ್ಮ ಕಾರ್ಯಕ್ರಮಗಳೂ ಇರುತ್ತವೆ. ನೀವು ಅಡ್ಜರ್ನ್ ಮಾಡುತ್ತೀರಾ ?

(ಗೊಂದಲ)

ಶ್ರೀ ಎಂ. ಎಸ್. ಪಾಟೀಲ್.—ಕಾರ್ಯಕ್ರಮದ ಪ್ರಕಾರ ಚರ್ಚೆ ಮತ್ತು ರಿಪ್ಲೈ ಇವತ್ತೆ ಮುಗಿಯಬೇಕೆಂದು ಇದೆ. ಆದರೆ ಸಮಯವನ್ನು ಗಮನಿಸಿದರೆ ಅದು ಸಾಧ್ಯವೇ ?

ಉಪಾಧ್ಯಕ್ಷರು.—ಜಯಕುಮಾರ್‌ರವರೆ ತಾವು ಚರ್ಚೆ ಪ್ರಾರಂಭ ಮಾಡಿ.

ಶ್ರೀ ಡಿ. ಟಿ. ಜಯಕುಮಾರ್.—ಮಾನ್ಯ ಅಧ್ಯಕ್ಷರೇ, ಈ ಗೊಂದಲದ ಮಧ್ಯೆ ನಾನು ೧೯೮೫-೮೬ನೇ ಇಸವಿಯ......

SRI K. H. PATIL.—I am on a point of order. We won't allow this House to continue unless you extend the time. Because we are not cooperating you are seeking the law......

ಉಪಾಧ್ಯಕ್ಷರು.—ಸಮಯ ಮುಂದುವರಿಸುವ ವಿಚಾರದಲ್ಲಿ ಮತ್ತೆ ಮಾತನಾಡೋಣ ಈಗ ಚರ್ಚೆ ಮುಂದುವರಿಯಲಿ.

ಶ್ರೀ ಕೆ. ಎಚ್. ಪಾಟೀಲ್.—ಎಷ್ಟು ಸಮಯದ ತನಕ ನಡೆಸುತ್ತೀರಿ ಎಂದು ಹೇಳಿ, ನಾವು ಹೊರಗೆ ಹೋಗಿ ವಾಪಸ್ಸು ಬರುತ್ತೇವೆ. ಯಾತಕ್ಕಾಗಿ ಈ ವಿಷಯದಲ್ಲಿ ಹಠ ಮಾಡುತ್ತಿದ್ದೀರಿ ನನಗೆ ಅರ್ಥವಾಗುತ್ತಾ ಇಲ್ಲ.

ಉಪಾಧ್ಯಕ್ಷರು.—ಹಠವೇನೂ ಇಲ್ಲ. ನಾಳೆ ಪುನಃ ಇದೇ ಪರಿಸ್ಥಿತಿ ಬರಬಾರದು ಎಂದು. ಇವತ್ತೇ ಮುಗಿಸುವುದು ಒಳ್ಳೆಯದಲ್ಲವೇ. ಡಿಸ್‌ಕಶನ್ ಇವತ್ತು ಮುಗಿಸುವ, ನಾಳೆಗೆ ರಿಪ್ಲೈ ಮಾಡುತ್ತಾರೆ.

ಶ್ರೀ ಎಂ. ಎಸ್. ಪಾಟೀಲ್.—ರಿಪ್ಲೈ ಬಾಕಿ ಏಕೆ ಇಡುತ್ತೀರಾ ? ಅದನ್ನು ಮುಗಿಸಿಬಿಡಿ. ನಾವು ಕುಳಿತುಕೊಳ್ಳುತ್ತೇವೆ.

ಉಪಾಧ್ಯಕ್ಷರು.— ನೀವು ಎಲ್ಲರೂ ಒಪ್ಪುವುದಾದರೆ, ಕುಳಿತುಕೊಳ್ಳಲಿಕ್ಕೆ ನಮ್ಮದೇನೂ ಅಡ್ಡಿಯಿಲ್ಲ. ರಿಪ್ಲೈಯನ್ನೂ ಕೇಳೋಣ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನಾನು ಬೆಳಗ್ಗೆ ೧೧ ಘಂಟೆಗೆ ಗುಲ್ಬರ್ಗದಿಂದ ಇಲ್ಲಿಗೆ ಬಂದವನೇ ಸದನದಲ್ಲಿ ಕುಳಿತಿದ್ದೇನೆ. ಈಗ ರಾತ್ರಿ ಹತ್ತು ಘಂಟೆಯಾಗುತ್ತಾ ಬಂತು. ಇನ್ನೂ ಕುಳಿತುಕೊಳ್ಳಿ ಎಂದರೆ ಹೇಗೆ ?

ಉಪಾಧ್ಯಕ್ಷರು.—ನಿಮ್ಮ ಪರಿಸ್ಥಿತಿ ನನಗೂ ತಿಳಿದಿದೆ, ಅರ್ಥವಾಗುತ್ತಿದೆ. ಚರ್ಚೆಯನ್ನು ಮುಂದುವರಿಸಬೇಕಾಗಿದೆ. ಜಯಕುಮಾರ್‌ರವರೇ ಪ್ರಾರಂಭಿಸಿರಿ.

ಶ್ರೀ ಡಿ. ಟಿ. ಜಯಕುಮಾರ್ (ನಂಜನಗೂಡು).—ಮಾನ್ಯ ಅಧ್ಯಕ್ಷರೇ, ಕೃಷಿ, ಪಶುಸಂಗೋಪನೆ, ಮತ್ತು ತೋಟಗಾರಿಕೆ ಇಲಾಖೆಯ ಬೇಡಿಕೆಗಳ ಮೇಲೆ ಚರ್ಚೆ ಪ್ರಾರಂಭಿಸುತ್ತಾ ಈ ಬೇಡಿಕೆಗಳನ್ನು ಸಂಪೂರ್ಣವಾಗಿ ಬೆಂಬಲಿಸುತ್ತಾ ಒಂದೆರಡು ಮಾತನ್ನು ಆಡಲು ಇಷ್ಟಪಡುತ್ತೇನೆ,......

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ನೀವು ಪ್ರಾರಂಭ ಮಾಡಿ ಎಂದು ಹೇಳಿದರೆ ಮಾನ್ಯ ಸದಸ್ಯರು ಬೇಡ ಎಂದು ಹೇಳುವುದಿಲ್ಲ. ನೀವು ಸಮಯ ಎಷ್ಟು ಎಂದು ಹೇಳಲಿಲ್ಲವಲ್ಲಾ ? ಎಷ್ಟರತನಕ ಕುಳಿತುಕೊಳ್ಳಬೇಕೆಂದು ಹೇಳಿ. You have power to extend. Kindly exercise your powers.

ಉಪಾಧ್ಯಕ್ಷರು,— ಅವರಿಗೆ ಮಾತನಾಡಲು ತಿಳಿಸಿದ್ದೇನೆ. ಅವರು ಮುಗಿಸಲಿ. ಮತ್ತೆ ನೋಡೋಣ.

SRI K. H. PATIL.—This ist highly illegal. Therefore, I am walking out.

(At this stage the Congress-I members staged a walk-out).

ಉಪಾಧ್ಯಕ್ಷರು.—ಜಯಕುಮಾರ್‌ರವರೇ ತಾವು ಪ್ರಾರಂಭ ಮಾಡಿ.

ಶ್ರೀ ಡಿ. ಟಿ. ಜಯಕುಮಾರ್.— ಸಭಾಪತಿಯವರೇ, ೧೯೮೫–೮೬ನೇ ಸಾಲಿನ ಕೃಷಿ, ಪಶುಸಂಗೋಪನೆ, ಮತ್ತು ತೋಟಗಾರಿಕೆಯ ಇಲಾಖೆಯ ಮೇಲಿನ ಚರ್ಚೆಯನ್ನು ಪ್ರಾರಂಭಿಸುತ್ತಾ, ಸಚಿವರುಗಳು ತಂದಿರತಕ್ಕಂತಹ ಬೇಡಿಕೆಗಳನ್ನು ಸಂಪೂರ್ಣವಾಗಿ ಬೆಂಬಲಿಸುತ್ತಾ, ಒಂದೆರಡು ಮಾತನ್ನು ಆಡಲು ಇಷ್ಟಪಡುತ್ತೇನೆ. ರೈತರು ಮಳೆಬೆಳೆ ಇಲ್ಲದೇ ಬವಣೆ ಪಡುತ್ತಿರುವಾಗ, ಅವರ ವಿಷಯವಾಗಿ ಇಲ್ಲಿ ಅವರಿಗೆ ಸಂಬಂಧಪಟ್ಟ ಇಲಾಖೆಯಲ್ಲಿ ನಡೆದಿರತಕ್ಕಂತಹ ಅರ್ಥಪೂರ್ಣವಾದ ಚರ್ಚೆಯಲ್ಲಿ ಭಾಗವಹಿಸುವುದನ್ನು ಬಿಟ್ಟು ಮಾನ್ಯ ಸದಸ್ಯರುಗಳು ಹೊರಗೆ ಹೋಗಿರುವುದು ತುಂಬಾ ವಿಷಾದನೀಯವಾಗಿದೆ.

೮–೩೦ ಪಿ.ಎಂ.

ಸ್ವಾಮಿ ಈ ಸದನದಲ್ಲಿರತಕ್ಕಂಥ ಎಲ್ಲ ಅಧಿಕಾರಿಗಳಾಗಿರಲಿ, ಪತ್ರಕರ್ತರಾಗಲಿ, ವಿರೋಧ ಪಕ್ಷದ ಸದಸ್ಯರಾಗಿರಲೀ, ಆಡಳಿತ ಪಕ್ಷದ ಸದಸ್ಯರಾಗಿರಲೀ, ಎಲ್ಲರೂ ಕೂಡಾ ಹೆಚ್ಚಿನ ಸಂಖ್ಯೆಯಲ್ಲಿ ರೈತರ ಮಕ್ಕಳು. ರೈತರ ಮಕ್ಕಳ ಬಗ್ಗೆ ವಿಚಾರ ಮಾಡತಕ್ಕಂಥಾದ್ದರಲ್ಲಿ ರೈತರ ಕಷ್ಟ ಸುಖಗಳನ್ನು ಅರಿಯುವಂತಹಾದ್ದರಲ್ಲಿ ಸರಕಾರಕ್ಕೆ ಎಷ್ಟು ಜವಾಬ್ದಾರಿ ಇದೆಯೋ, ಅಷ್ಟೇ ಜವಾಬ್ದಾರಿ ವಿರೋಧ ಪಕ್ಷಕ್ಕೂ ಸಹ ಇರತಕ್ಕಂಥಾದ್ದು. ಆದರೆ ದುರ್ದೈವ, ಅವರು ಈಗ ನಮ್ಮೊಂದಿಗೆ ಚರ್ಚೆಯಲ್ಲಿ ಭಾಗವಹಿಸದೇ ಹೋಗಿರತಕ್ಕಂಥಾದ್ದು ವಿಷಾದನೀಯ.

ಈಗ ನಾನು ವಿಚಾರಕ್ಕೆ ಬಂದರೆ, ರೈತರನ್ನು ಪ್ರತಿನಿಧಿಸತಕ್ಕಂಥ ಸನ್ಮಾನ್ಯ ರೇವಣಸಿದ್ದಯ್ಯನವರು, ಗಂಭೀರವಾಗಿ, ರೈತರ ಒಂದು ಕಷ್ಟದ ಬಗ್ಗೆ, ರೈತರ ಸ್ಥಿತಿಯ ಬಗ್ಗೆ, ತಮ್ಮ ವಿಚಾರಧಾರೆಯನ್ನು ಹರಿಸಿದರು.

೩೮ ವರ್ಷಗಳಿಂದ ರಾಜ್ಯದ ಆಡಳಿತವನ್ನು ಕೃಷಿ ಇಲಾಖೆಯನ್ನು ಪಡೆದಿದ್ದಂಥವರು ನಾವಲ್ಲ ಇವತ್ತು ಇರತಕ್ಕಂಥವರು ಯಾರು, ಎಂದರೆ, ಕೃಷಿ ಮಂತ್ರಿಯವರಾದ ಮಾನ್ಯ ಪ್ರಕಾಶ್‌ರವರು, ಪಶು ಸಂಗೋಪನಾ ಸಚಿವರಾದ ಸಿದ್ದರಾಮಯ್ಯನವರು, ತೋಟಗಾರಿಕೆ ಮಂತ್ರಿಗಳಾದ ಶ್ರೀ ಸೋಮಶೇಖರ್‌ರವರು ಇವರೆಲ್ಲರೂ ಕೂಡಾ ಯುವಕರು ಮತ್ತು ಸಮಾಜವಾದಿ ಇತಿಹಾಸದ ಹಿನ್ನೆಲೆಯನ್ನು ಹೊಂದಿರತಕ್ಕವರು, ಹಾಗೂ ಅದರಲ್ಲಿ ನಂಬಿಕೆಯನ್ನು ಇಟ್ಟಿರತಕ್ಕಂಥ ಯುವಕರು. ಅವರೆಲ್ಲರಿಗೂ ಕೂಡಾ ರೈತರ ಕಷ್ಟಗಳನ್ನು ಅರಿತುಕೊಳ್ಳಬೇಕು, ಎಲ್ಲರೂ ಕೂಡಿ ಸಮಾಲೋಚನೆ ಮಾಡಿ ರೈತರ ಕಷ್ಟಗಳನ್ನು ಪರಿಹಾರ ಮಾಡಬೇಕು ಎಂಬ ಮನೋಭಾವ ಇದೆ. ಈ ತೋಟಗಾರಿಕೆ, ಕೃಷಿ ಇಲಾಖೆ, ಪಶುಸಂಗೋಪನಾ ಇಲಾಖೆ ಇವುಗಳು ಒಂದಕ್ಕೊಂದು ಹಾಲು ಜೇನಿನಂತೆ ಬೆರೆತಿರತಕ್ಕಂಥ ಇಲಾಖೆಗಳು. ಇವುಗಳನ್ನು ಹೊಂದಿರತಕ್ಕಂಥ ಯುವಕ ಮಿತ್ರರು ಯಾರಿದ್ದಾರೆ ಅವರಿಗೆ, ರೈತರ ಬಗ್ಗೆ ಕಾಳಜಿ ಇದೆ, ರೈತರ ಬಗ್ಗೆ ಒಲವಿದೆ, ರೈತರ ಬಗ್ಗೆ ಒಳ್ಳೆಯ ಕೆಲಸಗಳನ್ನು ಮಾಡಬೇಕೆನ್ನತಕ್ಕಂಥಾದ್ದು, ಅವರ ಧ್ಯೇಯೋದ್ದೇಶಗಳಾಗಿವೆ.

ಕಳೆದ ೩೫ ವರ್ಷಗಳಿಂದಲೂ ಆಡಳಿತ ಸೂತ್ರಗಳನ್ನು ಹಿಡಿದಿದ್ದಂಥ ಕಾಂಗ್ರೆಸ್‌ನವರಾಗಲೀ, ಈಗತಾನೆ ಹೊರಗಡೆ ಹೋದಂಥ ಗಣ್ಯರಾಗಲೀ, ಮಾನ್ಯ ರತ್ನಾಕರ್‌ರವರಾಗಲೀ, ಹಿಂದೆ ಕೃಷಿ ಇಲಾಖೆ ಮಂತ್ರಿಗಳಾಗಿದ್ದ ಮಾನ್ಯ ಕೆ. ಹೆಚ್. ಪಾಟೀಲ್‌ರವರಾಗಲೀ, ಅವತ್ತು ಈ ಕೆಲಸಗಳನ್ನು ಮಾಡಲಿಲ್ಲ. ಇವತ್ತು ಚರ್ಚೆಯಲ್ಲಿ ಅವರು ಏನೇನು ವಿಚಾರಗಳನ್ನು ಇಟ್ಟಿದ್ದಾರೆ, ಅಂತಹ ಕೆಲಸಗಳನ್ನು ಅವರೇ ಮಾಡಬಹುದಾಗಿತ್ತು. ಇವತ್ತು ಒಂದೆರಡು ವರ್ಷಗಳಲ್ಲಿ ಮಾನ್ಯ ಪ್ರಕಾಶ್‌ರವರು ಎಲ್ಲವನ್ನೂ ಬದಲಾವಣೆ ಮಾಡಿಬಿಡುವುದಕ್ಕೆ

ಅವರ ಹತ್ತಿರ ಅಲ್ಲಾವುದ್ದೀನ್ ಅದ್ಭುತ ದೀಪ ಇಲ್ಲ. ಎಲ್ಲವನ್ನೂ ಕೂಡಾ ಒಂದೇ ಸಮನೆ ಬದಲಾಯಿಸಿ ಬಿಡತಕ್ಕಂಥ ವ್ಯವಸ್ಥೆ ಇಲ್ಲ. ಇವತ್ತು ಏನಾಗಿದೆ ಎಂದರೆ ರೈತರುಗಳ ಮಧ್ಯೆ ದಳ್ಳಾಳಿಗಳು ಬರುತ್ತಾರೆ. ಇವತ್ತು ಅವರ ಹಿಡಿತದಲ್ಲಿ ರೈತ ಬಾಂಧವರು ನರಳುತ್ತಿದ್ದಾರೆ. ಅವರು ಬೆಳೆಯತಕ್ಕಂಥ, ಉತ್ಪಾದನೆ ಮಾಡತಕ್ಕಂಥ ಪದಾರ್ಥಗಳು ಏನಿವೆ, ದವಸ ಧಾನ್ಯಗಳು ಏನಿವೆ, ಅದರ ಬೆಲೆಯನ್ನು ನಿಗದಿ ಮಾಡತಕ್ಕಂಥ ಶಕ್ತಿ ಅವನಿಗೆ ಇಲ್ಲ, ಒಂದು ಕ್ವಿಂಟಲ್ ಭತ್ತಕ್ಕೆ ಇಷ್ಟು ಎಂದು ಬೆಲೆಯನ್ನು ನಿಗದಿ ಮಾಡತಕ್ಕವರು ಅಧಿಕಾರಿಗಳೇ ಹೊರತು ರೈತರಲ್ಲ. ಆದರೆ ಅದೇ ಒಂದು ಕೈಗಾರಿಕೆ ತೆಗೆದುಕೊಂಡರೆ, ಬೇರೆ ಯಾವುದೇ ಒಂದು ಕ್ಷೇತ್ರವನ್ನು ತೆಗೆದುಕೊಂಡರೆ, ಅಲ್ಲಿ ಒಂದು ವಸ್ತುವನ್ನು ಉತ್ಪತ್ತಿ ಮಾತಕ್ಕಂಥ ವ್ಯಕ್ತಿ ಏನಿದ್ದಾನೆ. ಅವನು ಮಾತ್ರ ಅದರ ಬೆಲೆಯನ್ನು ಗೊತ್ತು ಮಾಡತಕ್ಕಂಥ ಅವಕಾಶ ಇರುತ್ತದೆ. ಆದರೆ ರೈತರು ಬೆಳೆಯತಕ್ಕಂಥ ಯಾವುದೇ ಒಂದು ವಸ್ತುವಿಗಾಗಲೇ, ಅದರ ಬೆಲೆಯನ್ನು ನಿರ್ಧಾರ ಮಾಡತಕ್ಕ ಒಂದು ಸರಿಯಾದ ವ್ಯವಸ್ಥೆ ಈ ದೇಶದಲ್ಲಿ ಈ ರಾಷ್ಟ್ರದಲ್ಲಿ ಇಲ್ಲ. ಇದು ನಿಜವಾಗಲೂ ದುರ್ದೈವದ ಸಂಗತಿ. ಮಾನ್ಯ ರೇವಣ್ಣ ಸಿದ್ಧಯನವರು ಹೇಳಿದರು; ಇಡೀ ರಾಷ್ಟ್ರದಲ್ಲಿ ರೈತರ ಬಾಳು ಉತ್ತಮಗೊಳ್ಳಬೇಕು ಎಂದು ಹೇಳಿದರು. ಇವತ್ತು ನಾವು ಬೆಳಗ್ಗೆ ಎದ್ದ ತಕ್ಷಣ, ಅಧಿಕಾರಿಗಳೇ ಇರಲಿ, ಪತ್ರಿಕೆಯವರೇ ಇರಲಿ ಯಾರೇ ಆಗಲೀ, ಕಾಫಿ ಕುಡಿಯ ಬೇಕಾದರೆ, ಹಾಲನ್ನು ಕುಡಿಯಬೇಕಾದರೆ, ಅದು ರೈತರಿಂದ ಬರಬೇಕು. ಹಾಲನ್ನು ರೈತರು ಉತ್ಪಾದನೆ ಮಾಡಿದರೂ, ಅವರಿಗೆ ಅದಕ್ಕೆ ಸರಿಯಾದ ಬೆಲೆಯನ್ನು ಕೊಡುವುದಕ್ಕೆ ಆಗಿರಲಿಲ್ಲ. ಇವತ್ತು ಜನತಾ ಸರಕಾರ ಬಂದಮೇಲೆ, ಮಾನ್ಯ ಸಿದ್ಧ ರಾಮಯ್ಯನವರು ಈ ಇಲಾಖೆಯನ್ನು ವಹಿಸಿಕೊಂಡ ಮೇಲೆ, ಪ್ರಥಮವಾಗಿ ಹಾಲಿನ ಬೆಲೆಯನ್ನು ಒಂದು ಲೀಟರ್‌ಗೆ ೫೦ ಪೈಸೆ ಹೆಚ್ಚು ಮಾಡಿದರು. ಇದನ್ನು ಮಾಡಿದ ಸರಕಾರ ಜನತಾ ಸರಕಾರವೇ ಹೊರತು ಕಾಂಗ್ರೆಸ್ ಸರಕಾರವಲ್ಲ. ಸುಮಾರು ವರ್ಷಗಳಿಂದ ಒಂದೇ ಒಂದು ಬೆಲೆಯನ್ನು ನೀಡಲಾಗುತ್ತಿತ್ತು. ಇದರಿಂದಾಗಿ ರೈತರ ಒಂದು ಜೀವನ ಯಾವ ರೀತಿ ಆಗಿದೆ ಎಂದರೆ ಒಬ್ಬ ರೈತನ ಬಾಳು, ಸರಕಾರಿ ಕಚೇರಿಯಲ್ಲಿ ಕೆಲಸ ಮಾಡತಕ್ಕ ಒಬ್ಬ ಅಟೆಂಡರ್‌ಗಿಂತ ಕಡಿಮೆಯಾಗಿದೆ. ಇದು ಬಹಳ ಶೋಚನೀಯವಾದುದು. ಮಾನ್ಯ ರೇವಣ್ಣ ಸಿದ್ಧಯ್ಯನವರು ಹೇಳಿದ ಹಾಗೆ, ಸರಕಾರಿ ಅಧಿಕಾರಿಗಳಿಗೆ ನೌಕರರಿಗೆ, ಮಳೆ ಬರಲಿ, ಬಿಸಿಲು ಇರಲಿ, ಮಳೆ ಆಗಲೀ ಆಗದೇ ಹೋಗಲಿ, ಬೆಳೆ ಆಗಲೀ ಹೋಗಲೀ, ಅವರಿಗೆ ಒಂದನೇ ತಾರೀಖು ಬಂತು ಎಂದರೆ ಸಂಬಳ ಬರುತ್ತದೆ. ಒಬ್ಬ

ಸರಕಾರಿ ನೌಕರನಿಗೆ ಐದುನೂರೋ, ಆರುನೂರೋ ಎಷ್ಟೋ ಸಂಬಳ ಗ್ಯಾರಂಟಿ ಇರುತ್ತದೆ. ಆದರೆ ರೈತನಿಗೆ ಯಾವುದೇ ಒಂದು ನಿಗದಿಯಾದ ಆದಾಯವೂ ಇಲ್ಲ, ಒಂದೊಂದು ಸಲ ಆವನು ಕಷ್ಟಪಟ್ಟರೂ ಆದಕ್ಕೆ ಪ್ರತಿಫಲ ದೊರೆಯದೇ ಹೋಗುತ್ತದೆ. ಇವತ್ತು ರೈತರು ಶೋಷಣೆಗೆ ಒಳಗಾಗಿದ್ದಾರೆ. ಅಧಿಕಾರಿಗಳಿಂದ. ರಾಜಕಾರಣಿಗಳಿಂದ, ಮತ್ತು ದಳ್ಳಾಳಿಗಳಿಂದ ಶೋಷಣೆಗೆ ಒಳಗಾಗಿದ್ದಾರೆ. ಈ ರೀತಿ ಶೋಷಿತರಾಗಿರತಕ್ಕಂಥ ರೈತಬಾಂಧವರು ಯಾರಿದ್ದಾರೆ, ಅವರು ಜೀವನದಲ್ಲಿ ತಮ್ಮ ಗುರಿಯನ್ನು ಸಾಧನೆ ಮಾಡುವುದಕ್ಕೆ, ಅವರ ಜೀವನ ಕಲ್ಯಾಣವಾಗಿ, ಆವರಿಗೆ ಒಳ್ಳೆಯದಾಗುವುದಕ್ಕೆ ಕಾರ್ಯಕ್ರಮ ಗಳನ್ನು ಹಾಕಬೇಕು. ಮಾನ್ಯ ಸಚಿವರಾದಂಥ ಎಂ. ಪಿ. ಪ್ರಕಾಶ್‌ರವರು ಏನಿದ್ದಾರೆ, ಆವರು ಬಹಳ ಒಳ್ಳೆಯ, ಉತ್ತಮವಾದ, ದಕ್ಷ ಆಡಳಿತಗಾರರು, ಪ್ರಾಮಾಣಿಕರು, ಅವರು ಎಲ್ಲವನ್ನೂ ಅಧಿಕಾರಿಗಳಿಗೆ ಬಿಡದೇ, ಅಧಿಕಾರಿಗಳನ್ನು ನೇರವಾಗಿ ತಮ್ಮ ಹತೋಟಿಯಲ್ಲಿ ಇಟ್ಟುಕೊಂಡು, ಅಧಿಕಾರಿಗಳಿಗೆ ರೈತರನ್ನು ಕಂಡರೆ ಒಂದು ಸದ್ಭಾವನೆ ಬರತಕ್ಕ ವಾತಾವರಣವನ್ನು ಕ್ರಿಯೇಟ್ ಮಾಡಬೇಕೆಂದು ಹೇಳಿ, ಮಾನ್ಯ ಪ್ರಕಾಶ್‌ರವರಲ್ಲಿ ಬೇಡಿಕೊಳ್ಳುತ್ತೇನೆ.

ಇನ್ನು ತೋಟಗಾರಿಕೆ ಇಲಾಖೆಯಲ್ಲಿ ಮೊದಲು ಅದರ ನಿರ್ದೇಶಕರಾಗಿದ್ದವರು ಶ್ರೀ ಎಂ. ಹೆಚ್. ಮರಿಗೌಡರು ಏನಿದ್ದಾರೆ, ಅವರು ಕರ್ನಾಟಕದಲ್ಲಿ ತೋಟಗಾರಿಕೆಯನ್ನು ಬೆಳೆಸಿದವರು. ನನಗೆ ಅವರೊಡನೆ ಬೆರೆತು ಇರತಕ್ಕಂಥ ಅವಕಾಶ ಬಂದಿತ್ತು. ಆಗ ಅವರು ಹೇಳುತ್ತಿದ್ದರು, ಒಂದು ಸಪೋಟಾ ತಿನ್ನುವುದೂ ಒಂದೇ ಒಂದು ದೊಡ್ಡ ರಾಗಿಮುದ್ದೆ ತಿನ್ನುವುದೂ ಒಂದೇ. ಅದು ಅಷ್ಟು ಶಕ್ತಿಯುತವಾದ ಆಹಾರ. ಅಷ್ಟು ಪೌಷ್ಟಿಕಾಂಶವನ್ನು ಸಪೋಟಾ ಹೊಂದಿರುತ್ತದೆ ಎಂದು ಮಾನ್ಯ ಎಂ. ಹೆಚ್. ಮರೀಗೌಡ ಅವರು ಹೇಳುತ್ತಿದ್ದರು. ರೈತರು ಏನು ಮಾಡುತ್ತಾರೆಂದರೆ ತಾವು ಬೆಳೆ ದಂಥ ತರಕಾರಿ, ಹಣ್ಣು, ಹಂಪಲುಗಳನ್ನು ಮತ್ತು ಉತ್ಪತ್ತಿ ಮಾಡಿದಂಥ ಹಾಲು ಮೊಸರು ಇವು ಗಳನ್ನು ತಾವು ಉಪವಾಸ ಮಾಡುತ್ತಿದ್ದರೂ ಸಹಾ ಮಾರಿ ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳುವುದಕ್ಕೆ ಹೋಗುತ್ತಾರೆ. ಈ ರೈತಬಾಂದವರು ತಮಗೆ ತಮ್ಮ ಹೃದಯಕ್ಕೆ ತಮ್ಮ ದೇಹಕ್ಕೆ ಬೇಕಾದಂಥ ಪೌಷ್ಟಿಕಾಂಶಗಳನ್ನು ಹೊಂದಿರತಕ್ಕಂಥ, ತಾವು ಬೆಳೆಯತಕ್ಕಂಥ ಪದಾರ್ಥಗಳನ್ನು ಉಪಯೋಗಿಸುವುದಿಲ್ಲ. ಆದಕ್ಕೋಸ್ಕರ ತೋಟಗಾರಿಕೆ ಇಲಾಖೆ ಮಂತ್ರಿಗಳಾದಂಥ ಸೋಮ ಶೇಖರ್‌ರವರು ಇದರ ಬಗ್ಗೆ ಒಂದು ಕಾರ್ಯಕ್ರಮವನ್ನು ಹಾಕಬೇಕು. ನಾವೆಲ್ಲರೂ ಕೂಡ ಹಳ್ಳಿ ಯಿಂದ ಬಂದಂಥವರು. ಇವತ್ತು ಹಳ್ಳಿಯಲ್ಲಿ ನೋಡಿದರೆ ಪ್ರತಿ ಮನೆಯಲ್ಲೂ ಹಣ್ಣು ಮತ್ತು ತರಕಾರಿ ಗಿಡಗಳನ್ನು ಪಪ್ಪಾಯಿ ಸಪೋಟ, ಬದನೆಕಾಯಿ, ಹುರುಳಿಕಾಯಿ. ಮುಂತಾದ ಹಣ್ಣು ತರಕಾರಿ ಗಿಡಗಳನ್ನು ಬೆಳೆಯುವ ವ್ಯವಸ್ಥೆ ಮುಂಚೆ ಇತ್ತು. ಈಗ ನೀರಿನ ಅಭಾವದಿಂದ ಪ್ರಕೃತಿಯ ವಿಕೋಪ ದಿಂದ ಇಂತಹ ಬೆಳೆಗಳನ್ನು ಬೆಳೆಯುವುದು ಗಣನೀಯವಾಗಿ ಕಡಿಮೆಯಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಮಾನ್ಯ ಸಚಿವರು ಒಂದು ಪ್ರಚಾರ ಮಾಧ್ಯಮವನ್ನು ಏರ್ಪಡಿಸಿ ಅದರ ಮೂಲಕ ತೋಟಗಾರಿಕೆಯ ಮಹತ್ವವನ್ನು ಪ್ರತಿಯೊಬ್ಬ ರೈತಬಾಂಧವನಿಗೂ ತಿಳಿಯಪಡಿಸಬೇಕು. ರೈತನಿಗೆ ತನ್ನ ದೇಹವನ್ನು, ತನ್ನ ಶಕ್ತಿಯನ್ನು ಪೋಷಿಸತಕ್ಕಂಥ ಆಹಾರ ಪದಾರ್ಥಗಳನ್ನು ಬೆಳೆಯುವುದಕ್ಕೆ ಮತ್ತು ಅದನ್ನು ಉಪಯೋಗಿಸುವುದಕ್ಕೆ ಹೇಳಬೇಕು. ರೈತ ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಹೊಲದಲ್ಲಿ ದುಡಿಯು ತ್ತಾನೆ. ಆಗ ಅವನ ಶಕ್ತಿ ವ್ಯಥವಾಗುತ್ತದೆ, ಆ ಶಕ್ತಿಯನ್ನು ಪಡೆಯಬೇಕಾದರೆ ತನ್ನದೇ ಆದಂಥ ತೋಟದಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆಯುವುದರ ಮುಖಾಂತರ ಅಂದರೆ ಹಣ್ಣು ಹಂಪಲುಗಳನ್ನು ಬೆಳೆಯುವುದರ ಮುಖಾಂತರ, ತರಕಾರಿಗಳನ್ನು ಬೆಳೆಯುವುದರ ಮುಖಾಂತರ ಅವುಗಳನ್ನು ಉಪಯೋಗಿಸಿ ತನ್ನ ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕು, ಅದರಲ್ಲಿ ಒಂದು ಭಾಗವನ್ನು ಮಾರಿ ತನ್ನ ಆರ್ಥಿಕ ಪರಿಸ್ಥಿತಿಯನ್ನು ಸಹಾ ಉತ್ತಮಪಡಿಸಿಕೊಳ್ಳಬಹುದು. ಆದ್ದರಿಂದ ಪೌಷ್ಟಿಕಾಂಶಗಳನ್ನು ಪಡೆಯುವ ವ್ಯವಸ್ಥೆಯನ್ನು ಹೆಚ್ಚು ಆದ್ಯತೆ ಕೊಟ್ಟು ಪ್ರಚಾರ ಮಾಧ್ಯಮದ ಮುಖಾಂತರ ಮಾಡಿ ರೈತನಿಗೆ ಹೆಚ್ಚು ತಿಳುವಳಿಕೆಕೊಟ್ಟು ತೋಟಗಾರಿಕೆಯನ್ನು ಹೆಚ್ಚು ಮಾಡುವುದಕ್ಕೆ ಅವಕಾಶ ಮಾಡಿಕೊಡ ಬೇಕೆಂದು ತೋಟಗಾರಿಕೆ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಚಾರ ಪಶುಸಂಗೋಪನಾ ಇಲಾಖೆಯ ಬಗ್ಗೆ ಹೇಳಬೇಕೆಂದರೆ ಇವತ್ತು ಕೋಳಿ ಮೊಟ್ಟೆಗಳಿಂದ ಅನೇಕ ಜನಗಳಿಗೆ ಪೌಷ್ಟಿಕಾಂಶ ಸಿಗುತ್ತಿದೆ. ಈಗ ಕರ್ನಾಟಕ ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಎಂಬುದು ಒಂದುಇದೆ. ಆದೇ ರೀತಿ ಒಂದು ಎಗ್ ಬೋರ್ಡ್ ಮಾಡಿದರೆ ಈ ಮೊಟ್ಟೆ ಗಳನ್ನು ತಯಾರು ಮಾಡತಕ್ಕದ್ದು ಕಂಟ್ರೋಲ್ ಮಾಡತಕ್ಕದ್ದು ಒಟ್ಟು ಜನಸಾಮಾನ್ಯರಿಗೆ ಅದನ್ನು

ಸುಲಭ ಬೆಲೆಯಲ್ಲಿ ದೊರಕಿಸಿಕೊಡತಕ್ಕಂಥ ವ್ಯವಸ್ಥೆ ಮಾಡಬಹುದು. ಆಡಲ್ಟ್ರೇಷನ್ ಆಗದೇ ಜನ ಸಾಮಾನ್ಯರಿಗೆ ಕಡಿಮೆ ಬೆಲೆಯಲ್ಲಿ ದೊರೆಯುತಕ್ಕಂಥ ಪೌಷ್ಟಿಕ ಆಹಾರ ಎಂದರೆ ಇದೊಂದೆ. ಆದ್ದರಿಂದ ಇದನ್ನು ಸಾಕಷ್ಟು ಉತ್ಪತ್ತಿ ಮಾಡಿ ಸುಲಭ ಬೆಲೆಯಲ್ಲಿ ದೊರಕಿಸಿಕೊಡುವುದಕ್ಕೆ ಎಗ್ ಬೋರ್ಡ್ ಅತ್ಯಾವಶ್ಯಕ. ಇದನ್ನು ಮಾನ್ಯ ಸಿದ್ಧರಾಮಯ್ಯನವರು ಮಾಡಬೇಕು. ಜೊತೆಗೆ ಸಂಚಾರಿ ಪಶುವೈದ್ಯಶಾಲೆಗಳನ್ನು ಅಂದರೆ ಮೊಬೈಲ್ ಯೂನಿಟ್‌ಗಳನ್ನು ಹೆಚ್ಚು ಮಾಡಿ ಪ್ರತಿಯೊಂದು ಹಳ್ಳಿಯಲ್ಲೂ ಕೂಡ ಪಶುವೈದ್ಯಕೀಯ ಸೌಲಭ್ಯವನ್ನು ಒದಗಿಸಬೇಕು. ಈಗ ನಮ್ಮ ರಾಜ್ಯದಲ್ಲಿರತಕ್ಕಂಥ ಎರಡು ಕೋಟಿ ಜಾನುವಾರುಗಳಿಗೆ ರೂರಲ್ ವೆಟರ್‌ನರಿ ಡಿಸ್‌ಪನ್ಸರಿ ಮತ್ತು ವೆಟರ್‌ನರಿ ಡಿಸ್ಪೆನ್ಸರಿಗಳ ಸೌಲಭ್ಯ ದೊರೆಯುತ್ತಿಲ್ಲ, ಅದಕ್ಕೋಸ್ಕರ ಮೊಬೈಲ್ ಯೂನಿಟ್‌ಗಳನ್ನು ಹೆಚ್ಚು ಮಾಡುವುದರ ಮುಖಾಂತರ ಹಳ್ಳಿಗೆ ಹೋಗಿ ರೈತರಿಗೆ ತಿಳುವಳಿಕೆಯನ್ನು ನೀಡಿ ಅಲ್ಲಿಯ ಜಾನುವಾರುಗಳಿಗೆ ಸಾಕಷ್ಟು ಔಷಧೋಪಚಾರಗಳನ್ನು ಮಾಡಿದರೆ ರೈತರಿಗೆ ಬೆನ್ನೆಲುಬಾಗಿರತಕ್ಕಂಥ ಜಾನುವಾರುಗಳಿಗೆ ರಕ್ಷಣೆಯನ್ನು ಕೊಡಬೇಕೆಂದು ಮಾನ್ಯ ಸಚಿವರಿಗೆ ತಿಳಿಯಪಡಿಸುತ್ತೇನೆ. ನಮ್ಮ ದೇಶದಲ್ಲಿ ಹಸಿರು ಕ್ರಾಂತಿಯಾಗಬೇಕು, ಕ್ಷೀರ ಕ್ರಾಂತಿಯಾಗಬೇಕು. ಅದಕ್ಕೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ನನ್ನ ವೈಯಕ್ತಿಕ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ANNOUNCEMENT

MR. DEPUTY SPEAKER.–I would like to read the message received from the Chairman, Legislative Council.

> " As required under Rule 114 of the Rules of Procedure and Conduct of Business in the Karnataka Legislative Council, I send herewith the Karnataka Co-operative Societies (Amendment) Bill, 1985, which has been agreed to by Legislative Council on 2nd September 1985 without any amendment.

Now the House stands adjourned to meet tomorrow at 9-00 A.M.

(The House adjourned at Eight of the Clock to meet again at Nine of the Cloek. Qn Tuesday the 3rd September, 1986)